ಸ್ಥಾಪನೆ : 1907

ದಿ ಬೆಂಗಳೂರು ಸಿಟಿ

ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ. 3, ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018

2024-25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ.
ಚಾರ್ಟರ್ಡ್ ಅಕೌಂಟೆಂಟ್ಸ್
ಬೆಂಗಳೂರು

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಬೆಂಗಳೂರು–18

ಇದರ 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

(ಹಣ ದುರುಪಯೋಗ ಹಾಗೂ ಗುರುತರವಾದ ನ್ಯೂನ್ಯತೆಗಳ ಬಗ್ಗೆ

ಪುಟ ಸಂಖ್ಯೆ: _____ – ಕಂಡಿಕೆ _____, ನ್ನು ಓದುವುದು)

ಭಾಗ–II

ಬ್ಯಾಂಕಿನ ಪರಿಚಯಾತ್ಮಕ ವಿವರಗಳು

1) ಬ್ಯಾಂಕಿನ ವಿವರಗಳು

1	ಬ್ಯಾಂಕಿನ ಹೆಸರು	ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
2	ಬ್ಯಾಂಕಿನ ವಿಳಾಸ	ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್,ಆಡಳಿತ ಕಛೇರಿ : ನಂ. 3, ಪಂಪಮಹಾಕವಿ ರಸ್ತೆ , ಚಾಮರಾಜಪೇಟೆ, ಬೆಂಗಳೂರು–560018
3	ಬ್ಯಾಂಕಿನ ನೋಂದಣಿ ಸಂಖ್ಯೆ / ದಿನಾಂಕ	ನೋಂದಣಿ ಸಂಖ್ಯೆ 314/cs.Encl 4, ದಿನಾಂಕ: 6/8.04.1907
4	ರಿಸರ್ವ್ ಬ್ಯಾಂಕಿನಂದ ಪಡೆದ ಬ್ಯಾಂಕಿಂಗ್ ಲೈಸನ್ಸ್ ಕ್ರಮಾಂಕ ಹಾಗೂ ದಿನಾಂಕ ಆಡಳಿತ ಕಛೇರಿ ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ :ಎಓ : 249, ದಿನಾಂಕ : 01.07.1997	
	1. ಪ್ರಧಾನ ಕಛೇರಿ ಶಾಖೆ : ಸಂಖ್ಯೆ : ಯುಬಿಡಿ : ಕೆಎ : 642ಪಿ 1986	
	2. ವಿಜಯನಗರ ಶಾಖೆ : ಸಂಖ್ಯೆ : ಎಸಿಡಿ:ಬಿಎಲ್ : 985, ದಿನಾಂಕ : 28.01.1980	
	3. ಜಯನಗರ ಶಾಖೆ : ಸಂಖ್ಯೆ : ಎಸಿಡಿ : ಬಿಎಲ್ : 986, ದಿನಾಂಕ : 28.01.1980	
	4. ಇಂದಿರಾನಗರ ಶಾಖೆ : ಸಂಖ್ಯೆ : ಡಿಬಿಬಿಡಿ : ಯುಬಿಡಿ : ಬಿಎಲ್ : 1473, ದಿನಾಂಕ : 20.08.1983	
	5. ಚಾಮರಾಜಪೇಟೆ ಪಶ್ಚಿಮ ಶಾಖೆ : ಸಂಖ್ಯೆ :ಯುಬಿಡಿ: ಬಿಎಲ್ : 1957, ದಿನಾಂಕ : 27.10.1987	
	6. ಶಾಂತಿನಗರ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 08, ದಿನಾಂಕ : 19.06.1992	
	7. ಮಹಾಲಕ್ಷ್ಮಿಪುರ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 58, ದಿನಾಂಕ : 02.05.1994	
	8. ಸಂಜಯನಗರ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 57, ದಿನಾಂಕ : 02.05.1994	
	9. ಪದ್ಮನಾಭನಗರ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 60, ದಿನಾಂಕ : 02.05.1994	
	10. ಕೋರಮಂಗಲ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 59, ದಿನಾಂಕ : 02.05.1994	
	11. ಆವಲಹಳ್ಳಿ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 423, ದಿನಾಂಕ : 17.02.2001	
	12. ಆರ್.ಟಿ.ನಗರ ಶಾಖೆ : ಸಂಖ್ಯೆ :ಯುಬಿಡಿ : ಬಿಜಿ : ಬಿಎಲ್ : 424, ದಿನಾಂಕ : 17.02.2001	
	13. ಜ್ಞಾನಜ್ಯೋತಿನಗರ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ :ಬಿಎಲ್ :526, ದಿನಾಂಕ : 17.04.2008	
	14. ಹೆಚ್.ಆರ್.ಬಿ.ಆರ್‌ಲೇಔಟ್ ಶಾಖೆ : ಸಂಖ್ಯೆ : ಯುಬಿಡಿ :ಬಿಜಿ : ಬಿಎಲ್ : 600, ದಿನಾಂಕ:25.04.2012	
	15. ಕೃಷ್ಣರಾಜಪುರಂ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 605, ದಿನಾಂಕ : 12.09.2012	

	16. ರಾಮನಗರ ಟೌನ್ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 615, ದಿನಾಂಕ : 13.12.2012	
	17. ಟಿ. ದಾಸರಹಳ್ಳಿ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್ : 650, ದಿನಾಂಕ : 23.08.2013	
	18. ಕುವೆಂಪುನಗರ ಶಾಖೆ–ಮೈಸೂರು : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್:652, ದಿನಾಂಕ : 23.08.2013	
	19. ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ : ಸಂಖ್ಯೆ:ಯುಬಿಡಿ:ಬಿಜಿ:ಬಿಎಲ್: 651, ದಿನಾಂಕ : 23.08.2013	
	20. ಯಲಹಂಕ ಶಾಖೆ : ಸಂಖ್ಯೆ:ಯುಬಿಡಿ:(ಬಿಎಲ್):3350/07–02–012/2015–16, ದಿನಾಂಕ : 30.03.2016	
	21. ಅಂಜನಾನಗರ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್: 768/2015–16, ದಿನಾಂಕ : 27.06.2016	
	22. ಕೋಣನಕುಂಟೆ ಶಾಖೆ : ಸಂಖ್ಯೆ : ಯುಬಿಡಿ : ಬಿಜಿ : ಬಿಎಲ್: 796/2016–17, ದಿನಾಂಕ : 28.12.2016	
5	ಬ್ಯಾಂಕಿನ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)	ಬ್ಯಾಂಕಿನ ಬೈಲಾ ಸಂಖ್ಯೆ : 3 ರ ಪ್ರಕಾರ ಬ್ಯಾಂಕಿನ ಕಾರ್ಯಕ್ಷೇತ್ರವು ಕರ್ನಾಟಕ ರಾಜ್ಯದ ವ್ಯಾಪ್ತಿಗೊಳಪಟ್ಟಿರುತ್ತದೆ.

2) ಬ್ಯಾಂಕಿನ ಮುಖ್ಯ ಉದ್ದೇಶಗಳು / ಚಟುವಟಿಕೆಗಳು

ಬ್ಯಾಂಕಿನ ಬೈಲಾ ಸಂಖ್ಯೆ: 5 ರನ್ವಯ ಸಂಸ್ಥೆಯು ಕೆಳಕಂಡ ಮುಖ್ಯ ಉದ್ದೇಶಗಳನ್ನು ಹೊಂದಿದೆ.

1	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುವಂತೆ) ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಹತೋಟಿಗೊಳಪಟ್ಟು ಬ್ಯಾಂಕಿಂಗ್ ವ್ಯವಹಾರ ನಡೆಸುವುದರೊಂದಿಗೆ ಇನ್ನಿತರ 25 ಉದ್ದೇಶಗಳನ್ನು ಹೊಂದಿರುತ್ತದೆ.

3) ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ : (31.03.2025 ರಲ್ಲಿದ್ದಂತೆ)

1	ಅಧ್ಯಕ್ಷರು	ಆವಲಹಳ್ಳಿ ಚಂದ್ರಪ್ಪ .ಆರ್	ದಿನಾಂಕ 05–01–2025 ರಂದು ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ರಚಿತಗೊಂಡಿದ್ದು ಕಾರ್ಯ ನಿರ್ವಹಿಸುತ್ತಿದೆ. ಹಾಗೆಯೇ ದಿನಾಂಕ 15–01–2025 ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಅಧ್ಯಕ್ಷರಾಗಿ ಚುನಾಯಿತರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.
2	ಉಪಾಧ್ಯಕ್ಷರು	ಡಾ. ದೇವರಾಜ್ ಟಿ.ಎಂ.	ದಿನಾಂಕ 05–01–2025 ರಂದು ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ರಚಿತಗೊಂಡಿದ್ದು ಕಾರ್ಯ ನಿರ್ವಹಿಸುತ್ತಿದೆ. ಹಾಗೆಯೇ ದಿನಾಂಕ 15–01–2025 ರಂದು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಉಪಾಧ್ಯಕ್ಷರಾಗಿ ಚುನಾಯಿತರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.
3	ಮುಖ್ಯ ಕಾರ್ಯ ನಿರ್ವಹಣಾ ಧಿಕಾರಿಗಳು	ಪಿ. ಮಂಜುನಾಥ	ಪ್ರಭಾರ ವ್ಯವಸ್ಥೆಯಲ್ಲಿ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

4) ಶಾಖೆಗಳು ಮತ್ತು ಅವುಗಳ ವಿಳಾಸ

ಕ್ರ. ಸ.	ಶಾಖೆಯ ಹೆಸರು	ಶಾಖೆಯ ವಿಳಾಸ	ಶಾಖಾ ವ್ಯವಸ್ಥಾಪಕರು
1	ಪ್ರಧಾನ ಕಛೇರಿ ಶಾಖೆ	ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18	ವಿಮಲ.ಹೆಚ್.ಟಿ
2	ವಿಜಯನಗರ ಶಾಖೆ	ನಂ. 7ಇ, 14ನೇ ಮುಖ್ಯರಸ್ತೆ (ಪೂರ್ವ), ವಿಜಯನಗರ, ಬೆಂಗಳೂರು–40	ಮಂಜುನಾಥ.ಎನ್
3	ಜಯನಗರ 9ನೇ ಬ್ಲಾಕ್ ಶಾಖೆ	ನಂ. 1432, 39ನೇ ಅಡ್ಡರಸ್ತೆ, 22ನೇ ಮುಖ್ಯರಸ್ತೆ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–41	ನಾಗರಾಜ ಎಲ್ (ಪ್ರಭಾರ)
4	ಇಂದಿರಾನಗರ ಶಾಖೆ	ನಂ. 29ಎ, 1ನೇ ಹಂತ, ಬಿನ್ನಮಂಗಲ, ಇಂದಿರಾನಗರ, (ಬಿ.ಎಂ.ಶ್ರೀ.ಸರ್ಕಲ್), ಬೆಂಗಳೂರು–38	ಎಂ.ಬಾಬು
5	ಚಾಮರಾಜಪೇಟೆ ಪಶ್ಚಿಮ ಶಾಖೆ	ನಂ. 68, 1ನೇ ಮಹಡಿ, ಸಿರಸಿ ವೃತ್ತ (ರಸ್ತೆ), ಚಾಮರಾಜಪೇಟೆ, ಬೆಂಗಳೂರು–18.	ರಾಮಚಂದ್ರ.ಪಿ.ಡಿ (ಪ್ರಭಾರ)
6	ಶಾಂತಿನಗರ ಶಾಖೆ	ನಂ. 375–31, ಹೇಚ್. ಸಿದ್ದಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಹೊಂಬೇಗೌಡ ನಗರ, ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆ ಎದರು, ಬೆಂಗಳೂರು–560 027.	ಸರಳಾ ಎ ಎಸ್
7	ಮಹಾಲಕ್ಷ್ಮೀಪುರ ಶಾಖೆ	ನಂ. 429, 12ನೇ ಕ್ರಾಸ್, ಪಶ್ಚಿಮ ಕಾರ್ಡ್ ರಸ್ತೆ, ಬಸವೇಶ್ವರನಗರ 2ನೇ ಹಂತ, (ಜಿ.ಡಿ.ನಾಯ್ಡು ಹಾಲ್ ರಸ್ತೆ), ಮಹಾಲಕ್ಷ್ಮೀಪುರ, ಬೆಂಗಳೂರು–86	ಮಂಜುನಾಥ.ಸಿ
8	ಸಂಜಯನಗರ ಶಾಖೆ	ನಂ. 8, 1ನೇ ಮಹಡಿ, (ಗೆದ್ದಲಹಳ್ಳಿ), ರಾಜಮಹಲ್ ವಿಲಾಸ್ 2ನೇ ಫೇಟ್ಟ, ಬೆಂಗಳೂರು–94	ರಾಮಾಂಜಿನಿ
9	ಪದ್ಮನಾಭನಗರ ಶಾಖೆ	ನಂ. 637, ಸಿ.ಜೆ. ವೆಂಕಟದಾಸ ರಸ್ತೆ, ಜಯನಗರ, ಹೆಚ್.ಬಿ.ಸಿ.ಎಸ್. 1ನೇ ಹಂತ, ಪದ್ಮನಾಭನಗರ, (ಎನ್.ಯು. ಆಸ್ಪತ್ರೆಯ ಎದುರು), ಬೆಂಗಳೂರು–560 070.	ನಾಗರಾಜ.ಸಿ
10	ಕೋರಮಂಗಲ ಶಾಖೆ	ನಂ. 6, (ಹಳೆ ನಂ. 5), "ಎಸ್.ಎನ್.ಪ್ರೈಡ್", 1ನೇ ಮಹಡಿ, 1ನೇ ಮುಖ್ಯರಸ್ತೆ, ಮಡಿವಾಳ, ಬೆಂಗಳೂರು–68	ಗಾಯತ್ರಿದೇವಿ.ಕೆ
11	ಆವಲಹಳ್ಳಿ ಶಾಖೆ	ನಂ. 64/47, 1ನೇ ಮಹಡಿ, 14ನೇ ಮುಖ್ಯರಸ್ತೆ, 50 ಅಡಿರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು–26	ರಂಗಸ್ವಾಮಿ.ಬಿ (ಪ್ರಭಾರ)
12	ಆರ್.ಟಿ.ನಗರ ಶಾಖೆ	ನಂ. 38, ಮೊದಲನೇ ಮಹಡಿ, 2ನೇ ಮುಖ್ಯರಸ್ತೆ, ಮನೋರಾಯನಪಾಳ್ಯ, ಚೋಳನಾಯಕನಹಳ್ಳಿ, ಬೆಂಗಳೂರು–32	ಬಿ.ಎಂ.ಚಂದ್ರಶೇಖರ್ (ಪ್ರಭಾರ)

13	ಜ್ಞಾನಜ್ಯೋತಿನಗರ ಶಾಖೆ	ನಂ. 1, ಮೊದಲನೆ ಮಹಡಿ, 2ನೇ ಕ್ರಾಸ್, ಉಲ್ಲಾಳ ಮುಖ್ಯರಸ್ತೆ, ಜ್ಞಾನಜ್ಯೋತಿನಗರ, ಬೆಂಗಳೂರು–56	ಜಯರಾಮು .ಎಂ
14	ಹೆಚ್.ಆರ್.ಬಿ.ಆರ್. ಲೇಔಟ್ ಶಾಖೆ	ನಂ. 50/2, BBMP ಖಾತಾ ಸಂಖ್ಯೆ : 330, 1ನೇ ಮಹಡಿ, ಕಮ್ಮನಹಳ್ಳಿ ಮುಖ್ಯರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು–84	ನಾಗರಾಜಮೂರ್ತಿ .ಎಂ
15	ಕೃಷ್ಣರಾಜಪುರಂ ಶಾಖೆ	ನಂ. 63/77, 1ನೇ ಮಹಡಿ, ರಾಜರಾಜೇಶ್ವರಿ ದೇವಸ್ಥಾನ ರಸ್ತೆ, ದೇವಸಂದ್ರ ಮುಖ್ಯರಸ್ತೆ, ಕೃಷ್ಣರಾಜಪುರಂ, ಬೆಂಗಳೂರು–36	ರಾಜಪ್ಪ .ಎಂ.ಎನ್
16	ರಾಮನಗರ ಟೌನ್ ಶಾಖೆ	ನಂ. 1363/2058, 1ನೇ ಮಹಡಿ, ರಾಮನಗರ ಬಸ್ ಸ್ಟಾಂಡ್ ಎದುರು, ಬಿ.ಎಂ.ರಸ್ತೆ, ರಾಮನಗರ ಟೌನ್, ರಾಮನಗರ	ಭಾಸ್ಕರ್ .ಕೆ.ಎಸ್ (ಪ್ರಭಾರ)
17	ಪೀಣ್ಯ–ದಾಸರಹಳ್ಳಿ ಶಾಖೆ	ನಂ. 1040/1, ಸರ್ವೆ ನಂ. 13, ದಾಸರಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ದಾಸರಹಳ್ಳಿ, (ದಾಸರಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ), ಬೆಂಗಳೂರು–560 057.	ಮಧುಮತಿ .ಎಂ.ಸಿ
18	ಕುವೆಂಪುನಗರ ಶಾಖೆ ಮೈಸೂರು ನಗರ	ನಂ. 830, 830/1, 830/2, 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, (ಅಕ್ಷಯ ಬಂಡಾರ ರಸ್ತೆ) ಕುವೆಂಪುನಗರ, ಮೈಸೂರು–570023	ಮೋಹನ್‌ಕುಮಾರ್ .ಕೆ.ಆರ್
19	ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿ ಶಾಖೆ	ನಂ. 81 ಮತ್ತು 82, ಸರ್ವೆ ನಂ. 63, ನಾಗನಾಥಪುರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು–68	ಸುಜಯ್‌ಕುಮಾರಿ.ಎಂ.ಬಿ (ಪ್ರಭಾರ)
20	ಯಲಹಂಕ ಶಾಖೆ	ನಂ. 796, ಎಂ.ಐ.ಜಿ ಎ ಕ್ರಾಸ್, ಎ ಸೆಕ್ಟರ್, 3ನೇ ಹಂತ, 3ನೇ ಪೇಸ್, ಯಲಹಂಕ ನ್ಯೂ ಟೌನ್, ಬೆಂಗಳೂರು–560 106	ಸಂತೋಷ ರೆಡ್ಡಿ .ಸಿ
21	ಅಂಜನಾನಗರ ಶಾಖೆ	ನಂ. 93/123, ಹೊಸಗೊಲ್ಲರಪಾಳ್ಯ, ಅಂಜನಾನಗರ, ಮಾಗಡಿ ಮೈನ್ ರೋಡ್, ಯಶವಂತಪುರ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು–560 091.	ಶಾಂತಲಕ್ಷ್ಮಿ .ಸಿ.ಜೆ (ಪ್ರಭಾರ)
22	ಕೋಣನಕುಂಟೆ ಶಾಖೆ	ನಂ. 27, ಸದಾನಂದಪ್ಪ ಲೇಔಟ್, 2ನೇ ಅಡ್ಡರಸ್ತೆ, ಚುಂಚಘಟ್ಟ, ಈಶ್ವರ ಲೇಔಟ್ ಬಸ್ ನಿಲ್ದಾಣದ ಹತ್ತಿರ, ಶ್ರೀಶಿವಶಕ್ತಿ ದೇವಸ್ಥಾನದ ಎದುರು, ಬೆಂಗಳೂರು–560 062.	ಸರಸ್ವತಿ .ಎಂ

ಲೆಕ್ಕ ಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು

5) ಲೆಕ್ಕ ಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ

ಕ್ರ.ಸ.	ಹೆಸರು	ಹುದ್ದೆ	ಕಛೇರಿ
1	ಪಿ ಮಂಜುನಾಥ	ಪ್ರಧಾನ ವ್ಯವಸ್ಥಾಪಕರು ಮುಖ್ಯಕಾರ್ಯನಿರ್ವಹಣಾಧಿಕಾರಿ, (ಪ್ರಭಾರ) ಮತ್ತು ಅವರ ಸಿಬ್ಬಂದಿ	ಆಡಳಿತ ಕಛೇರಿ

6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ

ಲೆಕ್ಕ ಪರಿಶೋಧಕರ ಹೆಸರು	ಮೆ॥ ಬಿ.ಆರ್.ಆರ್ ಅಂಡ್ ಕೋ
ಹುದ್ದೆ ಹಾಗೂ ವಿಳಾಸ	ಚಾರ್ಟರ್ಡ್ ಅಕೌಂಟೆಂಟ್ಸ್ ನಂ. 38, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, ಮಹಾಗಣಪತಿನಗರ, 1ನೇ ಘಟ್ಟ, 6ನೇ ಹಂತ, ರಾಜಾಜಿನಗರ, ಬೆಂಗಳೂರು–560 010
ಎಂಪಾನಲ್‌ಮೆಂಟ್ ನಂಬರ್	F-18/02/2013 (Catgory-A)
ಲೆಕ್ಕ ಪರಿಶೋಧನಾ ಅವಧಿ	ದಿನಾಂಕ 01.04.2023 ರಿಂದ ದಿನಾಂಕ 31.03.2024 ರವರೆಗೆ

7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ

ಲೆಕ್ಕ ಪರಿಶೋಧಕರ ಹೆಸರು	ಮೆ॥ ಬಿ.ಪಿ.ಎಸ್.ಎಸ್.ವೈ ಅಂಡ್ ಕೋ
ಹುದ್ದೆ ಹಾಗೂ ವಿಳಾಸ	ಚಾರ್ಟರ್ಡ್ ಅಕೌಂಟೆಂಟ್ಸ್ ನಂ. 277, ಯುನಿಟ್ 201, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018
ಎಂಪಾನಲ್‌ಮೆಂಟ್ ನಂಬರ್ / ನೊಂದಣಿ ಸಂಖ್ಯೆ	F-21/02/2013 (Category-A) FRN : 012443S
ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ	BCCB/AO/562/2024-25, ದಿನಾಂಕ 19.09.2024.
ಲೆಕ್ಕ ಪರಿಶೋಧನೆಯ ಆರಂಭದ ದಿನಾಂಕ	27–02–2025
ಲೆಕ್ಕ ಪರಿಶೋಧನೆಯ ಮುಕ್ತಾಯದ ದಿನಾಂಕ	12–06–2025
ಲೆಕ್ಕ ಪರಿಶೋಧನೆಗೆ ತೆಗೆದುಕೊಂಡ (ಮಾನವ) ದಿನಗಳು	220 (ಮಾನವ) ದಿನಗಳು

8) ಲೆಕ್ಕ ಪರಿಶೋಧನಾ ವರ್ಗೀಕರಣ :

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ವರದಿಯೊಂದಿಗೆ ಲಗತ್ತಿಸಿದೆ)

ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನಾ ವರ್ಗೀಕರಣ	"ಎ"
ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರ್ಗೀಕರಣ	"ಎ"

9) ಆಂತರಿಕ / ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಷೆ :

1	ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ?	ಸಂಸ್ಥೆಯು ವರದಿ ಸಾಲಿಗೆ ಆಂತರಿಕ ಲೆಕ್ಕಪರಿಶೋಧನೆ ನಡೆಸಲು ಕೆಳಕಂಡ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳನ್ನು ಶಾಖಾವಾರು ನೇಮಿಸಿ ಕ್ರಮವಿಡಲಾಗಿದೆ.
ಕ್ರ. ಸ.	**ಆಂತರಿಕ ಲೆಕ್ಕಪರಿಶೋಧಕರ (ಚಾರ್ಟರ್ಡ್ ಅಕೌಂಟೆಂಟ್ಸ್) ಹೆಸರು ಮತ್ತು ವಿಳಾಸ**	**ಶಾಖೆಗಳು**
1	**M/s. LINGARAJU & CO. CHARTERED ACCOUNTANTS No. 201 & 202, Second Floor Bindu Galaxy, 1st Main, West of Chord (Service) Road, Rajajinagar, Bangalore-560044. Ph : - 080-23502214, 080-23506184 Mobile : 9008807201**	**HRBR LAYOUT RAMANAGAR TOWN ANJANANAGAR JNANAJYOTHINAGAR**
2	**M/s. KAMALAKSHA & ASSOCIATES, No. 2185, 5th Block, Sir. M. Vishweshwaraiah Layout, Ullal Main Road, Jnana Bharathi Post, Bangalore-560 056**	**AVALAHALLI SHANTHINAGAR JAYANAGAR**
3	**M/s. GEETHA CHANDRAKANTH & CO. No. 36/36, 1st Floor, 59th Cross, 5th Block, Rajajinagar, Bangalore-10.**	**HEAD OFFICE VIJAYANAGAR INDIRANAGAR PADMANABHANAGAR**
4	**M/s. M.V. REDDY & ASSOCIATESNo. 25, 2nd Floor, Ambica Building, Avenue Road, Bangalore-02.**	**R.T. NAGAR KUVEMPUNAGAR (MYSURU) HOSUR ROAD - ELECTRONIC CITY SANJAYNAGAR**
5	**Dr. R. RajeshwariNo. 35, 1st Floor, 16th Main, Gandhi Bazar, Basavanagudi, Bangalore-560 004**	**K.R. PURAM KONANAKUNTE YELAHANKA T. DASARAHALLI**
6	**M/s. M.U.V. & CO. No. 106/1, 2nd Floor, PVR Arcade, Gandhi Bazar Main Road, Basavanagudi, Bangalore-04.**	**MAHALAKSHMIPURA KORMANGALA CHAMARAJPET (WEST) ADMINISTRATIVE OFFICE**
2	ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೇ?	ಹೌದು ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದ್ದು ಲೆಕ್ಕ ಪರಿಶೋಧನಾ ವರದಿಗಳನ್ನು ಸಲ್ಲಿಸಲಾಗುತ್ತಿದೆ.

3	ಲೆಕ್ಕ ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು	ಬ್ಯಾಂಕಿನ ಜಯನಗರ 9ನೇ ಬ್ಲಾಕ್ ಮತ್ತು ಪದ್ಮನಾಭನಗರ ಶಾಖೆಗಳಲ್ಲಿ, ಹಿಂದಿನ ಸಾಲುಗಳಲ್ಲಿ ನಡೆದ ನಕಲಿ ಚಿನ್ನಾಭರಣಗಳ ಆಧಾರದ ಸಾಲಕ್ಕೆ ಸಂಬಂಧಿಸಿದಂತೆ 34 ಪ್ರಕರಣಗಳಲ್ಲಿ ರೂ.73,75,588/– ಗಳ ಸಾಲದ ಬಗ್ಗೆ. ಹಿಂದಿನ ಸಾಲುಗಳಲ್ಲಿ ಬ್ಯಾಂಕಿನ ಪದ್ಮನಾಭನಗರ ಶಾಖೆಯಲ್ಲಿ ಶ್ರೀ. ಮಹೇಶ್‌ಕುಮಾರ್ ಬಿನ್ ಟಿ.ಆರ್.ಗಣೇಶ್‌ರವರ ಹೆಸರಿನಲ್ಲಿ ನೀಡಿದ ಸಾಲಗಳ ಪೈಕಿ ಮುಂದುವರೆದ ರೂ. 72.89 ಲಕ್ಷಗಳ ಸ್ಥಿರಾಸ್ತಿ ವಂಚನೆ ಪ್ರಕರಣವಾಗಿರುವ ಬಗ್ಗೆ. ಹಿಂದಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಬ್ಯಾಂಕಿನ ಸದಸ್ಯರಾದ ಶ್ರೀ.ಜಿ.ಕೆ.ರಾಮಚಂದ್ರ (ಸದಸ್ಯತ್ವ ಸಂಖ್ಯೆ ಆರ್–81379) ಎಂಬುವರಿಗೆ ದಿನಾಂಕ 17.10.2017 ರಂದು ಆಸ್ತಿ ಸಂಖ್ಯೆ 5/2, ಅಸೆಸ್‌ಮೆಂಟ್ ನಂ. 24/1, ಹಳೆ ಖಾತೆ ನಂ. 49, ಬಿಬಿಎಂಪಿ ಹಾಲಿ ಖಾತೆ 224/49/24/1/512, ವಲಗೆರೆ ಹಳ್ಳಿ ಗ್ರಾಮ, ಎಂ.ಟಿ.ಎಸ್ ಲೇಔಟ್, ಬಿಬಿಎಂಪಿ ವಾರ್ಡ್ ನಂ. 159, ಕೆಂಗೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಪೂರ್ವ–ಪಶ್ಚಿಮ : 31 ಅಡಿಗಳು ಮತ್ತು ಉತ್ತರ–ದಕ್ಷಿಣ : 50+54/2 ಅಡಿಗಳ ಸ್ಥಿರಾಸ್ತಿ ಆಧಾರ ಮೇಲೆ ರೂ.65.00 ಲಕ್ಷ ಸಾಲ ನೀಡಿರುವುದು ಮತ್ತು ದಿನಾಂಕ 06.12.2017 ರಂದು ಸ್ಥಿರಾಸ್ತಿ ಸಂಖ್ಯೆ 15, ಅಸೆಸ್‌ಮೆಂಟ್ ನಂ.24/1, ಹಳೆ ಖಾತೆ ನಂ. 49, ಬಿಬಿಎಂಪಿ ಹಾಲಿ ಖಾತೆ ನಂ. 233/49/24/1/15, ವಲಗೆರೆ ಹಳ್ಳಿ ಗ್ರಾಮ, ಎಂ.ಟಿ.ಎಸ್ ಲೇಔಟ್, ಬಿಬಿಎಂಪಿ ವಾರ್ಡ್ ನಂ. 159, ಕೆಂಗೇರಿ, ಬೆಂಗಳೂರು ದಕ್ಷಿಣ, ಪೂರ್ವ–ಪಶ್ಚಿಮ : 40 ಅಡಿಗಳು ಮತ್ತು ಉತ್ತರ–ದಕ್ಷಿಣ : 30 ಅಡಿಗಳ ಸ್ಥಿರಾಸ್ತಿಯ ಆಧಾರ ಮೇಲೆ ರೂ.49.00 ಲಕ್ಷ ಸಾಲ ನೀಡಿರುವುದು ಉಲ್ಲೇಖಿಸಿ ಸದಸ್ಯರ ಸದರಿ ಸಾಲಗಳು ದಿನಾಂಕ 07.05.2022 ರಂದು ಅನುತ್ಪಾದಕ ಸಾಲವಾದ ಕಾರಣ ಸಂಸ್ಥೆಯವರು SARFAESIA-2002 ಕಾಯಿದೆಯನ್ವಯ ವಸೂಲಾತಿ ಕ್ರಮ ಅನುಸರಿಸಿದಾಗ ನಂತರದಲ್ಲಿ ಸದರಿ ಆಸ್ತಿಗಳ ಒಡೆತನ ಸಾಲಗಾರರಿಗೆ ಇರುವುದಿಲ್ಲವೆಂದು ಕಂಡು ಬರಲಾಗಿ ಸಂಸ್ಥೆಯವರು ಸಾಲಗಾರರು ಮತ್ತು ಆತನ ಸಹೋದರರ ವಿರುದ್ಧ ಪೋಲಿಸ್ ದೂರು ದಾಖಲಿಸಿರುವುದನ್ನು ಸದರಿ ಪೋಲೀಸ್ ದೂರು ಚಾಲ್ತಿಯಲ್ಲಿರುವುದಾಗಿ ವರದಿ ಮಾಡಲಾಗಿತ್ತು. ಸಂಸ್ಥೆಯವರು ಈ ಸಾಲದ ಮಾಹಿತಿಯನ್ನು ವಂಚನಾ ಪ್ರಕರಣ ಎಂದು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ದಿನಾಂಕ 24.11.2023 ರಂದು ಮಾಹಿತಿ ನೀಡಿರುವುದು, ಸಾಲಗಾರರ ವಿರುದ್ಧ ದಾವಾ ಕ್ರಮ ಸಂಖ್ಯೆ (ARD/UBF/807/23-24 & ARD/UBF/806/23-24) ಜರುಗಿಸಿರುವುದು ಮತ್ತು

		ಸದರಿ ಸಾಲದ ಮೊಬಲಗನ್ನು ಅನುತ್ಪಾದಕ ಸಾಲಗಳಡಿಯಲ್ಲಿ ನಷ್ಟ ಆಸ್ತಿ ಎಂದು ಪರಿಗಣಿಸಿ ಸಂಬಂಧಿಸಿದಂತೆ ಪೂರ್ತಿ ಮೊಬಲಗಿಗೆ ಅವಕಾಶ ಕಲ್ಪಿಸಿರುವುದನ್ನು ವರದಿ ಮಾಡಲಾಗಿತ್ತು. 2024–25ರ ಅಂತ್ಯದಲ್ಲಿ ಶ್ರೀ.ಜಿ.ಕೆ.ರಾಮಚಂದ್ರ ರವರ ಸಾಲಗಳು ಮುಂದುವರೆದಿರುತ್ತವೆ.
4	ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ	ಸಾಲಗಾರರ ವಿರುದ್ಧ ಪೋಲಿಸ್ ಮತ್ತು ದಾವಾ ಕ್ರಮ ಇಡಲಾಗಿದೆ.
5	ಅಂತಹ ನ್ಯೂನತೆಗಳು ಮುಂದುವರೆದಿದೆಯೇ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು?	ಬ್ಯಾಂಕಿನ ಆಡಳಿತ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ 2023–24 ರ ಸಾಲಿನಲ್ಲಿ ನಕಲಿ ಚಿನ್ನಾಭರಣ ಆಧಾರ ಸಾಲಗಳು 34 ಪ್ರಕರಣಗಳಲ್ಲಿ ರೂ.73.76 ಲಕ್ಷಗಳು ಮತ್ತು ಒಂದು ವಂಚನಾ ಪ್ರಕರಣದ ಸ್ಥಿರಾಸ್ತಿ ಸಾಲ ರೂ. 72.89 ಲಕ್ಷಗಳು Technical Writeoff ಮಾಡಲು ತೀರ್ಮಾನಿಸುವ ಮೂಲಕ ಪುಸ್ತಕಗಳಿಂದ ತೆಗೆದಿರುವುದು ಕಂಡು ಬಂದಿದೆ. ಈ ಸಂಬಂಧದಲ್ಲಿ ಪೊಲೀಸ್ ಕ್ರಮ ಮತ್ತು ದಾವಾ ಕ್ರಮ ಮುಂದುವರೆದಿದ್ದು, ಅದರ ಪರಿಣಾಮವನ್ನು ಅನುಸರಿಸಿ ಸಾಲ ವಸೂಲಿ ಮಾಡಲು ಕ್ರಮವಹಿಸಲಾಗುವುದೆಂದು ತಿಳಿಸಿರುತ್ತಾರೆ.

ಆಂತರಿಕ ಹತೋಟಿ

ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗಸೂಚಿಗಳು / ಆದೇಶ/ಕೈಪಿಡಿಗಳ ಬಗ್ಗೆ	ಸಂಸ್ಥೆಯು ವರದಿ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧನೆ ನಡೆಸಲು ಆರು ಚಾರ್ಟರ್ಡ್ ಅಕೌಂಟೆಂಟ್‌ರವರುಗಳನ್ನು ಶಾಖಾವಾರು ನೇಮಿಸಿದ್ದು ಅವರುಗಳಿಂದ ಆಂತರಿಕ ಲೆಕ್ಕ ಪರಿಶೋಧನೆ ನಡೆಸಿ ತ್ರೈಮಾಸಿಕ ವರದಿಯನ್ನು ಪಡೆಯಲಾಗುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಹಾಗೆಯೇ ಸಹಾಯಕ ಪ್ರಧಾನ ವ್ಯವಸ್ಥಾಪಕರ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧಿಕಾರಿಯೊಬ್ಬರನ್ನು Head of Internal Audit (HIA) ಎಂದು ಗೊತ್ತುಪಡಿಸಿದ್ದು ಮತ್ತು ಶಾಖಾ ವ್ಯವಸ್ಥಾಪಕರ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧಿಕಾರಿಯೊಬ್ಬರನ್ನು ತಪಾಸಣಾ ಅಧಿಕಾರಿ ಎಂದು ಗುರುತಿಸಿ ಅವರುಗಳಿಗೆ ಆಂತರಿಕ ಲೆಕ್ಕ ಪರಿಶೋಧನೆಗೆ ಸಮಜಾಯಿಸಿ ವರದಿಗಳನ್ನು ಶಾಖಾ ವ್ಯವಸ್ಥಾಪಕರುಗಳಿಂದ ಪಡೆದು ಲೆಕ್ಕ ಪರಿಶೋಧನಾ ಉಪಸಮಿತಿ ಮುಂದೆ ಮಂಡಿಸಲು ಮತ್ತು ಆಗಿಂದಾಗ್ಗೆ ಶಾಖೆಗಳ ನಗದು / ಆಧಾರ ಮಾಡಿರುವ ಚಿನ್ನಾಭರಣಗಳು / ದಾಖಲೆಗಳ ನಿರ್ವಹಣೆ, ಸುಸ್ತಿ ಕ್ರಮ ಅಳವಡಿಕೆ ಇತ್ಯಾದಿ

	ಪರಿಶೀಲಿಸಲು ಸೂಚಿಸಿ ನಿಯೋಜಿಸಲಾಗಿದೆ. ಸದರಿ ಚಾರ್ಟರ್ಡ್ ಅಕೌಂಟೆಂಟ್ ರವರುಗಳು ಸಂಸ್ಥೆಯ ಎಲ್ಲಾ ಶಾಖೆಯ ವ್ಯವಹಾರಗಳ ಆಂತರಿಕ ಲೆಕ್ಕ ಪರಿಶೋಧನೆ ನಡೆಸುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಈ ಸಂಬಂಧದಲ್ಲಿ ಅವಶ್ಯಕವಿರುವ ಸೂಚನೆಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಆಗಿಂದಾಗ್ಗೆ ನೀಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಸಂಸ್ಥೆಯು ಸಹಕಾರ ಸಂಘಗಳ ರಿಜಿಸ್ಟ್ರಾರ್ ರವರಿಂದ ಅನುಮೋದನೆಗೊಂಡ ಬೈಲಾ ನಿಯಮಾವಳಿಗಳು, ಆಡಳಿತ ಮಂಡಳಿಯಿಂದ ಅನುಮೋದನೆಗೊಂಡ ಠೇವಣಿ ನಿಯಮಗಳು ಮತ್ತು ಸಾಲ ನಿಯಮಾವಳಿಗಳ ಕೈಪಿಡಿಯನ್ನು ಶಾಖಾ ಮಟ್ಟದಲ್ಲಿ ಇಡಲಾಗಿದೆ. ಇದರೊಂದಿಗೆ ಸುತ್ತೋಲೆಗಳ ಮೂಲಕ ನೀಡಲಾಗುವ ಸೂಚನೆಗಳನ್ನು ಸಹ ಶಾಖಾ ಮಟ್ಟದಲ್ಲಿ ಇಡಲಾಗಿದೆ.
ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ	ಬ್ಯಾಂಕಿನ ಎಲ್ಲಾ ವ್ಯವಹಾರಗಳನ್ನು ಕೋರ್‌ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಗಣಕೀಕರಣಗೊಳಿಸಿದ್ದು ಅವುಗಳ ಮೂಲಕ ಲೆಕ್ಕ ಪತ್ರಗಳ ಸರಿದೂಗಿಸುವಿಕೆಯನ್ನು (ಸಮನ್ವಯ) ನಡೆಸಲಾಗುತ್ತಿದೆ.
ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ / ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ	ಬ್ಯಾಂಕಿನ ಲೆಕ್ಕ ಪತ್ರಗಳ ಸರಿದೂಗಿಸುವಿಕೆಯನ್ನು, ಸಮನ್ವಯ ಪಟ್ಟಿ ತಯಾರಿಕೆಯನ್ನು ಗಣಕೀಕರಣ ವ್ಯವಸ್ಥೆ ಮೂಲಕ ನಿಯಂತ್ರಿಸಲಾಗುತ್ತಿದೆ. ಇದನ್ನು ಸಂಬಂಧಿಸಿದ ಮೇಲ್ವಿಚಾರಕ ಅಧಿಕಾರಿಗಳು ದೃಢೀಕರಿಸುವ ಪದ್ಧತಿ ಜಾರಿಯಲ್ಲಿದೆ.
ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ	ಲೆಕ್ಕ ಪತ್ರಗಳ ಸರಿದೂಗಿಸುವಿಕೆ / ಸಮನ್ವಯ ಪಟ್ಟಿಗಳ ದೃಢೀಕರಣಗಳನ್ನು ಲೆಕ್ಕ ಪರಿಶೋಧನಾ ಉಪಸಮಿತಿ / ಆಡಳಿತ ಮಂಡಳಿಯ ಮುಂದೆ ಮಂಡಿಸಲಾಗುತ್ತಿದೆ.

ಜಾಗರೂಕತೆ

ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ.	ವರದಿ ಸಾಲಿನಲ್ಲಿ ಗುರುತರ ವಂಚನೆ ಪ್ರಕರಣಗಳು ಇರುವುದಿಲ್ಲ.
ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ	ಮೇಲೆ ವಿವರಿಸಿದಂತೆ
ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ	ವರದಿ ಸಾಲಾಂತ್ಯಕ್ಕೆ ರೂ.17,44,03,699.01 ಗಳ ಸಾಮಾನ್ಯ ಅಮಾನತ್ತು ಮೊಬಲಗನ್ನು ಮತ್ತು ನಿಶ್ಚಿತ ಠೇವಣಿ ಬಡ್ಡಿ ಪಾವತಿ ಸಂಬಂಧ ಅಮಾನತ್ತು ರೂ.5,599.00 ಸಂಸ್ಥೆಯು ಮರುಪಾವತಿಸಬೇಕಾಗಿದ್ದು, ಈ ಬಗ್ಗೆ ತಯಾರಿಸಿರುವ

	ಕುಳುವಾರು ಪಟ್ಟಿಯ ಮೊಬಲಗು ಆಸ್ತಿ–ಜವಾಬ್ದಾರಿ ತ:ಖ್ತೆಯ ಮೊಬಲಗಿನೊಂದಿಗೆ ತಾಳೆ ಇರುತ್ತದೆ. ಈ ಲೆಕ್ಕಗಳ ಖಾತೆಗಳನ್ನು ಖೈದುಗೊಳಿಸಲು ಕ್ರಮವಿಡುವುದು. ವರದಿ ಸಾಲಿನಲ್ಲಿ ಸಾಮಾನ್ಯ ಅಮಾನತ್ತು, ಷೇರು ಅಮಾನತ್ತು ಮತ್ತು ನಿಶ್ಚಿತ ಠೇವಣಿ ಬಡ್ಡಿ ಧನಾದೇಶ ಪಾವತಿ ಅಮಾನತ್ತು ಜವಾಬ್ದಾರಿಗಳ ಬಾಬ್ತು ಒಟ್ಟು ರೂ. 84,90,08,104.04 ಗಳು ಪಾವತಿಯಾಗಿದ್ದು, ಪಾವತಿಗಳು ಕ್ರಮಬದ್ಧವಾಗಿರುವುದು ಕಂಡು ಬಂದಿದೆ.
ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ದತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಾಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು.	ಈ ಖಾತೆಗಳ ಪಾವತಿ ಮತ್ತು ಬಾಕಿಗಳನ್ನು ವಿವರವಾಗಿ ಪರಿಶೀಲಿಸಲಾಗಿದ್ದು ಕ್ರಮವಾಗಿರುವುದು ಕಂಡು ಬಂದಿದೆ. ಬ್ಯಾಂಕು ಪ್ರಸಕ್ತ ವರದಿ ಸಾಲಿನಲ್ಲಿ ಅಮಾನತ್ತು ಜವಾಬ್ದಾರಿ ಲೆಕ್ಕಗಳ ಖಾತೆಗಳಲ್ಲಿ ನಡೆಸಿರುವ ಜಮಾ–ಖರ್ಚುಗಳನ್ನು ಪರಿಶೀಲಿಸಿದ್ದು ಕ್ರಮಬದ್ಧ ವಾಗಿರುವುದನ್ನು ದೃಢೀಕರಿಸಿಕೊಳ್ಳಲಾಗಿದೆ.

ಸಮಾಧಾನ : ಅಮಾನತ್ತು ಲೆಕ್ಕಗಳನ್ನು ಖೈದುಗೊಳಿಸಲು ಕ್ರಮವಿರಿಸಿದೆ.

10) ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ

ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರುಪಡಿಸಿದ್ದಾರೆಯೇ?

ಎ	ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ	ಹೌದು
ಬಿ	ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; (ಸಹಕಾರಿ ವರ್ಷಾಂತ್ಯಕ್ಕೆ ಆಂತರಿಕ ಲೆಕ್ಕ ಪರಿಶೋಧಕರು / ಆಡಳಿತ ಕಛೇರಿಯಿಂದ ನಿಯೋಜಿತಗೊಂಡ ತನಿಖಾಧಿಕಾರಿಗಳು ಶಾಖೆಯಲ್ಲಿನ ನಗದು ಮತ್ತು ಅಡಮಾನ ಮಾಡಿದ ಒಡವೆಗಳನ್ನು ಪರಿಶೀಲಿಸಿ ದೃಢೀಕರಿಸಿದ್ದು, ಆಡಳಿತ ಮಂಡಳಿ ಸದಸ್ಯರು ಅನುಮೋದಿಸಿರುತ್ತಾರೆ)	ಹೌದು
ಸಿ	ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; (ಸಂಸ್ಥೆಯು ಇತರೆ ಬ್ಯಾಂಕುಗಳಲ್ಲಿ ಹೊಂದಿರುವ ಚಾಲ್ತಿ ಖಾತೆಗಳು ಮತ್ತು ಠೇವಣಿಗಳ ಶಿಲ್ಕು ವಿವರಗಳನ್ನು ಪಾಸು ಪುಸ್ತಕ / ಬಾಂಡ್‌ನೊಂದಿಗೆ ಹೋಲಿಸಿ ದೃಢೀಕರಿಸಿ ಕೊಳ್ಳಲಾಗಿದ್ದು ಅದರ ದೃಢೀಕರಣ ತ:ಖ್ತೆಗಳು ವರದಿಯೊಂದಿಗೆ ಲಗತ್ತಿಸಿದೆ)	ಹೌದು
ಡಿ	ಸದಸ್ಯತ್ವ ಮತ್ತು ಷೇರು ಷೆಡ್ಯೂಲು;	ಹೌದು
ಇ	ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ;	ಹೌದು
ಎಫ್	ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;	ಹೌದು
ಜಿ	ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;	ಹೌದು
ಹೆಚ್	ತಗಾದೆ ವಸೂಲಿ ಮತ್ತು ಉಳಿಕೆ (ಬಾಕಿ) ತಃಖ್ತೆ;	ಹೌದು
ಐ	ಸುಸ್ತಿದಾರರ ಸದಸ್ಯರ ಪಟ್ಟಿ;	ಹೌದು

ಜೆ	ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ ;	ಹೌದು
ಕೆ	ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು;	ಹೌದು
ಎಲ್	ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು;	ಹೌದು
ಎಂ	ಸಾಲ ದೃಢೀಕರಣ ತಃಖ್ತೆಗಳು;	ಹೌದು
ಎನ್	ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;	ಹೌದು
ಒ	ಮೂರು ಅಥವಾ ಹೆಚ್ಚು ಆಡಳಿತ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು;	ಹೌದು
ಪಿ	ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು;	ಹೌದು
ಕ್ಯೂ	ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು;	ಹೌದು
ಆರ್	ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ;	ಹೌದು
ಎಸ್	ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;	ಹೌದು
ಟಿ	ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು;	ಹೌದು
ಯು	ಮೀಸಲು ಇತರೆ ನಿಧಿಗಳ ಷೆಡ್ಯೂಲು;	ಹೌದು
ವಿ	ಠೇವಣಿದಾರರ ಷೆಡ್ಯೂಲು;	ಹೌದು
ಡಬ್ಲ್ಯೂ	ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು;	ಹೌದು
ಎಕ್ಸ್	ಅಖೈರು ದಾಸ್ತಾನಿನ ಷೆಡ್ಯೂಲು;	ಹೌದು
ವೈ	ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗಾವಾರು;	ಹೌದು
ಝೆಡ್	ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು;	ಹೌದು

11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ

ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ?

ಸಂಸ್ಥೆಯು 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಪತ್ರ ಸಂಖ್ಯೆ: ಬಿಸಿಸಿಬಿ/ಎಓ/555/2024–25, ದಿನಾಂಕ: 17.09.2024 ರಲ್ಲಿ ಸಹಕಾರ ಸಂಘಗಳ ನಿಬಂಧಕರುಗಳಿಗೆ ಸಲ್ಲಿಸಿರುತ್ತಾರೆ.

2) ಗಂಭೀರ ಸ್ವರೂಪದ ಅಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.

ಕ್ರ. ಸ.	ಪುಟ ಸಂಖ್ಯೆ	ಕಂಡಿಕೆ ಸಂಖ್ಯೆ	ನ್ಯೂನತೆಯ ವಿವರ	ನೀಡಿದ ಸಮಜಾಯಿಷಿ	ಪ್ರಸ್ತುತ ಸ್ಥಿತಿ
1	49	11	ನಕಲಿ ಚಿನ್ನಾಭರಣ ಆಧಾರ ಸಾಲಗಳು 34 ಪ್ರಕರಣಗಳಲ್ಲಿ ರೂ. 73.76 ಲಕ್ಷಗಳು ಬಗ್ಗೆ.	ಪೋಲಿಸ್ ದೂರು ಕ್ರಿಮಿನಲ್ ವ್ಯಾಜ್ಯ ಹಾಗೂ ದಾವಾ ಕ್ರಮವಿಡುವ ಮೂಲಕ ವಸೂಲಿಗೆ ಅಗತ್ಯ ಕ್ರಮವಹಿಸಿದೆ.	ಬ್ಯಾಂಕಿನ ಆಡಳಿತ ಮಂಡಳಿಯು ಹಿಂದಿನ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಸದರಿ ಸಾಲಗಳನ್ನು Technical Write off ಮಾಡುವ ಮೂಲಕ ಪ್ರಸ್ತಕದಿಂದ ತೆಗೆದಿರುವುದು ಕಂಡು ಬಂದಿದೆ. ಸಂಸ್ಥೆಯವರು ಈ ಸಾಲಗಳನ್ನು Technical Write off ಮಾಡಿರುವ ಕಾರಣ ಸಾಲಗಾರರು ಸಾಲ ಮರುಪಾವತಿಸಬೇಕಾದ ಜವಾಬ್ದಾರಿ ಮುಂದುವರೆದಿದ್ದು ಸಂಬಂಧಿಸಿದಂತೆ ಮೊಬಲಗುಗಳನ್ನು ಸಾಲಗಾರರಿಂದ ವಸೂಲಿ ಮಾಡಲು ಕ್ರಮ ಅನುಸರಿಸಬೇಕಿದೆ. ಸಾಲಗಾರರ ವಿರುದ್ಧ ದಾವಾ ಕ್ರಮ ಅನುಸರಿಸಿ ಅಮಲ್ಜಾರಿ ಆದೇಶ ಪಡೆಯಲಾಗಿದ್ದು ಸಾಲ ವಸೂಲಿ ಕ್ರಮ ತೆಗೆದುಕೊಳ್ಳ ಬೇಕಿದೆ.
2	49	11	ಬ್ಯಾಂಕಿನ ಪದ್ಮನಾಭನಗರ ಶಾಖೆಯಲ್ಲಿ ಶ್ರೀ. ಮಹೇಶ್‌ಕುಮಾರ್ ಹೆಸರಿನ ವಂಚನೆ ಪ್ರಕರಣ ಸಾಲ ರೂ. 72.89 ಲಕ್ಷ ಬಗ್ಗೆ.	ವಸೂಲಾತಿಗೆ ಅಗತ್ಯ ಕ್ರಮ ವಹಿಸಿದೆ.	ಬ್ಯಾಂಕಿನ ಆಡಳಿತ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಸದರಿ ಸಾಲವನ್ನು ಹಿಂದಿನ ಸಾಲಿನಲ್ಲಿ Technical write off ಮಾಡುವ ಮೂಲಕ ಪುಸ್ತಕದಿಂದ ತೆಗೆದಿರುವುದು ಕಂಡು ಬಂದಿದೆ. ಸಂಸ್ಥೆಯವರು ಈ ಸಾಲಗಳನ್ನು Technical Write off ಮಾಡಿರುವ ಕಾರಣ ಸಾಲಗಾರರು ಸಾಲ ಮರುಪಾವತಿಸಬೇಕಾದ ಜವಾಬ್ದಾರಿ ಮುಂದುವರೆದಿದ್ದು ಸಂಬಂಧಿಸಿದಂತೆ ಮೊಬಲಗುಗಳನ್ನು ಸಾಲಗಾರರಿಂದ ವಸೂಲಿ ಮಾಡಲು ಕ್ರಮ ಅನುಸರಿಸಬೇಕಿದೆ. ಪೋಲಿಸ್ ದೂರು ವಿಚಾರಣಾ ಕ್ರಮ ಮುಂದುವರೆದಿದ್ದು ಸಾಲಗಾರನನ್ನು ಪತ್ತೆ

					ಹಚ್ಚಿ ಸಾಲ ವಸೂಲಾತಿ ಮಾಡಲು ಕ್ರಮ ಇರಿಸಲಾಗುವುದು ಎಂದು ಸಂಸ್ಥೆಯವರು ತಿಳಿಸಿರುತ್ತಾರೆ.
3	46	9	ಬ್ಯಾಂಕಿನ ಜ್ಞಾನಜ್ಯೋತಿನಗರ ಶಾಖೆಯಲ್ಲಿ ಶ್ರೀ. ಜಿ.ಕೆ. ರಾಮಚಂದ್ರ ಹೆಸರಿನ ವಂಚನೆ ಪ್ರಕರಣ ಸಾಲ ಒಟ್ಟು ರೂ.141.60 ಲಕ್ಷ ಬಗ್ಗೆ	ಪೊಲೀಸ್ ದೂರು ದಾಖಲಿಸಿ ಮತ್ತು ದಾವಾ ಕ್ರಮ ಜರುಗಿಸಿ ವಸೂಲಾತಿಗೆ ಕ್ರಮವಹಿಸಿದೆ.	ಭಾರತೀಯ ರಿಸರ್ವ್ ಬ್ಯಾಂಕಿನ IRAC ನಿರ್ದೇಶನಗಳನ್ನು ಅನುಸರಿಸಿ ಸದರಿ ಸಾಲಗಳನ್ನು ನಷ್ಟ ಸಾಲಗಳೆಂದು ಗುರುತಿಸಿ ಸಾಲದ ಮೊಬಲಗಿಗೆ ಪೂರ್ಣ ಅವಕಾಶ ಕಲ್ಪಿಸಿದೆ. ಸಂಸ್ಥೆಯವರು ಸಾಲಗಾರರನ್ನು ಸಂಪರ್ಕಿಸಿದ್ದು ಪೋಲಿಸ್ ದೂರು ಕ್ರಮದೊಂದಿಗೆ ಸಾಲ ವಸೂಲಾತಿ ಮಾಡಲಾಗುವುದೆಂದು ತಿಳಿಸಿರುತ್ತಾರೆ.

ಸಮಾಧಾನ : Technical Write off ಮಾಡಿರುವ ನಕಲಿ ಚಿನ್ನಾಭರಣ ಆಧಾರ ಸಾಲಗಳು ಮತ್ತು ವಂಚನೆ ಪ್ರಕರಣದ ಸ್ಥಿರಾಸ್ತಿ ಆಧಾರ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

12) ಸಹಕಾರ ಸಂಘಕ್ಕೆ / ಸಹಕಾರಿಗೆ ಅನ್ವಯಿಸುವ ಕಾನೂನುಗಳ ಚಾಲನೆ ಅಥವಾ ಉಲ್ಲಂಘನೆ ಕುರಿತು

(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ)

1	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ	ಪಾಲಿಸಲಾಗುತ್ತಿದೆ.
2	ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ?	ಅನುಸರಿಸಲಾಗುತ್ತಿದೆ.
3	ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ	ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಕಾರ್ಯ ನಿರ್ವಹಿಸುತ್ತಿದೆ
4	ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ	ಇರುವುದಿಲ್ಲ.
5	ಸಹಕಾರ ಇಲಾಖೆ ಅಥವಾ ಆರ್.ಬಿ.ಐ.ನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ	ದಿನಾಂಕ 31.03.2024 ಅವಧಿ ಅಂತ್ಯಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣೆಯು ದಿನಾಂಕ 30.12.2024 ರಿಂದ 15.01.2025 ದಿನಾಂಕದವರೆಗೆ ನಡೆದಿದ್ದು ಸಂಬಂಧಿಸಿದಂತೆ ತಪಸಣಾ ವರದಿ ಸ್ವೀಕರಿಸಿದ್ದು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಅನುಪಾಲನಾ ವರದಿ ಸಲ್ಲಿಸಿರುವುದು ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣಾಧಿಕಾರಿಗಳು ದಿನಾಂಕ 31.03.2024 ರಂದಿಗೆ ಸಂಸ್ಥೆಯು ಗುರುತಿಸಿದ್ದ ಉತ್ಪಾದಕ ಸಾಲಗಳಲ್ಲಿ ವರ್ಷಾಂತ್ಯ 2023–24 ರಂದಿಗೆ

		ಸಂಸ್ಥೆಯು ಗುರುತಿಸಿದ್ದ ಅನುತ್ಪಾದಕ ಸಾಲಗಳು ರೂ. 143.67 ಕೋಟಿಗಳನ್ನು ರೂ. 150.36 ಕೋಟಿಗಳಿಗೆ ಹೆಚ್ಚಿಸಲಾಗಿರುವುದು ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕು ತಪಸಾಣಾಧಿಕಾರಿಗಳು 2023–24 ರ ಸಾಲಿನ ವರ್ಷಾಂತ್ಯಕ್ಕೆ ಬ್ಯಾಂಕಿನ ಒಟ್ಟು ಅನುತ್ಪಾದಕ ಸಾಲಗಳನ್ನು ಶೇಕಡ 11.28 ಗಳಿಗೆ ಮತ್ತು ನಿವ್ವಳ ಅನುತ್ಪಾದಕ ಸಾಲಗಳನ್ನು ಶೇಕಡ ಶೂನ್ಯಕ್ಕೆ ಇರಿಸಿರುವುದು ಕಂಡು ಬಂದಿದೆ. ಸಾಲಾಂತ್ಯ 2021–22 ರಂದಿಗೆ ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲಗಳು ಶೇಕಡ 12.58 ಇದ್ದ ಕಾರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನವರು ಸಂಸ್ಥೆಗೆ Supervisory Action Frame Work (SAF) ದಿನಾಂಕ 17.03.2023 ರಿಂದ ಜಾರಿ ಮಾಡಿದ್ದನ್ನು ಸಂಸ್ಥೆಯು ನಿವ್ವಳ ಅನುತ್ಪಾದಕ ಸಾಲಗಳು 2023–24 ಸಾಲಾಂತ್ಯಕ್ಕೆ ಶೇಕಡ ಶೂನ್ಯ ಇರುವುದನ್ನು ಪರಿಗಣಿಸಿ ಪತ್ರ ಸಂಖ್ಯೆ BLR.DOS.SSMS.NO.S114/12.08.012/ 2025-26, ದಿನಾಂಕ 05.05.2025 ರ ಮುಖಾಂತರ ಬ್ಯಾಂಕಿಗೆ ವಿಧಿಸಿದ್ದ SAF ನಿಯಮಗಳನ್ನು ಹಿಂತೆಗೆದಿರುವುದು ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕು ತಪಾಸಣಾ ವರದಿಯಲ್ಲಿ ಬ್ಯಾಂಕು Compliance Function ಗೆ ಸಂಬಂಧಿಸಿದಂತೆ ಅಗತ್ಯ ಸಿಬ್ಬಂದಿ ನೇಮಿಸಲು ಮತ್ತು ಹಿರಿಯ ಅಧಿಕಾರಿಗಳ ನೇಮಕ ಬಗ್ಗೆ Succession Planning ಅಳವಡಿಸಿಕೊಳ್ಳಲು ಸೂಚಿಸಿರುತ್ತಾರೆ.

ಭಾಗ – III

ಬ್ಯಾಂಕಿನ ವ್ಯಾವಹಾರಿಕ ವಿವರಗಳು

13) ದಿನಾಂಕ 31–03–2025 ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

ಸದಸ್ಯತ್ವ	ಸಾಮಾನ್ಯ ಸದಸ್ಯತ್ವ		ನಾಮಮಾತ್ರ ಸದಸ್ಯತ್ವ		ಸಹ ಸದಸ್ಯತ್ವ	
	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು
ವರ್ಷಾರಂಭದಲ್ಲಿ ಇದ್ದ ಸದಸ್ಯರು	80048	78165	10071	9870	---	---
ಹೊಸದಾಗಿ ಸದಸ್ಯತ್ವ ಪಡೆದವರು	2451	3123	1692	1644	---	---
ಸದಸ್ಯತ್ವದಿಂದ ಕಡಿಮೆ ಆದವರು	1169	1240	1624	1443	---	---
ಸಾಲಾಖ್ಯೆರಿಗೆ ಇರುವ ಸದಸ್ಯರು	81330	80048	10139	10071	---	---

ಸದಸ್ಯತ್ವದ ಬಗ್ಗೆ ವಿಮರ್ಶೆ	ಸದಸ್ಯತ್ವದ ಅಂಕಿ ಅಂಶಗಳನ್ನು ಗಮನಿಸಿದಲ್ಲಿ ಅರ್ಹರಾದವರಿಗೆ ಸಂಸ್ಥೆಯ ಸದಸ್ಯತ್ವವನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿರುವುದು ಮತ್ತು ಸಂಸ್ಥೆಯಿಂದ ಆರ್ಥಿಕ ಸಹಾಯ ಪಡೆದು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಹಕಾರ ನೀಡುವುದರೊಂದಿಗೆ ಸಂಸ್ಥೆಯ ಉದ್ದೇಶಗಳ ಈಡೇರಿಕೆಯ ಬಗ್ಗೆ ಹೆಚ್ಚು ಗಮನಹರಿಸಿರುವುದು ಕಂಡು ಬಂದಿದೆ. ಸಂಸ್ಥೆಯು ಎಲ್ಲಾ ವರ್ಗದವರಿಗೂ ಸಹಕಾರ ನಿಯಮಗಳನ್ನು ಅನುಸರಿಸಿ ಸದಸ್ಯತ್ವವನ್ನು ನೀಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಪ್ರಸಕ್ತ ಸಾಲಿನ ಅಂತ್ಯಕ್ಕೆ ಹಿಂದಿನ ಸಾಲಿಗೆ ಹೋಲಿಸಿದಾಗ ಬ್ಯಾಂಕಿನಲ್ಲಿ ಸದಸ್ಯತ್ವದ ಪ್ರಗತಿ ಶೇಕಡ 1.60 ರಷ್ಟು ಹೆಚ್ಚಾಗಿದೆ. ದಿನಾಂಕ 28.01.2002 ರಲ್ಲಿ ನಡೆದ ಆಡಳಿತ ಮಂಡಳಿ ನಿರ್ಣಯದಂತೆ ಅದುವರೆಗೂ ಬ್ಯಾಂಕಿನಲ್ಲಿದ್ದ ಎಲ್ಲಾ ಸಹ ಸದಸ್ಯರುಗಳನ್ನು ಬ್ಯಾಂಕಿನ ಸದಸ್ಯರನ್ನಾಗಿ ಸೇರ್ಪಡೆಗೊಳಿಸಿದ್ದು ತದನಂತರ ಬ್ಯಾಂಕಿನಲ್ಲಿ ಯಾವುದೇ ಸಹಸದಸ್ಯತ್ವ ನೀಡಿಲ್ಲದಿರುವುದು ಕಂಡು ಬಂದಿದೆ. ಬ್ಯಾಂಕಿನ ಉಪನಿಯಮ ಸಂಖ್ಯೆ : 12 ರನ್ವಯ ಷೇರು ದೃಢೀಕರಣ ಪತ್ರಗಳನ್ನು ಸದಸ್ಯರುಗಳಿಗೆ ನೀಡಲು ಬ್ಯಾಂಕು ಕ್ರಮ ಕೈಗೊಂಡಿದ್ದು ಎಲ್ಲಾ ಸದಸ್ಯರುಗಳು ಷೇರು ದೃಢೀಕರಣ ಪತ್ರ ಪಡೆದಿರುವುದಿಲ್ಲ. ಸಂಸ್ಥೆಯು ಚಿನ್ನಾಭರಣ ಆಧಾರ ಸಾಲ ರೂ. 1,00,000/–ಗಳ ವರೆವಿಗೆ ಮತ್ತು ಸದಸ್ಯರ ಸ್ಥಿರಾಸ್ತಿ ಆಧಾರ ಸಾಲಗಳಿಗೆ ಸಂಬಂಧಿಸಿದಂತೆ ವರಮಾನ ಹೊಂದಿದ ಅವರ ಕುಟುಂಬದ ಸದಸ್ಯರುಗಳ ಜಾಮೀನಿಗೆ ಸಂಬಂಧಿಸಿದಂತೆ ನಾಮಮಾತ್ರ ಸದಸ್ಯತ್ವ ನೀಡಿರುವುದು ಕಂಡು ಬಂದಿದೆ.
ಕರ್ನಾಟಕ ಸಹಕಾರಿ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಬ್ಯಾಂಕಿನಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಸದಸ್ಯರ ಪ್ರತಿಶತ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಬ್ಯಾಂಕಿನ ಸದಸ್ಯತ್ವ ಹೊಂದಲು ಅರ್ಹರಿದ್ದಲ್ಲಿ ಈ ತಿದ್ದುಪಡಿ ದಿನಾಂಕದಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ಧ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಹಕಾರಿಯಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು.	ಬ್ಯಾಂಕಿನಲ್ಲಿ ಸಹಸದಸ್ಯರು ಇರುವುದಿಲ್ಲ.

ಎಲ್ಲಾ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಶೆ	ಸಂಸ್ಥೆಯು ಸದಸ್ಯರುಗಳಿಗೆ ಸಂಬಂಧಿಸಿದಂತೆ ಠೇವಣಿ ಖಾತೆಗಳನ್ನು ತೆರೆಯುವಾಗ ಭಾರತೀಯ ರಿಸರ್ವ್ ಬ್ಯಾಂಕಿನವರ ನಿರ್ದೇಶನಗಳ ರೀತ್ಯಾ ಕೆ.ವೈ.ಸಿ ದಾಖಲಾತಿಗಳನ್ನು ಪಡೆದು ದಾಖಲಿಸಲಾಗುತ್ತಿದೆ. ಆದರೆ ಕೆ.ವೈ.ಸಿ. ನಿಯಮಾವಳಿಗಳು ಜಾರಿಗೊಳ್ಳುವ ಪೂರ್ವ ದಿನಗಳಲ್ಲಿ ಸದಸ್ಯರಾಗಿರುವ ಹಲವು ವ್ಯಕ್ತಿಗಳಿಂದ ಅಂತಹ ದಾಖಲಾತಿಗಳನ್ನು ಪಡೆಯಬೇಕಾಗಿದೆ. ಸಂಸ್ಥೆಯು ಕೆ.ವೈ.ಸಿ ದಾಖಲೆ ಇಲ್ಲದ ಖಾತೆದಾರರಿಗೆ ಪತ್ರ ವ್ಯವಹಾರ ನಡೆಸಿ ಅಗತ್ಯ ದಾಖಲೆ ಸಲ್ಲಿಸಲು ಮನವಿ ಮಾಡಿರುವುದು ಕಂಡು ಬಂದಿದೆ. ಹಾಗೆಯೇ ಸಂಸ್ಥೆಯು ಕೆ.ವೈ.ಸಿ ದಾಖಲೆ ಇಲ್ಲದ ಠೇವಣಿ ಖಾತೆಗಳಲ್ಲಿ ವ್ಯವಹಾರ ಸ್ಥಗಿತಗೊಳಿಸಲು ತೀರ್ಮಾನಿಸಿ ಕಾರ್ಯಗತಗೊಳಿಸಿದೆ ಮತ್ತು ಅಗತ್ಯ ಕೆ.ವೈಸಿ. ದಾಖಲೆ ಹಾಜರುಪಡಿಸಿದ ನಂತರ ಅಂತಹ ಖಾತೆಯಲ್ಲಿ ವ್ಯವಹಾರ ನಡೆಸಲು ಅವಕಾಶ ಕಲ್ಪಿಸಿರುವುದು ಕಂಡು ಬಂದಿದೆ. ಇದರ ಬಗ್ಗೆ ಸಂಸ್ಥೆಯು ಕ್ರಮವಹಿಸುವುದು ಅಗತ್ಯ.

ಸಮಾಧಾನ : ಸದಸ್ಯರುಗಳಿಂದ KYC ದಾಖಲೆ ಪಡೆಯಲು ಕ್ರಮ ಮುಂದುವರೆಸಿದೆ.

ಸಹಕಾರಿಯ ಸದಸ್ಯರೊಡನೆ ಕೈಗೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಶೆ :

1	ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ	ಕಂಡಿಕೆ 13ರಲ್ಲಿ ತಿಳಿಸಿದಂತೆ 2 ವಿಧಧ ಸದಸ್ಯತ್ವವನ್ನು ಬ್ಯಾಂಕು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 16 ಮತ್ತು 18 ರಂತೆ ನೀಡಲಾಗುತ್ತಿದೆ.
2	ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ಬಂಧಗಳಿಗೆ ಒಳಪಟ್ಟು ಬ್ಯಾಂಕು ಸದಸ್ಯರೇತರೊಂದಿಗೆ ಠೇವಣಿ ಸಂಗ್ರಹಣೆ ಇತ್ಯಾದಿ ವ್ಯವಹಾರ ನಡೆಸುತ್ತಿದೆ.
3	ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು	ಇರುವುದಿಲ್ಲ
4	ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ	ಕಂಡಿಕೆ 14 ರಲ್ಲಿ ವಿವರಿಸಿದೆ.

14) ಷೇರು ಬಂಡವಾಳ ಬಗ್ಗೆ ವಿಮರ್ಶೆ :

1)	ಅಧಿಕೃತ ಷೇರು ಬಂಡವಾಳ : ಸಹಕಾರಿಯ ಉಪನಿಯಮದನ್ವಯ ಅಧಿಕೃತ ಷೇರು ಬಂಡವಾಳದ ಮಿತಿ ಸಹಕಾರಿ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಹಕಾರಿ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಶಿಸುವುದು.	ಉಪನಿಯಮ ಸಂಖ್ಯೆ 10 ರನ್ವಯ ಬ್ಯಾಂಕಿನ ಅಧಿಕೃತ ಷೇರು ಬಂಡವಾಳಗಳು ಪ್ರತಿ ಷೇರಿನ ರೂ. 200–00 ಮುಖಬೆಲೆಯ ಎರಡು ನೂರು ಕೋಟಿ ರೂಪಾಯಿಗಳಾಗಿರುತ್ತದೆ.

ದಿನಾಂಕ 31–03–2025 ಕ್ಕೆ ಇರುವಂತೆ ಸಹಕಾರಿಗೆ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.

ಷೇರು ಬಂಡಾವಳ	ಸರ್ಕಾರದ ಷೇರು		ಸಾಮಾನ್ಯ ಷೇರು		ನಾಮಮಾತ್ರ ಸದಸ್ಯರ ಷೇರು		ಸಹ ಸದಸ್ಯರ ಷೇರು	
	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರಸಕ್ತ ಸಾಲು	ಹಿಂದಿನ ಸಾಲು
ವರ್ಷಾರಂಭದಲ್ಲಿದ್ದಂತೆ	ಇಲ್ಲ	ಇಲ್ಲ	95,07,66,852	95,43,64,952	1,38,170	1,33,370	ಇಲ್ಲ	ಇಲ್ಲ
ಪ್ರಸಕ್ತ ಸಾಲಿನಲ್ಲಿನ ಜಮಾ	ಇಲ್ಲ	ಇಲ್ಲ	5,70,37,200	6,10,21,600	33,833	1,11,775	ಇಲ್ಲ	ಇಲ್ಲ
ಪ್ರಸಕ್ತ ಸಾಲಿನಲ್ಲಿನ ಖರ್ಚು	ಇಲ್ಲ	ಇಲ್ಲ	4,84,88,400	6,46,19,700	29,323	1,06,975	ಇಲ್ಲ	ಇಲ್ಲ
ಸಾಲಾಖ್ಯೆರಿಗೆ ಇದ್ದಂತೆ	ಇಲ್ಲ	ಇಲ್ಲ	95,93,15,652	95,07,66,852	1,42,680	1,38,170	ಇಲ್ಲ	ಇಲ್ಲ

ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಷೆ : ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು.	ಕರ್ನಾಟಕ ರಾಜ್ಯ ಘನ ಸರ್ಕಾರವು ಈ ಸಂಸ್ಥೆಯಲ್ಲಿ ಷೇರು ಬಂಡವಾಳದ ರೂಪದಲ್ಲಿ ಹಣ ತೊಡಗಿಸಿರುವುದಿಲ್ಲ.
ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ : (ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ,	ಈ ಮೇಲ್ಕಂಡ ಅಂಕಿ ಅಂಶಗಳನ್ನು ಗಮನಿಸಿದಾಗ 2024–25 ನೇ ಸಾಲಿನಲ್ಲಿ ಷೇರು ಬಂಡವಾಳಗಳ ಸಂಗ್ರಹಣೆಯಲ್ಲಿ ರೂ.85,53,310–00 ಗಳು ಹೆಚ್ಚಾಗಿದ್ದು ಶೇಕಡ 0.90 ರಷ್ಟು ಬೆಳವಣಿಗೆಯಾಗಿದೆ.
ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ)	ಬ್ಯಾಂಕಿನ ಉಪ ನಿಬಂಧನೆ ಸಂಖ್ಯೆ : 10 ರ ಪ್ರಕಾರ ಒಂದು ಷೇರಿನ ಮುಖ ಬೆಲೆ ರೂ. 200.00 ಗಳಾಗಿದ್ದು ಬ್ಯಾಂಕಿನ 3386 ಸದಸ್ಯರುಗಳು ರೂ. 200.00 ಗಳಿಗೂ ಕಡಿಮೆ ಷೇರು ಮೊಬಲಗು ಉಳಿಸಿಕೊಂಡು ಸದಸ್ಯತ್ವದಲ್ಲಿ ಮುಂದುವರೆದಿರುತ್ತಾರೆ. ಹಾಗೆಯೇ ಬ್ಯಾಂಕಿನ ಉಪನಿಯಮ ಸಂಖ್ಯೆ 20 ರ ರೀತ್ಯಾ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆ / ಸೌಲಭ್ಯಗಳಡಿಯಲ್ಲಿ ಇತರೆ ನಿಬಂಧನೆಗಳೊಂದಿಗೆ ಸದಸ್ಯನು ರೂ. 1,000.00 ಗಳ ಕನಿಷ್ಠ ಷೇರು ಮೊಬಲಗು ಹೊಂದಿರಬೇಕಾಗಿದ್ದು, ವರದಿ ಸಾಲಾಂತ್ಯದಲ್ಲಿ ಬ್ಯಾಂಕಿನ 20292 ಸದಸ್ಯರುಗಳು ರೂ. 1,000.00 ಗಳಿಗೂ ಕಡಿಮೆ ಷೇರು ಮೊಬಲಗು ಉಳಿಸಿಕೊಂಡು ಸದಸ್ಯತ್ವದಲ್ಲಿ ಮುಂದುವರೆದಿರುತ್ತಾರೆ. ಬ್ಯಾಂಕು ಎಲ್ಲಾ ಸದಸ್ಯರಿಂದ ರೂ. 200.00 ರ ಗುಣಾಂಕದಲ್ಲಿ ಷೇರು ಮೊಬಲಗು ಹೊಂದಿರಲು /ಬೈಲಾ ನಿಯಮ 20 ರನ್ವಯ

	ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆ ಮತ್ತು ಸೌಲಭ್ಯಗಳಡಿಯಲ್ಲಿ ತಿಳಿಸಿರುವ ಷೇರು ಮೊಬಲಗು ನಿಬಂಧನೆಗೆ ಅನ್ವಯಿಸುವಂತೆ ಸದಸ್ಯನು ರೂ. 1,000.00 ಗಳ ಕನಿಷ್ಠ ಷೇರು ಮೊಬಲಗು ಹೊಂದಿರಲು ಕ್ರಮ ಕೋರಿದೆ. ಸದಸ್ಯರುಗಳಿಗೆ ಷೇರು ಪ್ರಮಾಣ ಪತ್ರವನ್ನು ನೀಡಲಾಗುತ್ತಿದ್ದು ಎಲ್ಲಾ ಸದಸ್ಯರುಗಳು ಷೇರು ಪ್ರಮಾಣ ಪತ್ರ ಪಡೆಯುವಂತೆ ಕ್ರಮವಹಿಸಲು ಸೂಚಿಸಿದೆ.

ಸಮಾಧಾನ : ಸದಸ್ಯರುಗಳು ಬೈಲಾ ನಿಯಮ ರೀತ್ಯಾ ಕನಿಷ್ಠ ಸೇವೆ ಮತ್ತು ಸೌಲಭ್ಯ ಪಡೆಯುವಂತೆ ಕೋರಲಾಗುತ್ತಿದೆ.

ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆಯಾಗಿದೆಯೇ? (ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು)	ಷೇರು ಕುಳುವಾರು ಪಟ್ಟಿಯು ಆಸ್ತಿ–ಜವಾಬ್ದಾರಿ ಪಟ್ಟಿಗೆ ತಾಳೆಯಾಗಿರುತ್ತದೆ.

15) ಮೀಸಲು ನಿಧಿ ಮತ್ತು ಇತರೆ ನಿಧಿಗಳು : 'ಶೆಡ್ಯೂಲ್ ಯು' ನಲ್ಲಿರುವ ಪ್ರಕಾರ

1	ಸಹಕಾರಿಯಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖೈರಿಗೆ ಸಂಘಕ್ಕೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.	ದಿನಾಂಕ: 31.03.2025 ರ ಅಂತ್ಯಕ್ಕೆ ಈ ಸಂಸ್ಥೆಯು ರೂ. 93,56,74,304.04 ಗಳ ಅಪದ್ಧನ ನಿಧಿಯನ್ನು ಹೊಂದಿರುತ್ತದೆ. ಈ ಸಂಬಂಧ ರೂ. 95,00,00,000.00 ಗಳನ್ನು ರಾಜ್ಯ / ಕೇಂದ್ರ ಸರ್ಕಾರದ ಸಾಲದ ಪತ್ರಗಳಲ್ಲಿ ಅಪದ್ಧನ ನಿಧಿಗಾಗಿ ಮೀಸಲಿರಿಸಿದ್ದು ಸಂಸ್ಥೆಯು ಈ ಗುಂತಾಯಗಳ ಮೇಲೆ ಸಕಾಲದಲ್ಲಿ ಬಡ್ಡಿ ಜಮಾ ಪಡೆದು ಲೆಕ್ಕವಿರಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 23ಕ್ಕೆ ಪೂರಕವಾಗಿ ಸಂಸ್ಥೆಯಿಂದ ಅಪದ್ಧನ ನಿಧಿಯನ್ನು ವಿನಿಯೋಗಿಸಲಾಗಿದೆ.
2	ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ?	ನಿಧಿಗಳನ್ನು ಗುಂತಾಯಿಸುವಲ್ಲಿ ಕಾಯ್ದೆ ಪ್ರಕರಣ 58 ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನವರ ನಿರ್ದೇಶನಗಳನ್ನು ಅನುಸರಿಸುವುದು ಕಂಡು ಬಂದಿದೆ.
3	ಸಂಘವು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆಯದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು.	ಕಾಯ್ದಿಟ್ಟ ನಿಧಿಯನ್ನು ಅನ್ಯ ಉದ್ದೇಶಗಳಿಗೆ ಬಳಸಿರುವುದಿಲ್ಲ.

4	ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯು ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತ:ಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು.	ಅನ್ವಯಿಸುವುದಿಲ್ಲ
5	ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಂಘಗಳ ಕಾಯಿದೆ ಕಲಂ 57 (4) (ಬಿ) ಯ ಉಲ್ಲಂಘನೆಯಾಗಿದೆಯೇ?	2023–24ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ನಿವ್ವಳ ಲಾಭದಲ್ಲಿ ಆಪದ್ಧನ ನಿಧಿಗೆ ತೆಗೆದಿರಿಸಿದ ನಂತರ ಉಳಿಯುವ ಮೊಬಲಗಿನ ಶೇಕಡ 2% ರಷ್ಟು ಮೊಬಲಗನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಮತ್ತು ಶೇಕಡ 1 ರಷ್ಟು ಮೊಬಲಗನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ಸಹಕಾರ ಶಿಕ್ಷಣ ನಿಧಿಯಾಗಿ ಪಾವತಿಸಬೇಕಾಗಿದ್ದು, ಕ್ರಮವಾಗಿ ಅವರುಗಳಿಗೆ ರೂ.38,70,278.00 ಮತ್ತು ರೂ. 19,35,139.00 ಗಳನ್ನು ದಿನಾಂಕ 18.09.2024 ರಂದು ಪಾವತಿ ಮಾಡಿದೆ. ಸಹಕಾರ ಶಿಕ್ಷಣ ಪಾವತಿಗಳನ್ನು ಪಾವತಿಸಿದ ನಂತರದಲ್ಲಿ ಸದಸ್ಯರುಗಳಿಗೆ ಡಿವಿಡೆಂಡ್ ಹಂಚಿರುವುದು ಕಂಡು ಬಂದಿದೆ. 2024–25 ರ ಸಾಲಿಗೆ ಸಹಕಾರ ಶಿಕ್ಷಣ ನಿಧಿ ಬಾಬ್ತು ರೂ. 66.00 ಲಕ್ಷಗಳನ್ನು ಆದಾಯ ತೆರಿಗೆ ನಿರ್ವಹಣಾ ದೃಷ್ಟಿಯಿಂದ ಅವಕಾಶ ಮಾಡಿದ್ದು ವರ್ಷಾಂತ್ಯದಲ್ಲಿ ಆಸ್ತಿ–ಜವಾಬ್ದಾರಿ ಲೆಕ್ಕಗಳಲ್ಲಿ ಮುಂದುವರೆದಿದೆ.
6	ಇತರೆ ನಿಧಿಗಳು	ಸಾಲಾಖ್ಯೆರಿಗೆ ಬ್ಯಾಂಕಿನ ಆಸ್ತಿ ಜವಾಬ್ದಾರಿ ಪಟ್ಟಿಯಲ್ಲಿ ಜವಾಬ್ದಾರಿ ಕಡೆ ವಿವರಿಸಿರುವಂತೆ ಒಟ್ಟು ರೂ. 431,92,25,341.28 ಗಳ ಇತರೆ ನಿಧಿಗಳು ಬ್ಯಾಂಕಿನಲ್ಲಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

1.	ಕಟ್ಟಡ ನಿಧಿ	34,14,88,975.66
2	ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ಮೇಲೆ ಕಾಯ್ದಿರಿಸಿದ ನಿದಿ (ಉತ್ಪಾದಕ ಸಾಲಗಳ ಮೇಲೆ)	6,96,28,861.00
3	ಕರಡು ಮತ್ತು ಸಂಶಯಾತ್ಮಕ ಸಾಲಗಳ ಮೇಲೆ ಕಾಯ್ದಿರಿಸಿದ ನಿಧಿ	182,80,11,559.72
4	ಉತ್ಸವ ನಿಧಿ	60,19,264.11
5	ಮರಣೋತ್ತರ ಪರಿಹಾರ ನಿಧಿ	1,41,84,479.16
6	ಸಿಬ್ಬಂದಿ ಕ್ಷೇಮ ನಿಧಿ	1,19,00,127.16

7	ದಾನದ ನಿಧಿ	80,45,138.21
8	ಪ್ರಚಾರ ನಿಧಿ	1,08,73,473.33
9	ಗುಂತಾಯಗಳ ಆಕಸ್ಮಿಕ ನಿಧಿ	28,39,21,049.00
10	ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ	89,15,900.00
11	ಸದಸ್ಯರ ಮರಣೋತ್ತರ ನಿಧಿಗೆ ಸದಸ್ಯರು ನೀಡುವ ವಂತಿಗೆ ನಿಧಿ	89,79,100.00
12	ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (ಆದಾಯ ತೆರಿಗೆ)	63,78,84,507.00
13	ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (ಆದಾಯ ತೆರಿಗೆ – ಗೃಹ ನಿರ್ಮಾಣ)	13,16,83,976.00
14	ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (ಕೋವಿಡ್–19 ಪ್ಯಾಕೇಜ್ ಸಂಬಂಧ)	30,66,30,790.00
15	ಸಿಬ್ಬಂದಿ ಮರಣ ಪರಿಹಾರ ನಿಧಿ	2,68,14,277.93
16	ಸಿಬ್ಬಂದಿ ಬೆನೆವಲೆಂಟ್ ಫಂಡ್	20,50,219.00
17	ಡೆಫರ್ಡ್ ತೆರಿಗೆ ಅವಕಾಶಗಳು (BDDR IT HOUSING ಸಂಬಂಧ)	1,18,79,990.00
18	ಆಸ್ತಿ ಮರುಮೌಲ್ಯಮಾಪನ ನಿಧಿ	60,32,66,625.00
19	NBA ಸಂಬಂಧ ಬಡ್ಡಿ ಅವಕಾಶಗಳು	70,47,029.00
	ಒಟ್ಟು	**431,92,25,341.28**

ಸಂಸ್ಥೆಯವರು ಸ್ಥಿರಾಸ್ತಿ ಆಧಾರ ಅನುತ್ಪಾದಕ ಸಾಲ ವಸೂಲಾತಿ ಸಂಬಂಧ SARFAESIA-2002 ಕಾಯಿದೆಯನ್ವಯ ಸುಸ್ತಿ ಸಾಲಗಾರರ ವಿರುದ್ಧ ಕಾನೂನು ಕ್ರಮ ಅಳವಡಿಸಿ ಸಂಬಂಧದಲ್ಲಿ ಬಿಡ್ದುದಾರರಿಂದ ಸೂಕ್ತ ಬಿಡ್ಡು ಬಾರದ ಕಾರಣ ಎರಡು ಸ್ಥಿರಾಸ್ತಿಗಳನ್ನು ಬ್ಯಾಂಕೇತರ ಆಸ್ತಿಗಳಾಗಿ ಖರೀದಿಸಿದ್ದು ಖರೀದಿ ಮೌಲ್ಯದಿಂದ ಬಾಕಿ ಅಸಲು ಹೊಂದಾಣಿಕೆ ಮಾಡಿ ಉಳಿದ ಮೊಬಲಗನ್ನು ಬಾಕಿ ಬಡ್ಡಿಗೆ ಜಮಾ ತೆಗೆದುಕೊಂಡು ಆದಾಯವೆಂದು ಪರಿಗಣಿಸಿದ ಪ್ರಕ್ರಿಯೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿನವರು ತಪಸಣಾ ವರದಿಯಲ್ಲಿ ಆಕ್ಷೇಪಿಸಲಾಗಿ, ಆದಾಯವೆಂದು ಪರಿಗಣಿಸಿದ ಬಡ್ಡಿ ಮೊಬಲಗಿಗೆ ಸಮವಾಗಿ ಅವಕಾಶ ಕಲ್ಪಿಸಿ ರೂ. 70,47,029.00 ಗಳ NBA ಸಂಬಂಧ ಬಡ್ಡಿ ಅವಕಾಶಗಳ ನಿಧಿಯನ್ನು ಹಿಂದಿನ ವರ್ಷಗಳಲ್ಲಿ ಸೃಜಿಸಲಾಗಿರುವುದು ಪರಿಶೀಲನೆಯಲ್ಲಿ ಕಂಡು ಬಂದಿದೆ.

ವರದಿ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನ ಅನುಸರಿಸಿ ಷೇರು ನಫೆ ಸಮತೋಲನಾ ನಿಧಿಯಲ್ಲಿದ್ದ ಮೊಬಲಗು ರೂ. 1,66,94,158.33 ಗಳನ್ನು ಕಾಯ್ದಿರಿಸಿದ ನಿಧಿಗೆ ವರ್ಗಾಯಿಸಲಾಗಿದೆ.

ಸಂಸ್ಥೆಯ ಬೈಲಾದಲ್ಲಿ ಕಲ್ಪಿಸಿರುವ ಅವಕಾಶಗಳಿಗನುಗುಣವಾಗಿ ಮತ್ತು ಕಾಯ್ದೆಯ ಪ್ರಕಾರ ಇತರೆ ನಿಧಿಗಳನ್ನು ಸಂಸ್ಥೆಯವರು ಕ್ರೋಢಿಕರಿಸಿರುವುದು ಕಂಡು ಬರುತ್ತದೆ.

(16) ಹೊರಗಿನಿಂದ ಪಡೆದ ಸಾಲಗಳು :

	ಸಂಘವು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ	ಸಂಸ್ಥೆಯು ಬೈಲಾ ಸಂಖ್ಯೆ 5(3) ಮತ್ತು 8 ರ ರೀತ್ಯಾ ಭಾರತೀಯ ರಿಸರ್ವ್ ಬ್ಯಾಂಕ್ ಕಾಲ ಕಾಲಕ್ಕೆ ಹೊರಡಿಸುವ ನಿರ್ದೇಶನಗಳಿಗೆ ಒಳಪಟ್ಟು ನಿಯಮ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿದಂತೆ ಮಂಡಳಿಯು ನಿರ್ಧರಿಸುವ ಷರತ್ತುಗಳ

		ಮೇಲೆ ಅಂಥ ಬಡ್ಡಿ ದರದಲ್ಲಿ ಅಂಥ ಮಿತಿಯವರೆಗೆ ಸಾಲಗಳನ್ನು ಪಡೆಯಲು ಅವಕಾಶವಿದ್ದು, ಸಂಸ್ಥೆಯು ಹೊರಗಿನಿಂದ ಯಾವುದೇ ಸಾಲ ಪಡೆದಿರುವುದಿಲ್ಲ.

1. ಬ್ಯಾಂಕಿನಿಂದ ಪಡೆದ ಸಾಲಗಳು :

	ಎ] ಬ್ಯಾಂಕಿನ ಹೆಸರು ಮತ್ತು ಶಾಖೆ	ಸಂಸ್ಥೆಯು ಹೊರಗಿನಿಂದ ಯಾವುದೇ ಸಾಲ ಪಡೆದಿರುವುದಿಲ್ಲ.

ಬಿ] ಹೊರಗಿನಿಂದ ಪಡೆದ ವಿವಿದ ಸಾಲಗಳ ವಿವರ :

ಕ್ರ.ಸಂ	ಸಾಲದ ವಿವರ	ಆರಂಭದ ಬಾಕಿ	ಸಾಲ ತಂದಿದ್ದು	ಸಾಲ ಮರುಪಾವತಿ	ವರ್ಷಾಂತ್ಯದ ಬಾಕಿ
1	ನಗದು ಪತ್ತಿನ ಸಾಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ
2	ಇನ್ನಿತರೆ ಸಾಲಗಳು	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ

	ಸಿ] ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ	ಅನ್ವಯಿಸುವುದಿಲ್ಲ
	ಡಿ] ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.03.2025 ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ
2	ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ: [ಸಾಲಾಂತ್ಯ ದಿ: 31.03.2025 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು]	ಅನ್ವಯಿಸುವುದಿಲ್ಲ
3	**ಸರ್ಕಾರದ ಸಾಲಗಳು :** (ಸರ್ಕಾರದಿಂದ ಪಡೆದಿರುವ ವಿವಿಧ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.03.2025 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಢೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ವಿಮರ್ಷೆ)	ಅನ್ವಯಿಸುವುದಿಲ್ಲ
4	ಸಂಘವು ಹೊರಗಿನಿಂದ ಪಡೆದ ಸಾಲದ ವರ್ಷಾಂತ್ಯಕ್ಕೆ ಕೊಡತಕ್ಕ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢೀಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷಾವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.)	ಅನ್ವಯಿಸುವುದಿಲ್ಲ

(17) ಠೇವಣಿಗಳು :

1	ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ	ಉಪನಿಯಮ 6 (ಬಿ), 7, ರಂತೆ ಠೇವಣಿಗಳನ್ನು ಸಂಗ್ರಹಿಸಬಹುದಾಗಿದ್ದು ವಿವರ ಕೆಳಕಂಡಂತಿದೆ. ಬ್ಯಾಂಕಿನ ಠೇವಣಿಗಳು ಸಾಲು ಪ್ರಾರಂಭದಲ್ಲಿ ರೂ. 2096,22,55,135.91 ರಷ್ಟಿದ್ದು, ಪ್ರಸಕ್ತ ಸಾಲಾಂತ್ಯಕ್ಕೆ ಅಂದರೆ ದಿನಾಂಕ: 31.03.2025 ರಂದು ರೂ. 2158,88,87,918.96 ರಷ್ಟು ಆಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 62,66,32,783.05 ರಷ್ಟು ಠೇವಣಿಗಳು ಹೆಚ್ಚಾಗಿದ್ದು ಶೇಕಡ 2.99 ರಷ್ಟು ಬೆಳವಣಿಗೆಯಾಗಿದೆ.

1 ಸಂಘವು ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ವಿವರಗಳು [ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು / ಕಡಿಮೆ ಶೇ. ಮಾಹಿತಿಯೊಂದಿಗೆ ವಿಮರ್ಷಿಸಿ.

ಠೇವಣಿ ವಿವರಗಳು	ಆರಂಭ ಬಾಕಿ	ಪ್ರಸಕ್ತ ಸಾಲಿನ ಜಮಾ	ಪ್ರಸಕ್ತ ಸಾಲಿನ ಖರ್ಚು	ವರ್ಷಾಂತ್ಯಕ್ಕೆ ಬಾಕಿ	ಯಾದಿಯ ಮೊತ್ತ	ಅಂತರ	ಪ್ರಗತಿಯಲ್ಲಿ ಶೇಕಡವಾರು
ರಜತ ನಗದು ಪತ್ರ	8988228092.00	10077795301.00	9812982437.00	9253040956.00	9253040956.00	ಇಲ್ಲ	(+) 2.95
ನಿಶ್ಚಿತ ಠೇವಣಿ	8304926340.00	8762772980.00	8536995771.00	8530703549.00	8530703549.00	ಇಲ್ಲ	(+) 2.72
ಚಾಲ್ತಿ ಠೇವಣಿ	94679863.13	2123065390.70	2129079533.26	88665720.57	88665720.57	ಇಲ್ಲ	(–)6.35
ಉಳಿತಾಯ ಠೇವಣಿ	3244926441.89	24996211523.34	24892114183.17	3349023782.07	3349023782.07	ಇಲ್ಲ	(+) 3.21
ಲಕ್ಷಾಧಿಪತಿ ಆವರ್ತಕ ಠೇವಣಿ	4035.00	–	–	4035.00	4035.00	ಇಲ್ಲ	---
ಅಕ್ಷಯ ಪಿಂಚಣಿ ಠೇವಣಿ	10245238.00	1872755.00	17719.00	12100274	12100274	ಇಲ್ಲ	(+) 18.11
ಸಿಬ್ಬಂದಿ ಭದ್ರತಾ ಠೇವಣಿ	12858054.00	1079226.00	897983.00	13039297.00	13039297.00	ಇಲ್ಲ	(+) 1.41
ಅವಧಿ ಮುಗಿದ ಠೇವಣಿ	65894230.00	2754245129.00	2712429791.00	107709568.00	107709568.00	ಇಲ್ಲ	(+) 63.46
ರಿಕರಿಂಗ್ ಠೇವಣಿ	239463785.00	295216399.00	301083094.00	233597090.00	233597090.00	ಇಲ್ಲ	(–) 2.45
ಚಿರಂಜೀವಿ ಠೇವಣಿ	1029056.89	917451.00	942860.57	1063647.32	1063647.32	ಇಲ್ಲ	(–)2.47
ಒಟ್ಟು ಮೊತ್ತ	**20962255135.91**	**49013176155.04**	**48386543372.00**	**21588887918.96**	**21588887918.96**	**ಇಲ್ಲ**	(+) **2.99**

ಒಟ್ಟು ಠೇವುಗಳ ಕಳೆದ 02 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ :

ಕ್ರಮ ಸಂಖ್ಯೆ	ಠೇವಣಾತಿಗಳ ವಿವರ	31.03.2023 ಮೊಬಲಗು	31.03.2024 ಮೊಬಲಗು	ಖಾತೆಗಳ ಸಂಖ್ಯೆ	31.03.2025 ಮೊಬಲಗು
1	ನಿಶ್ಚಿತ ಠೇವಣಿ	8992007934.00	8304926340.00	33156	8530703549
2	ರಜತ ನಗದು ಸರ್ಟಿಫೀಕೇಟ್	10033866019.00	8988228092.00	33933	9253040956
3	ಅವಧಿ ಮುಗಿದ ಖಾಯಂ ಠೇವಣಿ	75728018.00	65894230.00	933	107709568
4	ಉಳಿತಾಯ ಠೇವಣಿ	3179754312.62	3244926441.89	117532	3349023782.07
5	ಚಾಲ್ತಿ ಖಾತೆ	112810301.70	94679863.13	1633	88665720.57
6	ಆವರ್ತಕ ಠೇವಣಿ	229766329.00	239463785.00	3646	233597090.00
7	ಚಿರಂಜೀವಿ ಠೇವಣಿ	974228.09	1029056.89	214	1003647.32
8	ಸಿಬ್ಬಂದಿ ಭದ್ರತಾ ಠೇವಣಿ	13050184.00	12858054.00	368	13039297.00
9	ಲಕ್ಷಾಧಿಪತಿ ಆವರ್ತಕ ಠೇವಣಿ	4035.00	4035.00	1	4035
10	ಅಕ್ಷಯ ಪಿಂಚಣಿ ಠೇವಣಿ	8795175.00	102452.38	15	12100274.00
	ಒಟ್ಟು	**22646756536.41**	**20962255135.91**	**191431**	**21588887918.96**

ವಿಮರ್ಶೆ :

1) ಪ್ರಸ್ತುತ ಸಾಲಿನಂತ್ಯಕ್ಕೆ ಇರುವ ಠೇವಣಿಯು ಹಿಂದಿನ ಸಾಲಿನಲ್ಲಿದ್ದ ಠೇವಣಿಯ ಶೇಕಡ 2.99 ರಷ್ಟು ಹೆಚ್ಚಾಗಿದೆ.

2) 31.03.2025 ಕ್ಕೆ ಕಡಿಮೆ ವೆಚ್ಚದ ಠೇವಣಿಯು ಒಟ್ಟು ಠೇವಣಿಯ ಶೇಕಡ 16.43 ರಷ್ಟಿದೆ.

ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಶೆ :

3	ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ ?	ಬ್ಯಾಂಕು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರನ್ವಯ ಸದಸ್ಯರಲ್ಲದವರಿಂದಲೂ ಠೇವಣಿ ಸ್ವೀಕರಿಸಲಾಗುತ್ತಿದೆ. ಸದಸ್ಯರಿಂದ ಒಟ್ಟು ರೂ. 1241.65 ಕೋಟಿ ಠೇವಣಿಗಳು ಮತ್ತು ಸದಸ್ಯರೇತರರಿಂದ ಒಟ್ಟು ರೂ. 917.24 ಕೋಟಿ ಠೇವಣಿಗಳು ಪಡೆಯಲಾಗಿದೆ.
4	ಠೇವಣಿಯ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ	ಸಂಸ್ಥೆಯು ಠೇವಣಿಗಳ ಮೇಲೆ ಪಾವತಿಸಲಾಗುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸುವ ತೀರ್ಮಾನಗಳಿಗೆ ಅನುಗುಣವಾಗಿರುತ್ತದೆ. ಸಂಸ್ಥೆಯು 2024–25 ರ ಸಾಲಿನಲ್ಲಿ ಠೇವಣಿ ಬಡ್ಡಿ ವೆಚ್ಚ ರೂ. 146,88,80,583.00 ಗಳನ್ನು ಭರಿಸಿದ್ದು ಠೇವಣಿ ವೆಚ್ಚವು (Cost of Deposit) ಶೇಕಡ 6.94 ರಷ್ಟು ಆಗಿರುತ್ತದೆ. ಠೇವಣಿ ವೆಚ್ಚಗಳು ಕಳೆದ ಸಾಲಿನಲ್ಲಿ ಶೇಕಡ 6.62 ರಷ್ಟಿದ್ದು ವರದಿ ಸಾಲಿನಲ್ಲಿ ಇವು ಶೇಕಡ 0.32 ರಷ್ಟು ಹೆಚ್ಚಾಗಿರುತ್ತದೆ. ವರದಿ ದಿನಾಂಕಕ್ಕೆ ಅನ್ವಯವಾಗುವಂತೆ ಅವಧಿ ಠೇವಣಿ ಬಡ್ಡಿ ದರಗಳು ಶೇಕಡ 3 ರಿಂದ ಶೇಕಡ 8.00 ರವರೆಗೆ ಮತ್ತು ಉಳಿತಾಯ ಖಾತೆ ಬಡ್ಡಿ ದರಗಳು ಶೇಕಡ 3 ರಿಂದ 4 ರವರೆಗೆ ಇರುತ್ತವೆ.

5	ಠೇವಣಿದಾರರಿಗೆ ಪಾಸ್ ಪುಸ್ತಕ/ ಸರ್ಟಿಫಿಕೇಟ್ ನೀಡಲಾಗಿದೆಯೇ ?	ಸಂಸ್ಥೆಯು ಠೇವಣಿಗಳಿಗೆ ಸಂಬಂಧಿಸಿದಂತೆ ಪಾಸ್ ಪುಸ್ತಕ / ಠೇವಣಿ ಬಾಂಡ್ ನೀಡುವ ಪದ್ಧತಿಯನ್ನು ಇರಿಸಿಕೊಂಡಿದೆ.
6	ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ.	ಸಂಸ್ಥೆಯು ಬಡ್ಡಿ ಕ್ರೋಢಿಕೃತಗೊಳ್ಳುವ ಎಲ್ಲಾ ಠೇವಣಿಗಳು ಅಂದರೆ ನಗದು ಸರ್ಟಿಫಿಕೇಟ್ ಇತ್ಯಾದಿ ಠೇವಣಿಗಳಿಗೆ ಪಾವತಿಸಬೇಕಾದ ಬಡ್ಡಿಯನ್ನು ಖಾತೆಗೆ ಜಮಾ ಮಾಡಿರುವುದು ಮತ್ತು ನಿಶ್ಚಿತ ಠೇವಣಿ ಖಾತೆಗಳಿಗೆ ಬಡ್ಡಿ ಪಾವತಿಯಾಗದಿದ್ದಲ್ಲಿ ಬಾಕಿ ಬಡ್ಡಿ ಪಾವತಿಗಾಗಿ ರೂ. 1,40,31,836.00 ಗಳನ್ನು ಕಾದಿರಿಸಿ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಮುಂದುವರೆಸಿದೆ. ಈ ಬಡ್ಡಿ ಅವಕಾಶಗಳ ಬಗ್ಗೆ ಕುಳುವಾರು ತಯಾರಿಸಿದ್ದು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿನ ಮೊಬಲಗಿನೊಂದಿಗೆ ತಾಳೆ ಇರುತ್ತದೆ.
7	ಪಿಗ್ಮಿ ಠೇವಣಿಯ ವ್ಯವಹಾರ ಕೈಗೊಂಡಿರುವರೋ?	ಸಂಸ್ಥೆಯಲ್ಲಿ ಪಿಗ್ಮಿ ಠೇವಣಿ ವ್ಯವಹಾರವಿರುವುದಿಲ್ಲ.
8	ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್.	ಅನ್ವಯಿಸುವುದಿಲ್ಲ.
9	ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ?	ಸಂಸ್ಥೆಯು ಠೇವಣಿ ಪಾವತಿಸುವಾಗ ಠೇವಣಿ ಮೊತ್ತವು ಬಡ್ಡಿಯೊಂದಿಗೆ ರೂ. 20,000/– ಗಳಿಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಮೊಬಲಗನ್ನು ನಗದಾಗಿ ಪಾವತಿಸದೆ ಖಾತೆಗೆ ಜಮಾ ಅಥವಾ ಧನಾದೇಶದ ಮೂಲಕ ಪಾವತಿಸುವುದು, ಅವಧಿ ಠೇವಣಿ ಬಡ್ಡಿ ಮೊತ್ತಗಳು ವಾರ್ಷಿಕ ರೂ. 40,000/– ಗಳು (ಹಿರಿಯ ನಾಗರೀಕನಾಗಿದ್ದಲ್ಲಿ ರೂ.50,000/–) ಮೀರಿದ್ದಲ್ಲಿ ಮೂಲದಲ್ಲೆ ತೆರಿಗೆ ಕಡಿತ (TDS) ಮಾಡಿ ಪಾವತಿಸುವುದು (ಠೇವಣಿದಾರರು 15G/15H ದಾಖಲಿಸಿದವರನ್ನು ಹೊರತುಪಡಿಸಿ) ಇತ್ಯಾದಿ ನಿಯಮಗಳನ್ನು ಅನುಸರಿಸುತ್ತಿರುವುದು ಪರಿಶೀಲನೆಯಲ್ಲಿ ಕಂಡು ಬಂದಿದೆ.
10	ಆನಿಶ್ಚಿತ ಜವಾಬ್ದಾರಿಗಳು : (Contingent Liabilities)	ಸಾಲಾಂತ್ಯಕ್ಕೆ ಬ್ಯಾಂಕ್ ಖಾತರಿಯನ್ನು (Bank Guarantees) ನೀಡಿರುವ ಪ್ರಕರಣಗಳು ಇರುವುದಿಲ್ಲ.
11	ದ್ರವ್ಯಾಸ್ತಿಗಳ (ಫ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/CRR ಗಳ ನಿರ್ವಹಣೆ–ಶಾಖೆಗಳ ವಾರದ ಆಖೈರಾದ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಆ್ಯಂಡ್ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ?	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಕಲಂ 18 ಮತ್ತು 24 ರನ್ವಯ ಬ್ಯಾಂಕು ವರದಿ ಸಾಲಿನಲ್ಲಿ ತನ್ನ ನಿವ್ವಳ ಡಿಮ್ಯಾಂಡ್ ಮತ್ತು ಟೈಮ್ ಲಯಾಬಿಲಿಟೀಸ್‌ಗಳ ಮೇಲೆ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ಕೆಳಕಂಡ ದರದಲ್ಲಿ (ಕನಿಷ್ಠ) ನಿರ್ವಹಿಸಬೇಕಾಗಿದೆ. **ಎ) ನಗದು ಮೀಸಲು** ದಿನಾಂಕ 21.05.2022 ರಿಂದ ಶೇಕಡ 4.50 ರಷ್ಟು ದಿನಾಂಕ 13.12.2024 ರಿಂದ ಶೇಕಡ 4.00 ರಷ್ಟು **ಬಿ) ದ್ರವ್ಯಾಸ್ತಿಗಳು** ದಿನಾಂಕ 11.04.2020 ರಿಂದ ಶೇಕಡ 18.00 ರಷ್ಟು

		ಬ್ಯಾಂಕ್ CRR/SLR ನಿರ್ವಹಣೆ ಬಗ್ಗೆ ಮಾಹಿತಿ ಬರೆದಿಟ್ಟಿದ್ದು ಪರಿಶೀಲಿಸಲಾಗಿ ವರದಿ ಸಾಲಿನಲ್ಲಿ ಈ ಸಂಬಂಧ ವ್ಯತ್ಯಯ ಇರುವುದಿಲ್ಲ. ಆದರೆ ಹಲವು ಸಂದರ್ಭಗಳಲ್ಲಿ ನಿಗದಿ ಮಟ್ಟಕ್ಕಿಂತಲೂ ಹೆಚ್ಚಿನ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ನಿರ್ವಹಿಸಿದ್ದು, ಕೆಲವು ದಿನಗಳ ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.

ನಗದು ಮೀಸಲು :

ದಿನಾಂಕ	ನಿಗದಿಪಡಿಸಿದ ಶೇಕಡವಾರು	ಇರಿಸಬೇಕಾದ ಮೊಬಲಗು (ರೂ. ಲಕ್ಷಗಳಲ್ಲಿ)	ಇರುವ ಮೊತ್ತ (ರೂ.ಲಕ್ಷಗಳಲ್ಲಿ)	ಹೆಚ್ಚಿಗೆ ಇರುವ ಮೊಬಲಗು (ರೂ. ಲಕ್ಷಗಳಲ್ಲಿ)
26.04.2024	4.5%	9282.98	9706.69	423.71
31.05.2024	4.5%	9297.47	9697.81	400.34
10.06.2024	4.5%	9284.86	9469.19	184.33
23.07.2024	4.5%	9239.96	9529.13	289.16
25.08.2024	4.5%	9300.59	9519.43	218.88
09.09.2024	4.5%	9292.24	9535.41	243.67
06.10.2024	4.5%	9304.46	9794.80	490.34
25.11.2024	4.5%	9395.52	12161.12	2765.60
29.12.2024	4.00%	8355.65	9108.94	753.29
27.01.2025	4.00%	8414.77	8729.64	314.87
25.02.2025	4.00%	8427.08	8832.49	405.41
10.03.2025	4.00%	8393.76	8606.64	212.88

ದ್ರವ್ಯಾಸ್ತಿಗಳು :

ದಿನಾಂಕ	ನಿಗದಿಪಡಿಸಿದ ಶೇಕಡವಾರು	ಇರಿಸಬೇಕಾದ ಮೊಬಲಗು (ರೂ. ಲಕ್ಷಗಳಲ್ಲಿ)	ಇರುವ ಮೊತ್ತ (ರೂ.ಲಕ್ಷಗಳಲ್ಲಿ)	ಹೆಚ್ಚಿಗೆ ಇರುವ ಮೊಬಲಗು (ರೂ. ಲಕ್ಷಗಳಲ್ಲಿ)
20.04.2024	18%	37131.91	105814.88	68682.97
31.05.2024	18%	37189.86	104540.49	67350.63
20.06.2024	18%	37275.41	104591.04	67315.63
23.07.2024	18%	36959.86	103911.35	66951.39
25.08.2024	18%	37202.37	103026.07	65823.64
09.09.2024	18%	37168.96	102480.14	65311.17

06.10.2024	18%	37217.85	102928.21	65710.36
25.11.2024	18%	37582.07	106302.51	68720.44
29.12.2024	18%	37600.40	106992.98	69392.58
27.01.2025	18%	37866.45	107082.03	69215.58
25.02.2025	18%	37921.85	107886.46	69964.61
10.03.2025	18%	37771.91	102833.50	65061.59

ಬ್ಯಾಂಕ್ ದ್ರವ್ಯಾಸ್ತಿಗಳ ನಿರ್ವಹಣೆ ಬಗ್ಗೆ ಮಾಹೆಯಾನ ವರದಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನವರಿಗೆ ಕಳುಹಿಸುತ್ತಿರುವುದು ಪರಿಶೀಲನೆಯಲ್ಲಿ ಕಂಡು ಬಂದಿದೆ ಮತ್ತು ಅಂತಹ ವರದಿಗಳು ಸರಿ ಇರುವುದರ ಬಗ್ಗೆ ದೃಢೀಕರಿಸಿಕೊಂಡಿದೆ. ಬ್ಯಾಂಕ್ ತನ್ನ ಹೆಚ್ಚುವರಿ ಸಂಪನ್ಮೂಲಗಳನ್ನು ಬಡ್ಡಿ ಗಳಿಕೆ ಮತ್ತು ಸುರಕ್ಷತ ದೃಷ್ಟಿಯಿಂದ ಸರ್ಕಾರಿ ಸಾಲ ಪತ್ರಗಳಲ್ಲಿ ಗುಂತಾಯಿಸಿರುವುದು ಮತ್ತು ಈ ಕಾರಣದಿಂದಾಗಿ ದ್ರವ್ಯಾಸ್ತಿಗಳು ನಿಗದಿತ ಮಿತಿಗಿಂತ ಹೆಚ್ಚಿರುತ್ತವೆ. ಬ್ಯಾಂಕ್ ನಗದು ಮೀಸಲು ನಿಗದಿತ ಮಿತಿಯಲ್ಲಿಯೇ ನಿರ್ವಹಿಸಲು ಸೂಚಿಸಿದೆ.

ಸಮಾಧಾನ : ಗಮನಿಸಿದೆ.

12	ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಸರ್ವ್ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿ ನಿಗದಿಪಡಿಸಿ ಆರ್ಥಿಕ ತ:ಖ್ತೆಯಲ್ಲಿ ತೋರಿಸಲಾಗಿದೆಯೇ?	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ಕಲಂ 18 ಮತ್ತು 24 ರನ್ವಯ ಭಾರತೀಯ ರಿಸರ್ವ್ ಬ್ಯಾಂಕು ನಿಗದಿಗೊಳಿಸಿದ ಕನಿಷ್ಠ ಮಿತಿಗೂ ನಗದು ಮೀಸಲು ಮತ್ತು ದ್ರವ್ಯಾಸ್ತಿಯನ್ನು ವರ್ಷಪೂರ್ತಿ ಕಡಿಮೆ ನಿರ್ವಹಿಸಿಲ್ಲದ ಕಾರಣ ಈ ಸಂಬಂಧ ಯಾವುದೇ ವಿಫಲತೆ ಇರುವುದಿಲ್ಲ ಮತ್ತು ಈ ಸಂಬಂಧ ದಂಡ ಪಾವತಿಸಿರುವುದಿಲ್ಲ.
13	ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು :– [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು]	1) ಉಳಿತಾಯ ಠೇವಣಿ ಮತ್ತು ಚಾಲ್ತಿ ಠೇವಣಿಯಲ್ಲಿ ಇರಬೇಕಾದ ಕನಿಷ್ಠ ಮೊಬಲಗು ಕ್ರಮವಾಗಿ ಚೆಕ್ಕುರಹಿತ ಉಳಿತಾಯ ಖಾತೆಗಳಿಗೆ ರೂ. 500/– ಗಳು, ಚೆಕ್ಕುಸಹಿತ ಉಳಿತಾಯ ಖಾತೆಗಳಿಗೆ ರೂ. 1000/– ಗಳು ಮತ್ತು ಚಾಲ್ತಿ ಖಾತೆಗಳಿಗೆ ರೂ. 2000/– ಗಳನ್ನು ಬ್ಯಾಂಕು ನಿಗದಿಪಡಿಸಿದ್ದು ಹಲವು ಖಾತೆಗಳಲ್ಲಿ ಸದರಿ ಕನಿಷ್ಠ ಮೊಬಲಗು ಇರುವುದಿಲ್ಲ. ಅನೇಕ ಖಾತೆಗಳು ನಿಷ್ಕ್ರಿಯವಾಗಿರುತ್ತದೆ. ಇಂತಹ ಖಾತೆಗಳ ವಿವರಗಳನ್ನು ಗಣಕೀಕರಣ ವ್ಯವಸ್ಥೆಯಲ್ಲಿ ಪ್ರತ್ಯೇಕವಾಗಿ ವಿಂಗಡಿಸಬಹುದಾಗಿದ್ದು, ವ್ಯವಹಾರ ನಡೆಸಬೇಕಾದ ಸಂದರ್ಭದಲ್ಲಿ ಹೆಚ್ಚಿನ ಗಮನವಿರಿಸುವುದು. **ಸಮಾಧಾನ :** ನಿಷ್ಕ್ರಿಯ ಖಾತೆಗಳಲ್ಲಿ ವ್ಯವಹರಿಸುವಾಗ ಹೆಚ್ಚಿನ ಗಮನ ಇರಿಸಲಾಗುತ್ತಿದೆ. 2) ಬ್ಯಾಂಕಿನ ಎಲ್ಲಾ ಸದಸ್ಯರುಗಳು ಉಳಿತಾಯ ಖಾತೆಯನ್ನು ಹೊಂದಲು ಮತ್ತು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಲು ಅಗತ್ಯ ಕ್ರಮ ಇಡಬೇಕಾಗಿದೆ.

		3) KYC ನಿಯಮಗಳ ಜಾರಿ ಪೂರ್ವ ತೆರೆಯಲಾದ ಠೇವಣಿ ಖಾತೆಗಳಿಗೆ KYC ದಾಖಲಾತಿಗಳನ್ನು ಪಡೆದು ಕಡತಗಳಲ್ಲಿ ಇರಿಸಲು ಮತ್ತು ಸಾಧ್ಯವಾಗಿಲ್ಲದ ಖಾತೆಗಳಲ್ಲಿ ವ್ಯವಹಾರ ನಡೆಯದಂತೆ ತಡೆ ಹಾಕಲು ಕ್ರಮ ಸೂಚಿಸಿದೆ. **ಸಮಾಧಾನ :** KYC ದಾಖಲೆ ಪಡೆದ ನಂತರವೇ ವ್ಯವಹಾರ ನಡೆಸಲು ಅನುವು ಮಾಡಿದೆ.
	ಠೇವಣಿ ಬಗ್ಗೆ ಇತರೆ ಅಂಶಗಳು	2024–25 ರ ಸಾಲಾಂತ್ಯಕ್ಕೆ ಒಟ್ಟು ಠೇವಣಿಗಳು ರೂ. 2158,88,87,918.96 ಗಳು ಆಗಿದ್ದು, ಅದರಲ್ಲಿ ರೂ. 1804,24,85,201.00 ರಷ್ಟು ಟೈಮ್ ಲಯಾಬಿಲಿಟಿಯಾಗಿದ್ದು ಅಂದರೆ ಶೇಕಡ 83.57 ರಷ್ಟು ಇದ್ದು ಹಾಗೂ ರೂ.354,64,02,717.96 ಗಳು ಡಿಮ್ಯಾಂಡ್ ಲಯಬಿಲಿಟಿಯಾಗಿದ್ದು, ಅಂದರೆ ಶೇಕಡ 16.43 ರಷ್ಟು ಆಗಿರುತ್ತದೆ.
		2024–25ನೇ ಸಾಲಾಂತ್ಯಕ್ಕೆ ಒಟ್ಟು ಠೇವಣಿಗಳು ರೂ.2158,88,87,918.96 ಗಳು ಆಗಿದ್ದು, ಸದರಿ ಸಾಲಾಂತ್ಯಕ್ಕೆ ರೂ.43,96,30,115.70 ಠೇವಣಿ ಆಧಾರಿತ ಸಾಲಗಳು ಇರುತ್ತದೆ. ಅಂದರೆ ಠೇವಣಿಯ ಒಟ್ಟು ಮೊತ್ತದೊಂದಿಗೆ ನೀಡಿರುವ ಠೇವಣಿ ಆಧಾರ ಸಾಲದ ಪ್ರಮಾಣವನ್ನು ಹೋಲಿಸಿದಾಗ ಅದು ಶೇಕಡ 2.04 ರಷ್ಟು ಆಗಿರುತ್ತದೆ.
		ಮೇಲ್ಕಂಡ ಎಲ್ಲಾ ಠೇವಣಾತಿಗಳು ಠೇವಣಿ ವಿಮಾ ಯೋಜನೆಯನ್ವಯ "ಡಿಪಾಸಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್" ಮುಂಬಯಿರವರಿಂದ ವಿಮೆಗೊಳಪಟ್ಟಿದ್ದು, ವಿಮೆ ಕಂತನ್ನು ಕಾಲಕಾಲಕ್ಕೆ ಪಾವತಿ ಮಾಡಿದ್ದು ಪ್ರಸಕ್ತ ಸಾಲಿನಲ್ಲಿ ಒಟ್ಟು ಪ್ರೀಮಿಯಂ ರೂ.2,76,36,538.00 ಗಳನ್ನು ಪಾವತಿಸಲಾಗಿದೆ. ಠೇವಣಿ ವಿಮೆಯು ಸಾಲ್ಯಾಂತ್ಯದಲ್ಲಿ ಚಾಲ್ತಿಯಲ್ಲಿರುತ್ತದೆ.

18) ಸಹಾಯ ಧನಗಳು

ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ:	ಸಂಸ್ಥೆಯು ಸರ್ಕಾರದಿಂದ ಯಾವುದೇ ಸಹಾಯಧನ ಪಡೆದಿರುವುದಿಲ್ಲ.
ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ. (ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು)	ಅನ್ವಯಿಸುವುದಿಲ್ಲ
ಸಂಘವು ವರದಿ ಸಾಲಿನಲ್ಲಿ ಕೇಂದ್ರ/ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ)	ಅನ್ವಯಿಸುವುದಿಲ್ಲ.

19) ಇತರೆ ಜವಾಬ್ದಾರಿಗಳು ಮತ್ತು ಅವಕಾಶಗಳು :

(ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು)

ಎ) ಸಂಸ್ಥೆಯು ಸಾಲಾಖ್ಯೆರು ದಿನಾಂಕ : 31.03.2025 ಕ್ಕೆ ಈ ಕೆಳಗೆ ವಿವರಿಸಿರುವಂತೆ ರೂ. 62,10,01,581.38 ಗಳ ಇತರೆ ಜವಾಬ್ದಾರಿಗಳು ಮತ್ತು ಅವಕಾಶಗಳು ಹೊಂದಿರುತ್ತದೆ.

ಕ್ರ.ಸ	ವಿವರ	ಮೊಬಲಗು
1	ಸಾಮಾನ್ಯ ಅಮಾನತ್ತು	17,44,03,699.01
2	ವಿಲೇವಾರಿಯಾಗದ ಷೇರು ನಫೆ (ಡಿವಿಡೆಂಡ್)	1,30,45,547.00
3	2024–25 ನೇ ಸಾಲಿಗೆ ಸಿಬ್ಬಂದಿ ಎಕ್ಸ್‌ಗ್ರೇಷಿಯಾ ಪಾವತಿಗಾಗಿ ತೆಗೆದಿರಿಸಿರುವುದು	1,97,37,701.00
4	ಬಡ್ಡಿ ರಿಯಾಯಿತಿ ಪಾವತಿಸಬೇಕಾದದ್ದು	1,20,00,000.00
5	ಪೇ ಆರ್ಡರ್ ಪಾವತಿಸಬೇಕಾದ್ದು	3,49,11,760.12
6	ಪಾವತಿಸಬೇಕಾದ ಡಿ.ಡಿ.ಗಳು (ಹೆಚ್.ಡಿ.ಎಫ್.ಸಿ ಬ್ಯಾಂಕ್)	32,23,608.00
7	ಕೋರ್ಟು ಶುಲ್ಕಕ್ಕಾಗಿ ಕಾದಿರಿಸಿರುವುದು	1,69,09,180.90
8	ಲೆಕ್ಕ ಪರಿಶೋಧಕರ ಶುಲ್ಕ ಪಾವತಿಸಬೇಕಾಗಿರುವುದು	14,57,992.50
9	ಆದಾಯ ತೆರಿಗೆ ಪಾವತಿಸಬೇಕಾಗಿದ್ದು ಕಾದಿರಿಸಿರುವುದು	32,93,79,076.09
10	ಮೂಲದಲ್ಲೆ ಆದಾಯ ತೆರಿಗೆ ಕಡಿತ ಪಾವತಿಸಬೇಕಾಗಿರುವುದು	60,55,996.00
11	ಸಹಕಾರ ಶಿಕ್ಷಣ ನಿಧಿ ಪಾವತಿಸಬೇಕಾಗಿರುವುದು	66,00,000.00
12	ಚುನಾವಣಾ ಠೇವಣಿ ಪಾವತಿಸಬೇಕಾದ್ದು	16,000.00
13	ಜಿ.ಎಸ್.ಟಿ ಪಾವತಿಸಬೇಕಾದ್ದು	8,53,690.76
14	ಎಫ್.ಪಿ.ಎಫ್ ಪಾವತಿಸಬೇಕಾಗಿರುವುದು	1,57,500.00
15	ಸಿಬ್ಬಂದಿ ಕ್ಷೇಮ ವೆಚ್ಚ ಪಾವತಿಸಬೇಕಾಗಿರುವುದು	15,80,000.00
16	ನಿಶ್ಚಿತ ಠೇವಣಿ ಬಡ್ಡಿ ಪಾವತಿ ಸಂಬಂಧ ಅಮಾನತ್ತು	5,599.00
17	ಸ್ಟಾಂಪ್ ಡ್ಯೂಟಿ ಪಾವತಿಸಬೇಕಾದ್ದು	4,86,681.00
18	ಯಶಸ್ವಿನಿ ವಿಮೆ ಕಂತು ಪಾವತಿಸಬೇಕಾಗಿರುವುದು	1,77,550.00
	ಒಟ್ಟು	**62,10,01,581.38**

i) ಸಾಮಾನ್ಯ ಅಮಾನತ್ತು :

ವರ್ಷಾಂತ್ಯ 31.03.2025 ಕ್ಕೆ ಸಾಮಾನ್ಯ ಅಮಾನತ್ತು ಲೆಕ್ಕಗಳಲ್ಲಿ ರೂ. 17,44,03,699.01 ಗಳು ಮುಂದುವರೆದಿದೆ. ಸಾಮಾನ್ಯ ಅಮಾನತ್ತು ಲೆಕ್ಕಗಳಲ್ಲಿ ಉಳಿತಾಯ ಖಾತೆ ಹೊಂದಿಲ್ಲದ ಠೇವಣಿದಾರರ ಠೇವಣಿ ಸಾಲಕ್ಕೆ ಹೊಂದಾಣಿಕೆಯಾದ ನಂತರ ಉಳಿದ ಮೊಬಲಗು, ಸ್ಥಿರಾಸ್ತಿ ಸಾಲಕ್ಕೆ ಅಡಮಾನ ಮಾಡಿದ ಸ್ಥಿರಾಸ್ತಿ ಹರಾಜು ಹಾಕಿ ಸಾಲ ಹೊಂದಾಣಿಕೆಯಾದ ನಂತರ ಉಳಿದ ಮೊಬಲಗು, ಸ್ಥಿರಾಸ್ತಿ ಸಾಲ ವಸೂಲಿಗಾಗಿ ಹರಾಜು ಕ್ರಮದಲ್ಲಿ ಬಿಡ್ದುದಾರರಿಂದ ಸ್ವೀಕರಿಸಿದ ಮೊಬಲಗು, ವಾಹನ ಸಾಲಗಳಿಗೆ ಸಂಬಂಧಿಸಿದಂತೆ ಸಾಲಗಾರರು ಭರಿಸಬೇಕಾದ ಅಂತರ್ಧನ ಮೊಬಲಗು ಇತ್ಯಾದಿ ಇದ್ದು ಪರಿಶೀಲಿಸಲಾಗಿ ಕ್ರಮವಿರುವುದು ಕಂಡು ಬಂದಿದೆ.

ಸಂಸ್ಥೆಯು ಸಾಮಾನ್ಯ ಅಮಾನತ್ತು ಖಾತೆಗಳನ್ನು ಖೈದುಗೊಳಿಸಲು ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಸಮಾಧಾನ : ಅಮಾನತ್ತು ಲೆಕ್ಕಗಳನ್ನು ಖೈದುಗೊಳಿಸಲು ಕ್ರಮವಹಿಸಿದೆ.

ii) ವಿಲೇವಾರಿಯಾಗದ ಷೇರು ನಫೆ (ಡಿವಿಡೆಂಡ್) :

ಬ್ಯಾಂಕು ಸದಸ್ಯರುಗಳ ಷೇರು ನಫೆಯನ್ನು ಅವರು ಬ್ಯಾಂಕಿನಲ್ಲಿ ಹೊಂದಿರುವ ಉಳಿತಾಯ ಖಾತೆಗೆ ವರ್ಗಾಯಿಸಲಾಗುತ್ತಿದೆ. ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿರದ ಸದಸ್ಯರುಗಳಿಗೆ ಸಂಬಂಧಿಸಿದಂತೆ ದಿನಾಂಕ 31.03.2025 ಕ್ಕೆ ರೂ. 1,30,45,547.00 ಗಳ ಷೇರು ನಫೆಯನ್ನು (ಡಿವಿಡೆಂಡ್) ಸದಸ್ಯರುಗಳಿಗೆ ಪಾವತಿಸಲು ಬಾಕಿ ಇರುತ್ತದೆ. ಈ ಬಾಬ್ತು ಮೊಬಲಗು 2020–21 ನಿಂದ ಪಾವತಿಸಲು ಬಾಕಿ ಇದೆ ಎಂದು ತಿಳಿಸಿದ್ದು ಕುಳುವಾರು ಪಟ್ಟಿ ತಯಾರಿಸಿದೆ. ಬ್ಯಾಂಕಿನ ಬೈಲಾ ನಿಯಮ 107 ರಂತೆ 3 ವರ್ಷಕ್ಕೂ ಮೇಲ್ಪಟ್ಟ ಡಿವಿಡೆಂಡ್ ಮೊಬಲಗನ್ನು ಬ್ಯಾಂಕಿನ ಆಪದ್ಧನ ನಿಧಿಗೆ ವರ್ಗಾಯಿಸಲು ಕ್ರಮ ಸೂಚಿಸಿದೆ. ಎಲ್ಲಾ ಸದಸ್ಯರುಗಳ ಉಳಿತಾಯ ಖಾತೆಯನ್ನು ತೆರೆಯಲು ಮತ್ತು ವಿತರಣೆಯಾಗದ ಡಿವಿಡೆಂಡ್‌ನ್ನು ಅವರವರ ಉಳಿತಾಯ ಖಾತೆಗೆ ವರ್ಗಾಯಿಸಲು ಕ್ರಮವಿಡಲು ಸೂಚಿಸಿದೆ. ಪಾವತಿಸಬೇಕಾದ ಡಿವಿಡೆಂಡ್ ಲೆಕ್ಕದಲ್ಲಿ ರೂ.18,60,496.00 ಗಳು ಹೆಚ್ಚಾಗಿ ಮುಂದುವರೆದಿದ್ದು ಈ ಮೊಬಲಗನ್ನು ಷೇರು ಮುಕ್ತಾಯಗೊಂಡು ಡಿವಿಡೆಂಡ್ ಲೆಕ್ಕ ಹಾಕದ ಸಂದರ್ಭಗಳಲ್ಲಿ ಪಾವತಿಸಲು ಬಳಸಲಾಗುತ್ತಿರುವುದು ಕಂಡು ಬಂದಿದೆ.

ಸಮಾಧಾನ : ಉಳಿತಾಯ ಖಾತೆ ಹೊಂದಿರದ ಸದಸ್ಯರುಗಳಿಗೆ ಷೇರು ನಫೆ ಪಡೆಯಲು ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯಲು ಕೋರಲಾಗುತ್ತಿದೆ.

iii) 2024–25ನೇ ಸಾಲಿಗೆ ಸಿಬ್ಬಂದಿ ವರ್ಗದವರಿಗೆ ಎಕ್ಸ್‌ಗ್ರೇಷಿಯ ಕೊಡಬೇಕಾಗಿರುವುದು :

ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ 2024–25 ನೇ ಸಾಲಿನ ಅವಧಿಗೆ 30 ದಿನಗಳ ಸಂಬಳಕ್ಕೆ ಸಮನಾಗಿ ಎಕ್ಸ್‌ಗ್ರೇಷಿಯಾ ಪಾವತಿಗಾಗಿ ರೂ.1,97,37,701.00 ಗಳನ್ನು ಸಂಸ್ಥೆಯ ಬೈಲಾ ಹಾಗೂ ಬೋನಸ್ ಕಾಯಿದೆಗೊಳಪಟ್ಟು ಕಾಯ್ದಿರಿಸಲಾಗಿದೆ.

iv) ಬಡ್ಡಿ ರಿಯಾಯಿತಿ ಪಾವತಿಸಬೇಕಾದದ್ದು :

ಸದಸ್ಯರುಗಳು ಸಕಾಲದಲ್ಲಿ ಸಾಲದ ಕಂತುಗಳನ್ನು ಕಟ್ಟಲು ಪ್ರೇರೇಪಿಸುವ ಸಲುವಾಗಿ, 2024–25ನೇ ಸಾಲಿನಲ್ಲಿ ಸ್ಥಿರಾಸ್ತಿ ಸಾಲದ ಕಂತುಗಳನ್ನು ಸಕಾಲದಲ್ಲಿ ಪಾವತಿಸಿದ ಸದಸ್ಯರುಗಳಿಗೆ ಸದರಿ ಸಾಲಿನಲ್ಲಿ ಅವರು ಪಾವತಿಸಿದ ಒಟ್ಟು ಬಡ್ಡಿ ಮೊತ್ತದ ಶೇಕಡ 5 ರಷ್ಟು ಬಡ್ಡಿ ರಿಯಾಯಿತಿ ನೀಡುವ ಸಂಬಂಧದಲ್ಲಿ ಕಾದಿರಿಸಿರುವ ಮೊಬಲಗು ರೂ. 1,20,00,000.00 ಗಳು ದಿನಾಂಕ 31.03.2025 ಕ್ಕೆ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಜವಾಬ್ದಾರಿ ಕಡೆ ಮುಂದುವರೆದಿದೆ.

v) ಪೇ ಆರ್ಡರ್ ಪಾವತಿಸಬೇಕಾದ್ದು :

ದಿನಾಂಕ 31.03.2025 ಕ್ಕೆ 1550 ಪೇ ಆರ್ಡರ್‌ಗಳ ಬಾಬ್ತು ರೂ.3,49,11,760.12 ಗಳು ನಗದಾಗಲು ಬಾಕಿ ಇದ್ದು ಆಸ್ತಿ–ಜವಾಬ್ದಾರಿ ತಃಖ್ತೆಯ ಮೊಬಲಗಿಗೆ ತಾಳೆಯಾಗುತ್ತದೆ. ಅವುಗಳಲ್ಲಿ ಕೆಲವು ಪೇ ಆರ್ಡರ್‌ಗಳು ಮೂರು ವರ್ಷಕ್ಕೂ ಮೇಲ್ಪಟ್ಟು ಅವಧಿಯದ್ದಾಗಿರುತ್ತದೆ.

ಬಾಕಿ ಉಳಿದಿರುವ ಪೇ ಆರ್ಡರ್‌ಗಳ ಖರೀದಿದಾರರನ್ನು ಆಗಿಂದಾಗ್ಗೆ ಸಂಪರ್ಕಿಸಿ ಖೈದುಗೊಳಿಸಲು ಮತ್ತು 10 ವರ್ಷ ಅವಧಿ ಮೀರಿದ ಪೇ ಆರ್ಡರ್ ಮೊಬಲಗನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸಲು ಕ್ರಮ ಸೂಚಿಸಿದೆ.

ಸಮಾಧಾನ : ಕ್ಲೇಮು ಆಗದ ಧನಾದೇಶದ ಮೊಬಲಗನ್ನು DEA Fund ಗೆ ಪಾವತಿಸಲಾಗುತ್ತಿದೆ.

vi) ಪಾವತಿಸಬೇಕಾದ ಡಿ.ಡಿ. ಗಳು (ಹೆಚ್.ಡಿ.ಎಫ್.ಸಿ ಬ್ಯಾಂಕ್) :

ಈ ಸಂಸ್ಥೆಯು ಹೆಚ್.ಡಿ.ಎಫ್.ಸಿ ಬ್ಯಾಂಕಿನೊಂದಿಗೆ ಒಪ್ಪಂದ ಮಾಡಿಕೊಂಡು ಬ್ಯಾಂಕಿನ ಖಾತೆದಾರರಿಗೆ ಭಾರತದ ಆಯ್ದ ಸ್ಥಳಗಳಲ್ಲಿ ನಗದೀಕರಿಸಿಕೊಳ್ಳಬಹುದಾಗಿರುವ ಡಿ.ಡಿ. ನೀಡುವ ವ್ಯವಸ್ಥೆ ಮಾಡಿದೆ. ಸಾಲಾಂತ್ಯಕ್ಕೆ ಹೆಚ್.ಡಿ.ಎಫ್.ಸಿ

ಬ್ಯಾಂಕಿನ ಮುಖಾಂತರ ನೀಡಲಾಗಿರುವ 16 ಡಿ.ಡಿ ಗಳ ಬಾಬ್ತು ರೂ. 32,23,608/– ಗಳ ಡಿ.ಡಿ. ಗಳು ನಗದುಗೊಳ್ಳಲು ಬಾಕಿ ಇದ್ದು ಸಮನ್ವಯ ಪಟ್ಟಿಯ ಮೊಬಲಗು ಆಸ್ತಿ ಜವಾಬ್ದಾರಿ ತ:ಖ್ತೆಯ ಮೊಬಲಗಿನೊಂದಿಗೆ ತಾಳೆಯಾಗುತ್ತದೆ.

ಬಾಕಿ ಉಳಿದಿರುವ ಡಿಡಿಗಳ ಖರೀದಿದಾರರನ್ನು ಆಗಿಂದಾಗ್ಗೆ ಸಂಪರ್ಕಿಸಿ ಖೈದುಗೊಳಿಸಲು ಮತ್ತು 10 ವರ್ಷ ಅವಧಿ ಮೀರಿದ ಡಿಡಿ ಮೊಬಲಗನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸಲು ಕ್ರಮ ಸೂಚಿಸಿದೆ.

ಸಮಾಧಾನ : ಕ್ಲೇಮು ಆಗದ ಡಿಡಿ ಮೊಬಲಗನ್ನು DEA Fund ಗೆ ಪಾವತಿಸಲಾಗುತ್ತಿದೆ.

vii) ಕೋರ್ಟು ಶುಲ್ಕಕ್ಕಾಗಿ ಕಾದಿರಿಸಿರುವುದು :

ಸಂಸ್ಥೆಯಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುವ ಸದಸ್ಯರುಗಳ ವಿರುದ್ಧ ಸಾಲ ವಸೂಲಾತಿ ದಾವಾ ಕ್ರಮ ಜರುಗಿಸುವ ಸಂಬಂಧದಲ್ಲಿ ಸಂಸ್ಥೆಯು ಕೋರ್ಟು ಶುಲ್ಕ ಪ್ರತಿಕಾ ಪ್ರಕಟಣೆ ಇತ್ಯಾದಿ ವೆಚ್ಚ ಭರಿಸುತ್ತಿದ್ದು. ಅಂತಹ ಮೊಬಲಗಿನ ಪೈಕಿ ರೂ. 1,69,09,180.90 ಗಳು ಸದಸ್ಯರಿಂದ ಸ್ವೀಕರಿಸಲು ಬಾಕಿ ಇದ್ದು ಇತರೆ ಆಸ್ತಿ ಲೆಕ್ಕಗಳಲ್ಲಿ ಮುಂದುವರೆದಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನದ ಪ್ರಕಾರ ಇಂತಹ ಪಾವತಿಗಳನ್ನು ಖರ್ಚು ಎಂದು ಪರಿಗಣಿಸಿ, ವಸೂಲಾದ ಸಂದರ್ಭದಲ್ಲಿ ಲಾಭವೆಂದು ಪರಗಣಿಸಬೇಕಾಗಿರುವುದರಿಂದ ಸಂಸ್ಥೆಯು ಸಂಬಂಧಿಸಿದ ವೆಚ್ಚಗಳನ್ನು ಆಸ್ತಿ ಲೆಕ್ಕಗಳಲ್ಲಿ ತೋರಿಸಿರುವ ನಿಮಿತ್ತ ಸಂಬಂಧಿಸಿದ ಮೊತ್ತಕ್ಕೆ ಸಮವಾಗಿ ಆಸ್ತಿ ಜವಾಬ್ದಾರಿ ತ:ಖ್ತೆಗಳಲ್ಲಿ ಜವಾಬ್ದಾರಿ ಕಡೆ ಅವಕಾಶ ಕಲ್ಪಿಸಿದ್ದು ಮುಂದುವರೆದಿದೆ.

viii) ಲೆಕ್ಕ ಪರಿಶೋಧಕರ ಶುಲ್ಕ ಪಾವತಿಸಬೇಕಾಗಿರುವುದು :

2024–25 ನೇ ಸಾಲಿನ ಆರ್ಥಿಕ ತ:ಖ್ತೆಗಳನ್ನು ಪರಿಶೋಧನೆ ನಡೆಸುವ ಸಂಬಂಧದಲ್ಲಿ ತಗಲುವ ವೆಚ್ಚ ಮತ್ತು ಆಂತರಿಕ ಲೆಕ್ಕ ಪರಿಶೋಧಕರುಗಳಿಗೆ ಪಾವತಿಸಬೇಕಾದ ಬಾಕಿ ವೆಚ್ಚಗಳ ಪಾವತಿಗಾಗಿ ರೂ.14,57,992.50 ಗಳ ಅವಕಾಶವನ್ನು ಆರ್ಥಿಕ ತ:ಖ್ತೆಗಳಲ್ಲಿ ಕಲ್ಪಿಸಿದೆ.

ix) ಆದಾಯ ತೆರಿಗೆ ಪಾವತಿಸಬೇಕಾಗಿದ್ದು ಕಾದಿರಿಸಿರುವುದು :

ಆರ್ಥಿಕ ವರ್ಷ 2023–24 ಮತ್ತು 2024–25 ರ ಸಾಲುಗಳಿಗೆ ಬ್ಯಾಂಕು ತನ್ನ ಆದಾಯದ ಮೇಲೆ ತೆರಿಗೆ ಪಾವತಿಸಬೇಕಾದ ನಿಮಿತ್ತ ರೂ. 32,93,79,076.09 ಗಳ ಮೊಬಲಗನ್ನು ಆಯಾ ವರ್ಷದಲ್ಲಿ ಕಾದಿರಿಸಿ, ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ, ಜವಾಬ್ದಾರಿ ಕಡೆ ಕಾದಿರಿಸಿದೆ. ಈ ಪೈಕಿ ರೂ. 31,74,79,076.09 ಗಳನ್ನು ವರ್ಷಾಂತ್ಯಕ್ಕೆ ಆದಾಯ ತೆರಿಗೆ ಮುಂಗಡ ಪಾವತಿ ಲೆಕ್ಕಗಳಡಿಯಲ್ಲಿ ಪಾವತಿಸಲಾಗಿದೆ. ಉಳಿದ ಮೊಬಲಗು ರೂ. 1,19,00,000.00 ಗಳನ್ನು 2025–26 ರ ಸಾಲಿನ ಪ್ರಾರಂಭ ಮಾಸದಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ.

ಬ್ಯಾಂಕಿನ ಆದಾಯ ತೆರಿಗೆ ರಿಟರ್ನ್ಸ್‌ಗಳು ಆರ್ಥಿಕ ವರ್ಷ 2022–23 ರ ವರೆಗೆ ಆದಾಯ ತೆರಿಗೆ ಇಲಾಖೆಯವರಿಂದ ಒಪ್ಪಿತವಾಗಿದ್ದು ನಂತರದ ವರ್ಷದ ರಿಟರ್ನ್ಸ್ ಗಳ ಪರಿಶೀಲನೆಯನ್ನು ಆದಾಯ ತೆರಿಗೆ ಇಲಾಖೆಯವರು ತೆಗೆದುಕೊಳ್ಳಲು ಬಾಕಿ ಇರುವುದು ಪರಿಶೀಲನೆಯಲ್ಲಿ ಕಂಡು ಬಂದಿದೆ.

x) ಮೂಲದಲ್ಲೆ ಆದಾಯ ತೆರಿಗೆ ಕಡಿತ ಪಾವತಿಸಬೇಕಾಗಿರುವುದು :

ಆದಾಯ ತೆರಿಗೆ ಕಾನೂನಿನ ರೀತ್ಯಾ ಕೆಲವು ವೆಚ್ಚಗಳನ್ನು ಭರಿಸುವಾಗ ಮತ್ತು ಠೇವಣಿ ಬಡ್ಡಿ ಪಾವತಿಸುವಾಗ ಅಗತ್ಯ ಸಂದರ್ಭಗಳಲ್ಲಿ ಮೂಲದಲ್ಲೆ ಆದಾಯ ತೆರಿಗೆ ಕಡಿತ ಮಾಡಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕಾಗಿದ್ದು, ವರ್ಷಾಂತ್ಯದಲ್ಲಿ ಅಂತಹ ಮೊಬಲಗು ರೂ.60,55,996.00 ಗಳು ಆಸ್ತಿ–ಜವಾಬ್ದಾರಿ ತ:ಖ್ತೆಗಳಲ್ಲಿ ಜವಾಬ್ದಾರಿ ಕಡೆ ಮುಂದುವರೆದಿದೆ. ಇಂತಹ ಮೊಬಲಗನ್ನು ನಂತರದ ಮಾಹೆಯಲ್ಲಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕಾಗಿದ್ದು ಅರ್ಹ ಪಾವತಿಗಳನ್ನು ಮಾಡಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

xi) ಸಹಕಾರ ಶಿಕ್ಷಣ ನಿಧಿಗೆ ಪಾವತಿಸಬೇಕಾಗಿರುವುದು:

2024–25ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ನಿವ್ವಳ ಲಾಭದಲ್ಲಿ ಆಪದ್ಧನ ನಿಧಿಗೆ ತೆಗೆದಿರಿಸಿದ ನಂತರ ಉಳಿಯುವ ಮೊಬಲಗಿನ ಶೇಕಡ 2% ರಷ್ಟು ಮೊಬಲಗನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ

ಮತ್ತು ಶೇಕಡ 1 ರಷ್ಟು ಮೊಬಲಗನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ಸಹಕಾರ ಶಿಕ್ಷಣ ನಿಧಿಯಾಗಿ ಪಾವತಿಸಬೇಕಾಗಿದ್ದು, ಸಂಬಂಧವಾಗಿ ರೂ. 66,00,000.00 ಗಳನ್ನು ಆದಾಯ ತೆರಿಗೆ ನಿರ್ವಹಣಾ ದೃಷ್ಟಿಯಿಂದ ವರದಿ ವರ್ಷದ ಲೆಕ್ಕಗಳಲ್ಲಿ ಅವಕಾಶ ಮಾಡಿದ್ದು ವರ್ಷಾಂತ್ಯದಲ್ಲಿ ಸದರಿ ಮೊಬಲಗುಗಳು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಮುಂದುವರೆದಿದೆ.

xii) ಚುನಾವಣಾ ಠೇವಣಿ ಪಾವತಿಸಬೇಕಾಗಿರುವುದು:

ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳ ಸ್ಥಾನಕ್ಕೆ ದಿನಾಂಕ 05.01.2025 ರಂದು ಚುನಾವಣೆಯನ್ನು ಸಹಕಾರ ಸಂಘಗಳ ಚುನಾವಣಾ ಆಯೋಗ ನಡೆಸಿದ್ದು ಸಂಬಂಧದಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಇರಿಸಿದ್ದ ಚುನಾವಣಾ ಠೇವಣಿ ಬಾಬ್ತು ಪೈಕಿ ರೂ.16,000/– ಗಳು ಆಸ್ತಿ–ಜವಾಬ್ದಾರಿ ತಃಖ್ತೆಗಳಲ್ಲಿ ಜವಾಬ್ದಾರಿ ಕಡೆ ಮುಂದುವರೆದಿದೆ.

xiii) ಜಿ.ಎಸ್.ಟಿ ಪಾವತಿಸಬೇಕಾಗಿರುವುದು:

ವರ್ಷಾಂತ್ಯ 31.03.2025ಕ್ಕೆ ಜಿ.ಎಸ್.ಟಿ ಪಾವತಿಸಬೇಕಾಗಿರುವುದು ಬಾಬ್ತು ರೂ. 8,53,690.76 ಗಳು ಸಂಸ್ಥೆಯ ಆಸ್ತಿ–ಜವಾಬ್ದಾರಿ ಲೆಕ್ಕಗಳಲ್ಲಿ ಜವಾಬ್ದಾರಿ ಕಡೆ ಮುಂದುವರೆದಿರೆದಿದ್ದು, 2025–26 ರ ಸಾಲಿನ ಪ್ರಾರಂಭದಲ್ಲಿ ಸಂಬಂಧಿಸಿದವರಿಗೆ ಪಾವತಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

xiv) ಎಫ್.ಪಿ.ಎಫ್ ಪಾವತಿಸಬೇಕಾದ್ದು:

ಸಂಸ್ಥೆಯು ಮಾರ್ಚ್–2025 ರ ತಿಂಗಳ ಸಿಬ್ಬಂದಿ ಸಂಬಳ ಸಂಬಂಧ ತಾನು ಭರಿಸಬೇಕಾದ ಎಫ್.ಪಿ.ಎಫ್ ವಂತಿಗೆಯನ್ನು ಭವಿಷ್ಯ ನಿಧಿ ಇಲಾಖೆಗೆ ಪಾವತಿಸುವ ಸಲುವಾಗಿ ರೂ.1,57,500.00 ಗಳನ್ನು ಕಾದಿರಿಸಿದ್ದು ವರ್ಷಾಂತ್ಯದಲ್ಲಿ ಇತರೆ ಜವಾಬ್ದಾರಿ ಲೆಕ್ಕಗಳಲ್ಲಿ ಮುಂದುವರೆದಿದ್ದು, ಆರ್ಥಿಕ ವರ್ಷ 2025–26 ರ ಪ್ರಾರಂಭದಲ್ಲಿ ಸಂಬಂಧಿಸಿದವರಿಗೆ ಪಾವತಿಸಿರುತ್ತಾರೆ.

xv) ಸಿಬ್ಬಂದಿ ಕ್ಷೇಮ ನಿಧಿ ಪಾವತಿಸಬೇಕಾಗಿರುವುದು :

ಸಂಸ್ಥೆಯು ತನ್ನ ಸಿಬ್ಬಂದಿಯ ಒಂದು ಮಗುವಿಗೆ ಶಿಕ್ಷಣ ವೆಚ್ಚ ಭರಿಸುವ ಸಲುವಾಗಿ ಶೈಕ್ಷಣಿಕ ವರ್ಷವೊಂದರಲ್ಲಿ ಗರಿಷ್ಠ ರೂ. 10,000.00 ಗಳು ಅಥವಾ ನೈಜ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅಂತಹ ಮೊಬಲಗು ಪಾವತಿಸುವ ನೀತಿಯನ್ನು ಅಳವಡಿಸಿಕೊಂಡಿದ್ದು, ಈ ವೆಚ್ಚ ಭರಿಸಲು 2024–25 ರ ಸಾಲಿನಲ್ಲಿ ರೂ.15 ಲಕ್ಷಗಳ ಅವಕಾಶ ಕಲ್ಪಿಸಿದ್ದು, ವರ್ಷಾಂತ್ಯಕ್ಕೆ ರೂ. 15,80,000.00 ಗಳು ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಮುಂದುವರೆದಿದೆ.

xvi) ನಿಶ್ಚಿತ ಠೇವಣಿ ಬಡ್ಡಿ ಪಾವತಿ ಸಂಬಂಧ ಪಾವತಿಸಬೇಕಾದ್ದು:

ಸಂಸ್ಥೆಯು ವರ್ಷಾಂತ್ಯದಲ್ಲಿ ನಿಶ್ಚಿತ ಠೇವಣಿ ಬಡ್ಡಿ ಪಾವತಿ ಸಂಬಂಧ ರೂ.5,599.00 ಗಳು ಪಾವತಿಸಲು ಅಮಾನತ್ತು ಲೆಕ್ಕದಲ್ಲಿ ಮುಂದುವರೆದಿದೆ. ಈ ಮೊಬಲಗನ್ನು ಸಂಸ್ಥೆಯವರು 2025–26ರ ಸಾಲಿನ ಪ್ರಾರಂಭದಲ್ಲಿ ಸಂಬಂಧಿಸಿದ ಠೇವಣಿದಾರರಿಗೆ ಪಾವತಿಸಿರುತ್ತಾರೆ.

xvii) ಸ್ಟಾಂಪ್ ಡ್ಯೂಟಿ ಪಾವತಿಸಬೇಕಾದ್ದು:

ಸಂಸ್ಥೆಯವರು ಸಾಲಗಾರರಿಂದ ಸಾಲ ಪತ್ರಗಳಿಗೆ ಸಂಬಂಧಿಸಿದಂತೆ ಮಾರ್ಚ್–2025 ರ ಮಾಹೆಯಲ್ಲಿ ಸ್ಟಾಂಪ್ ಡ್ಯೂಟಿ ಪಾವತಿ ಮೊಬಲಗು ರೂ.4,86,681.00 ಸ್ವೀಕರಿಸಿದ್ದು, 2024–25 ರ ವರ್ಷಾಂತ್ಯಕ್ಕೆ ಜವಾಬ್ದಾರಿ ಲೆಕ್ಕದಲ್ಲಿ ಮುಂದುವರೆದಿದ್ದು ಅಂತಹ ಮೊಬಲಗನ್ನು 2025–26ರ ಸಾಲಿನ ಪ್ರಾರಂಭದಲ್ಲಿ ರಾಜ್ಯ ಸರ್ಕಾರಕ್ಕೆ ಪಾವತಿಸಿರುವುದು ಕಂಡು ಬಂದಿದೆ.

xviii) ಯಶಸ್ವಿನಿ ವಿಮೆ ಕಂತು ಪಾವತಿಸಬೇಕಾಗಿರುವುದು:

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ತನ್ನ ನಾಗರೀಕರಿಗೆ ಯಶಸ್ವಿನಿ ಆರೋಗ್ಯ ವಿಮೆ ಸೌಲಭ್ಯ ಒದಗಿಸಿದ್ದು ಬ್ಯಾಂಕಿನ ಸದಸ್ಯರು ಈ ಸೌಲಭ್ಯ ಪಡೆಯಬಹುದಾಗಿದೆ. ಯಶಸ್ವಿನಿ ಆರೋಗ್ಯ ವಿಮೆ ಸೌಲಭ್ಯ ಪಡೆಯಲು ಸದಸ್ಯನು ವಾರ್ಷಿಕ ರೂ. 1000.00 ಪಾವತಿಸಿ ತನ್ನ ಕುಟುಂಬದ ಒಟ್ಟು ನಾಲ್ಕು ಮಂದಿಗೆ ಗುಂಪು ಆರೋಗ್ಯ ವಿಮೆ ಸೌಲಭ್ಯವನ್ನು ರೂ. 5.00 ಲಕ್ಷಗಳವರೆವಿಗೆ ಪಡೆಯಬಹುದಾಗಿದೆ.

ಸದರಿ ಯಶಸ್ವಿನಿ ಆರೋಗ್ಯ ವಿಮೆ ಸೌಲಭ್ಯವು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಉಚಿತವಾಗಿದೆ. ಸಂಸ್ಥೆಯು ತನ್ನ ಸದಸ್ಯರಿಗೆ ರಾಜ್ಯ ಸರ್ಕಾರದ ಯಶಸ್ವಿನಿ ಆರೋಗ್ಯ ವಿಮೆ ಸೌಲಭ್ಯ ಒದಗಿಸಿದ್ದು, ಈ ಸಂಬಂಧದಲ್ಲಿ ಸದಸ್ಯರಿಂದ ಸ್ವೀಕರಿಸಿದ ಮೊಬಲಗು ರೂ. 1,77,550.00 ಪಾವತಿಗಾಗಿ ವರ್ಷಾಂತ್ಯ ಲೆಕ್ಕಗಳಲ್ಲಿ ಮುಂದುವರೆದಿರುವುದು ಮತ್ತು 2025–26 ರ ಸಾಲಿನ ಪ್ರಾರಂಭದಲ್ಲಿ ಸಂಬಂಧಿಸಿದವರಿಗೆ ಪಾವತಿಸಿರುವುದು ಕಂಡು ಬಂದಿದೆ.

ಬಿ. ಶಾಖಾ ಹೊಂದಾಣಿಕೆಗಳು :

ಆಡಳಿತ ಕಛೇರಿಯಲ್ಲಿ ನಿರ್ವಹಿಸುವ ಶಾಖೆಗಳ ಲೆಕ್ಕಗಳಿಗೂ ಮತ್ತು ಶಾಖೆಗಳಲ್ಲಿ ನಿರ್ವಹಿಸುವ ಆಡಳಿತ ಕಛೇರಿಯ ಲೆಕ್ಕಗಳಿಗೂ ಕ್ರೆಡಿಟ್ ಬಾಕಿಗಳ ಅಂತರ ರೂ.28,81,789.24 ಗಳಿರುತ್ತದೆ. ಈ ಸಂಬಂಧ ಶಾಖೆಗಳ ಹೊಂದಾಣಿಕೆ ಬಾಕಿ ಇರುವ ಎಂಟ್ರಿಗಳನ್ನು ಗುರ್ತಿಸಲಾಗಿದ್ದು, 48 ಕ್ರೆಡಿಟ್ ಎಂಟ್ರಿಗಳಿಂದ ಸದರಿ ಮೊಬಲಗು ಹೊಂದಾಣಿಕೆ ಬಾಕಿಯಿದೆ ಎಂದು ಕಂಡು ಬಂದಿದ್ದು ನಂತರದ ದಿನಗಳಲ್ಲಿ ಹೊಂದಾಣಿಕೆಯಾಗಿರುತ್ತದೆ.

ಕೇಂದ್ರ ಕಛೇರಿ ಶಾಖಾ ಲೆಕ್ಕಗಳ ಹೊಂದಾಣಿಕೆ ಪಟ್ಟಿಯನ್ನು ಪರಿಶೀಲಿಸಲಾಗಿ ಹೊಂದಾಣಿಕೆಯಾಗಲು ಬಾಕಿ ಇರುವ ಯಾವುದೇ ಎಂಟ್ರಿಯು ಒಂದು ತಿಂಗಳ ಅವಧಿ ಮೀರಿರುವುದಿಲ್ಲ.

ಸಿ. ವಸೂಲಾಗಬೇಕಾದ ಸಾಲ ಬಡ್ಡಿ ರಿಸರ್ವ್ :

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ಸಾಲಗಳ ಮೇಲೆ ಬರಬೇಕಾದ ಬಡ್ಡಿಯನ್ನು ಲೆಕ್ಕ ಹಾಕಿ ಅಂತಹ ಮೊಬಲಗನ್ನು ಆಸ್ತಿ ಜವಾಬ್ದಾರಿ ತ:ಖ್ತೆಗಳಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಸಂಸ್ಥೆಯವರು ದಿನಾಂಕ 31.03.2025 ಕ್ಕೆ ಇಂತಹ ಬರಬೇಕಾದ ಎಲ್ಲಾ ಸಾಲಗಳ ಪೈಕಿ ಅನುತ್ಪಾದಕ ಸಾಲಗಳ ಮೇಲಿನ ಬಾಕಿ ಬಡ್ಡಿ ಮೊಬಲಗು ರೂ.54,09,67,376.86 ಗಳನ್ನು ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿ ಆಸ್ತಿಯ ಕಡೆ ತೋರಿಸಿದ್ದು ಲಾಭದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದೆ ಇರಲು ಜವಾಬ್ದಾರಿ ಕಡೆ ಸಾಲಗಳ ಮೇಲೆ ಬರಬೇಕಾದ ಬಡ್ಡಿಗಾಗಿ ಅವಕಾಶವನ್ನು ಕಲ್ಪಿಸಲಾಗಿದೆ.

ಡಿ. ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿ :

ಸಂಸ್ಥೆಯು ದಿನಾಂಕ 31.03.2025 ಕ್ಕೆ ಠೇವಣಿಗಳ ಮೇಲೆ ಬಡ್ಡಿ ಪಾವತಿಗಾಗಿ ಅವಕಾಶಗಳಡಿಯಲ್ಲಿ ರೂ. 1,40,31,836.00 ಗಳನ್ನು ಹೊಂದಿದೆ. ಸಂಸ್ಥೆಯವರು ಕ್ಯಾಷ್ ಸರ್ಟಿಫಿಕೇಟ್ ಠೇವಣಿ, ಆವರ್ತಕ ಠೇವಣಿಗಳಿಗೆ ಸಂಬಂಧಿಸಿದಂತೆ ವರ್ಷಾಂತ್ಯದಲ್ಲಿ ಬಡ್ಡಿ ಆಕರಣೆ ಮಾಡಿ ಖಾತೆಗೆ ಜಮಾ ನೀಡಿದ್ದು, ನಿಶ್ಚಿತ ಠೇವಣಿ ಮತ್ತು ಇತರೆ ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿ ಪಾವತಿಗಾಗಿ ಅವಕಾಶಗಳನ್ನು ಈ ಲೆಕ್ಕಗಳಲ್ಲಿ ಮಾಡಿದೆ. ಹಾಗೆಯೇ ಮರುಪಾವತಿ ದಿನಾಂಕ ಮುಗಿದ ಅವಧಿ ಠೇವಣಿಗಳ ಮರುಪಾವತಿ ದಿನದಿಂದ ಅನ್ವಯವಾಗುವಂತೆ ಉಳಿತಾಯ ಖಾತೆ ಬಡ್ಡಿ ದರದಲ್ಲಿ ಬಡ್ಡಿ ಅವಕಾಶ ಸಹ ಮಾಡಿದ್ದು ಸದರಿ ಲೆಕ್ಕಗಳಲ್ಲಿ ಮುಂದುವರೆದಿದೆ.

20) ಲಾಭ ವಿಂಗಡಣೆ

ಹಿಂದಿನ ಸಾಲಿನ ಕ್ರೋಢೀಕೃತ ಲಾಭ	2023–24ನೇ ಸಾಲಿನ ನಿವ್ವಳ ಲಾಭ ರೂ. 28,50,29,761.36 ಗಳು
ಲಾಭ ವಿಂಗಡನೆಗೆ ಮಹಾ ಸಭೆಯು ಒಪ್ಪಿಗೆ ಪಡೆಯಲಾಗಿದೆಯೆ ? ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮ ಹಾಗೂ ಸಹಕಾರಿಯ ಉಪ ನಿಯಮ 22 ರನ್ವಯ ಮಾಡಿಕೊಳ್ಳಲಾಗಿದೆಯೇ ?	ಲಾಭ ವಿಂಗಡನೆಗೆ ಮಹಾಸಭೆಯ ಒಪ್ಪಿಗೆ ಪಡೆದಿದೆ. ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 57 ಮತ್ತು ಬ್ಯಾಂಕಿನ ಉಪನಿಯಮ 105 ರಂತೆ ಲಾಭ ವಿಂಗಡನೆ ಮಾಡಲಾಗಿದೆ.
ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ?	2023–24 ರ ಸಾಲಿಗೆ ಸದಸ್ಯರುಗಳ ಷೇರು ಮೊತ್ತಕ್ಕೆ ಶೇಕಡ 10 ರಂತೆ ಷೇರು ನಫೆ ಘೋಷಿಸಿದ್ದು ಲಾಭಾಂಶ ಹಂಚಿಕೆ ಮಾಡಿದೆ.

ವಿತರಣೆಯಾಗದ ಲಾಭಾಂಶದ ಮೊತ್ತ	ಇರುವುದಿಲ್ಲ
ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದು.	2024–25ರ ವರ್ಷಾಂತ್ಯಕ್ಕೆ ಪಾವತಿಸಬೇಕಾದ ಷೇರು ನಫೆ ಲೆಕ್ಕದಲ್ಲಿ ರೂ. 1,30,45,547.00 ಗಳು ಮುಂದುವರೆದಿವೆ. ಉಳಿತಾಯ ಖಾತೆ ಹೊಂದಿಲ್ಲದ ಸದಸ್ಯರುಗಳ ಷೇರು ನಫೆಯು ಈ ಲೆಕ್ಕಗಳಡಿಯಲ್ಲಿದ್ದು, 2020–21 ರ ನಂತರ ಅವಧಿಗೆ ಸಂಬಂಧಿಸಿದಾಗಿರುತ್ತದೆ. ಷೇರು ನಫೆ ಮಂಜೂರಾದ ದಿನಾಂಕದಿಂದ ಮೂರು ವರ್ಷಗಳಿಗೂ ಮೀರಿದ ಅವಧಿಗೆ ಮುಂದುವರೆದ ಷೇರು ನಫೆಯನ್ನು ಅಪದ್ಧನ ನಿಧಿಗೆ ವರ್ಗಾಯಿಸುವ ಬಗ್ಗೆ ಗಮನವಿರಿಸಲು ಸೂಚಿಸಿದೆ.

ಸಮಾಧಾನ : ಮಂಜೂರಾದ ಷೇರು ನಫೆಯನ್ನು ಮೂರು ವರ್ಷಗಳಿಗೂ ಮೀರಿ ಪಡೆಯದಿದ್ದಲ್ಲಿ ಅಂತಹ ಷೇರು ನಫೆಯನ್ನು ಬ್ಯಾಂಕಿನ ಅಪದ್ಧನ ನಿಧಿಗೆ ವರ್ಗಾಯಿಸಲು ಕ್ರಮವಿರಿಸಿದೆ.

21) ನಗದು ಶಿಲ್ಕು ಪರಿಶೀಲನೆ :

ಸಾಲಾಖ್ಯೆರಿಗೆ ಬ್ಯಾಂಕಿನಲ್ಲಿ ನಗದು ಶಿಲ್ಕು

1. ಶಾಖೆಗಳಲ್ಲಿ ರೂ. 4,66,33,426.00
2. ಎ.ಟಿ.ಎಂ. ನಲ್ಲಿ ರೂ. 44,82,300.00

ದಿನಾಂಕ : 31.03.2025 ಕ್ಕೆ ಶಾಖೆಗಳಲ್ಲಿರುವ ನಗದು ಶಿಲ್ಕು ಈ ಕೆಳಕಂಡಂತಿರುತ್ತದೆ.

ಪ್ರಧಾನ ಕಛೇರಿ ಶಾಖೆ	40,71,207.00
ವಿಜಯನಗರ ಶಾಖೆ	16,86,419.00
ಜಯನಗರ ಶಾಖೆ	37,56,300.00
ಇಂದಿರಾನಗರ ಶಾಖೆ	29,05,210.00
ಶಾಂತಿನಗರ ಶಾಖೆ	12,49,478.00
ಮಹಾಲಕ್ಷ್ಮೀಪುರ ಶಾಖೆ	23,21,910.00
ಸಂಜಯನಗರ ಶಾಖೆ	27,91,300.00
ಪದ್ಮನಾಭನಗರ ಶಾಖೆ	16,64,600.00
ಚಾಮರಾಜಪೇಟೆ ಪಶ್ಚಿಮ ಶಾಖೆ	21,88,000.00
ಕೋರಮಂಗಲ ಶಾಖೆ	40,39,006.00
ಆವಲಹಳ್ಳಿ ಶಾಖೆ	29,05,553.00
ಆರ್.ಟಿ.ನಗರ ಶಾಖೆ	16,50,000.00
ಜ್ಞಾನಜ್ಯೋತಿನಗರ ಶಾಖೆ	6,63,000.00
ಹೆಚ್.ಆರ್.ಬಿ.ಆರ್ ಲೇಔಟ್ ಶಾಖೆ	17,45,000.00
ಕೆ. ಆರ್. ಪುರಂ ಶಾಖೆ	23,06,353.00
ರಾಮನಗರ ಟೌನ್ ಶಾಖೆ	16,51,550.00
ಟಿ. ದಾಸರಹಳ್ಳಿ ಶಾಖೆ	14,10,000.00

ಕುವೆಂಪುನಗರ ಶಾಖೆ – ಮೈಸೂರು	15,64,668.00
ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ	10,85,000.00
ಯಲಹಂಕ ಶಾಖೆ	23,79,544.00
ಅಂಜನಾನಗರ ಶಾಖೆ	3,99,000.00
ಕೋಣನಕುಂಟೆ ಶಾಖೆ	22,00,328.00
ಒಟ್ಟು	**4,66,33,426.00**

ದಿನಾಂಕ 31.03.2025ಕ್ಕೆ ಶಾಖೆಯ ಎ.ಟಿ.ಎಂ ನಲ್ಲಿರುವ ನಗದು ಶಿಲ್ಕು ಈ ಕೆಳಕಂಡಂತಿರುತ್ತದೆ.

ಪ್ರಧಾನ ಕಛೇರಿ ಶಾಖೆ ಎಂ.ಟಿ.ಎಂ	6,67,100.00
ವಿಜಯನಗರ ಶಾಖೆ ಎಂ.ಟಿ.ಎಂ	9,16,700.00
ಜಯನಗರ ಶಾಖೆ ಎಂ.ಟಿ.ಎಂ	3,12,600.00
ಸಂಜಯನಗರ ಶಾಖೆ ಎಂ.ಟಿ.ಎಂ	7,28,800.00
ಪದ್ಮನಾಭನಗರ ಶಾಖೆ ಎಂ.ಟಿ.ಎಂ	3,69,000.00
ಟಿ. ದಾಸರಹಳ್ಳಿ ಶಾಖೆ ಎಂ.ಟಿ.ಎಂ	6,46,000.00
ಯಲಹಂಕ ಶಾಖೆ ಎಂ.ಟಿ.ಎಂ	4,60,300.00
ಕೋಣನಕುಂಟೆ ಶಾಖೆ ಎಂ.ಟಿ.ಎಂ	3,81,800.00
ಒಟ್ಟು	**44,82,300.00**

ಸಾಲಾಂತ್ಯಕ್ಕೆ ನಗದು ಶಿಲ್ಕನ್ನು ಪ್ರಧಾನ ಕಛೇರಿ ಮತ್ತು ಎಲ್ಲಾ ಶಾಖೆಗಳಲ್ಲಿ ಆಂತರಿಕ ಲೆಕ್ಕ ಪರಿಶೋಧಕರುಗಳು ಭೌತಿಕವಾಗಿ ಎಣಿಕೆ ಮಾಡಿ ಪರಿಶೀಲಿಸಿದ್ದು ಅವರುಗಳಿಗೆ ಸಂಬಂಧಿಸಿದ ಶಾಖೆಗಳ ವ್ಯವಸ್ಥಾಪಕರು ಹಾಗೂ ನಗದು ಗುಮಾಸ್ತರು ಜಂಟಿಯಾಗಿ ನಗದು ಶಿಲ್ಕನ್ನು ಪರಿಶೀಲನೆಗೆ ಹಾಜರುಪಡಿಸಿರುವುದು, ಸದರಿ ಮೊಬಲಗುಗಳು ಆ ದಿನದ ನಗದು ಪುಸ್ತಕದ ಶಿಲ್ಕಿನೊಂದಿಗೆ ತಾಳೆಯಿರುವುದು ಪರಿಶೀಲನೆಯಲ್ಲಿ ಕಂಡು ಬಂದಿದೆ.

ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು :

ಶಾಸನಬದ್ಧ ಲೆಕ್ಕ ಪರಿಶೋಧಕರು ಕೆಳಕಂಡ ದಿನಾಂಕಗಳಲ್ಲಿ ಶಾಖೆಗಳ ನಗದು ಶಿಲ್ಕನ್ನು ಭೌತಿಕವಾಗಿ ಪರಿಶೀಲಿಸಿದಾಗ ನಗದು ಶಿಲ್ಕು ಪುಸ್ತಕಕ್ಕೆ ತಾಳೆಯಾಗಿರುತ್ತದೆ.

ಶಾಖೆಯ ಹೆಸರು	ನಗದು ಶಿಲ್ಕು ಪರಿಶೀಲಿಸಿದ ದಿನಾಂಕ	ಮೊಬಲಗು ರೂಗಳಲ್ಲಿ	ಹಾಜರು ಪಡಿಸಿದ ಸಿಬ್ಬಂದಿ
ಪ್ರಧಾನ ಕಛೇರಿ ಶಾಖೆ	11.04.2025	39,51,828.00	ಶಾಖಾ ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರು
ವಿಜಯನಗರ ಶಾಖೆ	07.04.2025	29,60,958.00	–"–
ಜಯನಗರ ಶಾಖೆ	18.03.2025	40,74,158.00	–"–
ಇಂದಿರಾನಗರ ಶಾಖೆ	04.03.2025	32,39,750.00	–"–

ಶಾಂತಿನಗರ ಶಾಖೆ	02.04.2025	12,49,478.00	–"–
ಮಹಾಲಕ್ಷ್ಮೀಪುರ ಶಾಖೆ	21.05.2025	29,29,562.00	–"–
ಸಂಜಯನಗರ ಶಾಖೆ	21.03.2025	22,66,380.00	–"–
ಪದ್ಮನಾಭನಗರ ಶಾಖೆ	21.03.2025	18,08,585.00	–"–
ಚಾಮರಾಜಪೇಟೆ ಪಶ್ಚಿಮ ಶಾಖೆ	25.04.2025	46,11,521.00	–"–
ಕೋರಮಂಗಲ ಶಾಖೆ	15.04.2025	21,84,642.00	–"–
ಆವಲಹಳ್ಳಿ ಶಾಖೆ	27.03.2025	32,85,436.00	–"–
ಆರ್.ಟಿ.ನಗರ ಶಾಖೆ	11.04.2025	15,77,430.00	–"–
ಜ್ಞಾನಜ್ಯೋತಿನಗರ ಶಾಖೆ	17.03.2025	27,95,630.00	–"–
ಹೆಚ್.ಆರ್.ಬಿ.ಆರ್ ಲೇಔಟ್ ಶಾಖೆ	09.07.2024	26,60,422.00	–"–
ಕೆ. ಆರ್. ಪುರಂ ಶಾಖೆ	16.04.2025	23,09,728.00	–"–
ರಾಮನಗರ ಟೌನ್ ಶಾಖೆ	25.03.2025	15,67,914.00	–"–
ಟಿ. ದಾಸರಹಳ್ಳಿ ಶಾಖೆ	25.03.2025	21,53,627.00	–"–
ಕುವೆಂಪುನಗರ ಶಾಖೆ–ಮೈಸೂರು	24.03.2025	10,53,245.00	–"–
ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ	27.03.2025	12,92,604.00	–"–
ಯಲಹಂಕ ಶಾಖೆ	19.03.2025	23,14,423.00	–"–
ಅಂಜನಾನಗರ ಶಾಖೆ	19.03.2025	12,36,175.00	–"–
ಕೋಣನಕುಂಟೆ ಶಾಖೆ	28.03.2025	16,26,728.00	–"–

ಪರಿಶೀಲಿಸಿದ ನಗದು, ನಗದು ಪುಸ್ತಕದೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ?	ಲೆಕ್ಕ ಪರಿಶೋಧನಾ ವೇಳೆಯಲ್ಲಿ ನಗದು ಪರಿಶೀಲಿಸಿದ್ದು ನಗದುಗಳು ನಗದು ಪುಸ್ತಕದೊಂದಿಗೆ ಹೊಂದಾಣಿಕೆಯಾಗಿರುತ್ತವೆ.
ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರುಪಡಿಸಿದ ಕೈ ಶಿಲ್ಕಿನ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು	ಬ್ಯಾಂಕಿನ ಲೆಕ್ಕಗಳು ಗಣಕೀಕೃತಗೊಂಡಿದ್ದು ನಗದು ಪುಸ್ತಕವು ಪೂರ್ಣವಾಗಿ ಬರೆಯಲ್ಪಟ್ಟಿದೆ.
ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿದೆ ?	ಬ್ಯಾಂಕಿನ ಆಡಳಿತ ಮಂಡಳಿಯು ಶಾಖೆಗಳಲ್ಲಿ ಇರಿಸಿಕೊಳ್ಳಬಹುದಾದ ನಗದು ಮಿತಿಯನ್ನು ಪ್ರತಿ ಶಾಖೆಗೂ ಗೊತ್ತುಪಡಿಸಿದ್ದು, ಅದರ ವಿವರಗಳು ಕೆಳಕಂಡಂತಿರುತ್ತವೆ. ನಗದು ಶಿಲ್ಕು ಆಯಾ ಶಾಖೆಯ ಶಾಖಾ ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿ ಇರುತ್ತದೆ.

ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ.

ಬ್ಯಾಂಕಿನ ಶಾಖೆಗಳಲ್ಲಿ ಹಲವು ಬಾರಿ ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ನಗದು ಶಿಲ್ಕು ಉಳಿಸಿಕೊಂಡಿರುವ ಬಗ್ಗೆ ಗಮನಿಸಲಾಗಿದೆ. ಉದಾಹರಣೆಗಾಗಿ ಕೆಲವು ದಿನಗಳಲ್ಲಿದ್ದ ಮೊತ್ತಗಳ ಬಗ್ಗೆ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ. ಬ್ಯಾಂಕು ನಿಗದಿತ ನಗದು ಮಿತಿಯೊಳಗೆ ನಗದು ಶಿಲ್ಕನ್ನು ಉಳಿಸಿಕೊಳ್ಳುವ ಬಗ್ಗೆ ಗಮನ ಕೊಡುವುದು ಅವಶ್ಯಕವಾಗಿರುತ್ತದೆ.

ಸಮಾಧಾನ : ಶಾಖೆಗಳಲ್ಲಿ ನಿಗದಿತ ಶಿಲ್ಕುಗಳನ್ನು ನಿಗದಿತ ಮಿತಿಯಲ್ಲಿರಿಸಲು ಕ್ರಮವಿಟ್ಟಿದೆ.

ಶಾಖೆಗಳು	ದಿನಾಂಕ	ಮೊಬಲಗು	ನಗದು ಮಿತಿ	ಹೆಚ್ಚಿಗೆ ಇರುವುದು
ಪ್ರಧಾನ ಕಛೇರಿ ಶಾಖೆ	18.05.2024	1,00,81,643.00	1,00,00,000.00	81,643.00
ವಿಜಯನಗರ ಶಾಖೆ	03.01.2025	71,83,765.00	60,00,000.00	11,83,765.00
ಜಯನಗರ ಶಾಖೆ	28.03.2025	75,37,084.00	50,00,000.00	25,37,084.00
ಇಂದಿರಾನಗರ ಶಾಖೆ	15.03.2025	58,65,793.00	50,00,000.00	8,65,793.00
ಶಾಂತಿನಗರ ಶಾಖೆ	21.05.2024	42,61,195.00	30,00,000.00	12,61,195.00
ಮಹಾಲಕ್ಷ್ಮೀಪುರ ಶಾಖೆ	09.09.2024	55,91,829.00	50,00,000.00	5,91,829.00
ಸಂಜಯನಗರ ಶಾಖೆ	27.05.2024	45,55,785.00	40,00,000.00	5,55,785.00
ಪದ್ಮನಾಭನಗರ ಶಾಖೆ	31.05.2024	45,38,768.00	30,00,000.00	15,38,768.00
ಚಾಮರಾಜಪೇಟೆ ಪಶ್ಚಿಮ ಶಾಖೆ	23.09.2024	43,88,838.00	40,00,000.00	3,88,838.00
ಕೋರಮಂಗಲ ಶಾಖೆ	08.10.2024	71,00,846.00	40,00,000.00	31,00,846.00
ಆವಲಹಳ್ಳಿ ಶಾಖೆ	07.10.2024	49,78,039.00	40,00,000.00	9,78,039.00
ಆರ್.ಟಿ.ನಗರ ಶಾಖೆ	24.09.2024	47,59,463.00	30,00,000.00	17,59,463.00
ಜ್ಞಾನಜ್ಯೋತಿನಗರ ಶಾಖೆ	26.06.2024	32,80,618.00	30,00,000.00	2,80,618.00
ಹೆಚ್.ಆರ್.ಬಿ.ಆರ್ ಲೇಔಟ್ ಶಾಖೆ	05.06.2024	54,92,519.00	30,00,000.00	24,92,519.00
ಕೆ. ಆರ್. ಪುರಂ ಶಾಖೆ	03.08.2024	41,23,848.00	40,00,000.00	1,23,848.00
ರಾಮನಗರ ಟೌನ್ ಶಾಖೆ	14.08.2024	15,51,533.00	15,00,000.00	51,533.00
ಟಿ. ದಾಸರಹಳ್ಳಿ ಶಾಖೆ	14.06.2024	30,06,173.00	30,00,000.00	6,173.00
ಕುವೆಂಪುನಗರ ಶಾಖೆ–ಮೈಸೂರು	03.09.2024	33,99,483.00	25,00,000.00	8,99,483.00
ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ	10.02.2025	21,16,256.00	20,00,000.00	1,16,256.00
ಯಲಹಂಕ ಶಾಖೆ	13.06.2024	39,95,117.00	30,00,000.00	9,95,117.00
ಅಂಜನಾನಗರ ಶಾಖೆ	26.12.2024	29,25,121.00	25,00,000.00	4,25,121.00
ಕೋಣನಕುಂಟೆ ಶಾಖೆ	06.07.2024	34,57,590.00	30,00,000.00	4,57,590.00

ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ.	ಬ್ಯಾಂಕುಗಳಲ್ಲಿರುವ ನಗದು ಶಿಲ್ಕು ಮತ್ತು ಅಡಮಾನ ಪಡೆದ ಒಡವೆಗಳಿಗೆ ಸಂಬಂಧಿಸಿದಂತೆ ಒಟ್ಟು ರೂ. 40.95 ಕೋಟಿಗಳಿಗೆ IFFCO TOKIO ರವರಿಂದ ಬ್ಯಾಂಕರ್ಸ್ ಬ್ಲಾಂಕೆಟ್ ವಿಮೆ ಪಡೆದಿದ್ದು ವಿಮೆಯು ದಿನಾಂಕ 21.04.2026 ರವರೆಗೆ ಚಾಲ್ತಿಯಲ್ಲಿರುತ್ತದೆ.

ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತರು ಪರೀಕ್ಷಿಸಿದ್ದಾರೆಯೆ?

ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಆಡಳಿತ ಕಛೇರಿಯಿಂದ ನಿಯೋಜಿತಗೊಂಡ ಹಿರಿಯ ಅಧಿಕಾರಿಗಳು ಆಗಿಂದಾಗ್ಗೆ ಶಾಖೆಗಳ ನಗದು ಶಿಲ್ಕನ್ನು ಭೌತಿಕವಾಗಿ ಪರಿಶೀಲಿಸುವ ವ್ಯವಸ್ಥೆ ಜಾರಿಯಲ್ಲಿದ್ದು, ಈ ರೀತಿ ಪರಿಶೀಲಿಸಿದಾಗ ನಗದು ಶಿಲ್ಕು ಪುಸ್ತಕಕ್ಕೆ ತಾಳೆಯಾಗಿರುತ್ತದೆ. ಉದಾಹರಣೆ :

ಶಾಖೆಯ ಹೆಸರು	ನಗದು ಶಿಲ್ಕು ಪರಿಶೀಲಿಸಿದ ದಿನಾಂಕ	ಮೊಬಲಗು
ಪ್ರಧಾನ ಕಛೇರಿ ಶಾಖೆ	27.01.2025	62,58,510.00
ವಿಜಯನಗರ ಶಾಖೆ	29.03.2025	16,86,419.00
ಜಯನಗರ ಶಾಖೆ	19.07.2024	29,36,329.00
ಇಂದಿರಾನಗರ ಶಾಖೆ	06.12.2024	31,23,703.00
ಶಾಂತಿನಗರ ಶಾಖೆ	22.01.2025	24,77,392.00
ಮಹಾಲಕ್ಷ್ಮೀಪುರ ಶಾಖೆ	08.04.2024	31,99,641.00
ಸಂಜಯನಗರ ಶಾಖೆ	22.01.2025	23,45,363.00
ಪದ್ಮನಾಭನಗರ ಶಾಖೆ	04.06.2024	29,51,285.00
ಚಾಮರಾಜಪೇಟೆ ಪಶ್ಚಿಮ ಶಾಖೆ	05.10.2024	22,71,514.00
ಕೋರಮಂಗಲ ಶಾಖೆ	27.05.2024	27,53,917.00
ಆವಲಹಳ್ಳಿ ಶಾಖೆ	19.08.2024	17,97,036.00
ಆರ್.ಟಿ.ನಗರ ಶಾಖೆ	17.04.2024	3,73,391.00
ಜ್ಞಾನಜ್ಯೋತಿನಗರ ಶಾಖೆ	10.09.2024	19,78,040.00
ಹೆಚ್.ಆರ್.ಬಿ.ಆರ್ ಲೇಔಟ್ ಶಾಖೆ	05.12.2024	15,00,740.00
ಕೆ. ಆರ್. ಪುರಂ ಶಾಖೆ	16.01.2025	27,17,263.00
ರಾಮನಗರ ಟೌನ್ ಶಾಖೆ	05.11.2024	19,71,490.00
ಟಿ. ದಾಸರಹಳ್ಳಿ ಶಾಖೆ	04.12.2024	18,16,833.00
ಕುವೆಂಪುನಗರ ಶಾಖೆ–ಮೈಸೂರು	08.11.2024	19,31,349.00
ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ	28.05.2024	13,58,405.00
ಯಲಹಂಕ ಶಾಖೆ	20.01.2025	19,22,771.00
ಅಂಜನಾನಗರ ಶಾಖೆ	11.09.2024	17,66,204.00
ಕೋಣನಕುಂಟೆ ಶಾಖೆ	29.03.2025	22,00,328.00

22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು :

i) ಸಂಘವು ಹೊಂದಿದ ವಿವಿಧ ಬ್ಯಾಂಕು ಖಾತೆಗಳ ವಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢೀಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.)

ಸ.ಕ್ರ.	ವಿವರ	ಬ್ಯಾಂಕು ದೃಢೀಕರಣ ದಂತೆ / ಪಾಸ್ ಪುಸ್ತಕದಂತೆ ಶಿಲ್ಕು	ಆಸ್ತಿ – ಜವಾಬ್ದಾರಿಯಂತೆ ಶಿಲ್ಕು	ಅಂತರ	ಷರಾ
1	ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ	75,54,050.44	75,54,050.44	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.
2	ಭಾರತೀಯ ರಿಸರ್ವ್ ಬ್ಯಾಂಕ್ ಚಾಲ್ತಿ ಖಾತೆ ಲೆಕ್ಕದಲ್ಲಿ	11,57,80,978.93	11,57,80,978.93	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.
3	ಹೆಚ್.ಡಿ.ಎಫ್.ಸಿ. ಬ್ಯಾಂಕ್ ಚಾಲ್ತಿ ಖಾತೆ ಲೆಕ್ಕದಲ್ಲಿ	7,26,977.19	36,60,239.19	(–) 29,33,262	ಸಮನ್ವಯ ಪಟ್ಟಿ ತಯಾರಿಸಿದೆ.
4)	ಬಿ.ಡಿ & ಬಿ.ಆರ್.ಡಿ.ಸಿ.ಸಿ. ಬ್ಯಾಂಕ್ ಚಾಲ್ತಿ ಖಾತೆ ಲೆಕ್ಕದಲ್ಲಿ	2,17,961.59	2,17,961.59	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.
5	ಐ.ಡಿ.ಬಿ.ಐ. ಬ್ಯಾಂಕ್ ಚಾಲ್ತಿ ಖಾತೆ ಲೆಕ್ಕದಲ್ಲಿ	86,17,25,488.99	86,17,25,488.99	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.
6	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (SBT) ಚಾಲ್ತಿ ಖಾತೆ ಲೆಕ್ಕದಲ್ಲಿ	2,62,20,805.82	2,62,20,805.82	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.
7	ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ (ಎಟಿಎಂ)	73,08,168.40	70,94,746.42	(+)2,13,421.98	ಸಮನ್ವಯ ಪಟ್ಟಿ ತಯಾರಿಸಿದೆ.
8	ಇಂಡಸ್‌ಇಂಡ್ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ	2,83,98,586.71	2,62,12,312.71	(+)23,86,274.00	ಸಮನ್ವಯ ಪಟ್ಟಿ ತಯಾರಿಸಿದೆ.
9	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (SBM) ಚಾಲ್ತಿ ಖಾತೆ	7,18,959.03	7,18,959.03	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.
10	ಇಂಡಸ್‌ಇಂಡ್ ಬ್ಯಾಂಕಿನಲ್ಲಿ ಚಾಲ್ತಿ ಖಾತೆ (NACH)	34,82,825.93	34,82,825.93	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.

11	ಆಕ್ಸಿಸ್ ಬ್ಯಾಂಕಿನಲ್ಲಿ ಚಾಲ್ತಿ ಖಾತೆ	1,91,85,018.87	1,91,81,583.23	(+) 3,435.64	ಸಮನ್ವಯ ಪಟ್ಟಿ ತಯಾರಿಸಿದೆ.
12	ಆಕ್ಸಿಸ್ ಬ್ಯಾಂಕಿನಲ್ಲಿ ಚಾಲ್ತಿ ಖಾತೆ (UPI)	1,42,84,657.77	1,44,75,063.91	(–) 1,90,406.14	ಸಮನ್ವಯ ಪಟ್ಟಿ ತಯಾರಿಸಿದೆ.
13	ಡೊಂಬವಿಲಿ ನಾಗರೀಕ ಸಹಕಾರ ಬ್ಯಾಂಕಿನಲ್ಲಿ BBPS ಸಂಬಂಧ	9,38,893.91	9,38,893.91	–ಇಲ್ಲ–	ಸಮನ್ವಯ ಪಟ್ಟಿ ತಯಾರಿಸಿದೆ.

ಬ್ಯಾಂಕು ತನ್ನ ಗ್ರಾಹಕರ ನೀರಿನ ಬಿಲ್ಲು, ಎಲೆಕ್ರಿಕಲ್ ಬಿಲ್ಲು, ದೂರವಾಣಿ ಬಿಲ್ಲು, ಇತ್ಯಾದಿ ಪಾವತಿಗಳನ್ನು ಬ್ಯಾಂಕಿನ ಮೂಲಕ ಮಾಡುವ ಉದ್ದೇಶದಿಂದ **ಭಾರತ್ ಬಿಲ್ಲು ಪೇಮೆಂಟ್ ವ್ಯವಸ್ಥೆ (BBPS)** ಡೊಂಬವಿಲಿ ನಾಗರೀಕ ಸಹಕಾರ ಬ್ಯಾಂಕಿನ **DNSB A/c** ಸಹಯೋಗದೊಂದಿಗೆ ಜಾರಿ ಮಾಡಿದೆ. ಈ ಸಂಬಂಧದಲ್ಲಿ ಡೊಂಬವಿಲಿ ನಾಗರೀಕ ಸಹಕಾರ ಬ್ಯಾಂಕಿಗೆ ಮುಂಗಡವಾಗಿ ಪಾವತಿಸಿದ ಮೊಬಲಗಿನಲ್ಲಿ ರೂ. 9,38,893.91 ಗಳು ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಮುಂದುವರೆದಿದೆ. ಮೇಲ್ಕಾಣಿಸಿದ ಎಲ್ಲಾ ಬ್ಯಾಂಕ್‌ಗಳ ಮೊಬಲಗುಗಳಿಗೆ ಸಂಬಂಧಪಟ್ಟ ಖಾತೆಗಳಲ್ಲಿನ ವ್ಯವಹಾರದ ಪಟ್ಟಿಗಳನ್ನು ಅಥವಾ ಪಾಸು ಪುಸ್ತಕಗಳನ್ನು ಹಾಗೂ ಸದರಿ ಬ್ಯಾಂಕ್‌ಗಳಿಂದ ಸಾಲಾಖ್ಯೆರಿಗೆ ಪಡೆದಿರುವ ದೃಢೀಕರಣ ಪತ್ರಗಳನ್ನು ಪರಿಶೀಲನೆಗೆ ಹಾಜರುಪಡಿಸಿರುತ್ತಾರೆ. ಈ ಬ್ಯಾಂಕಿನ ಲೆಕ್ಕಗಳ ಬಗ್ಗೆ ಸಂಸ್ಥೆಯವರು ಸಾಲಾಂತ್ಯಕ್ಕೆ ಸಮನ್ವಯ ತಾಳೆ ಪಟ್ಟಿಯನ್ನು ತಯಾರಿಸಿ ಪರಿಶೀಲನೆಗೆ ಒಳಪಡಿಸಿದ್ದು, ಸಮನ್ವಯ ಲೆಕ್ಕಗಳ ಪರಿಶೀಲನೆ ಮಾಡಲಾಗಿ ಸದರಿ ಮೊಬಲಗುಗಳು ಬ್ಯಾಂಕಿನ ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿರುವ ಶಿಲ್ಕು ಮೊಬಲಗುಗಳೊಂದಿಗೆ ತಾಳೆ ಹೊಂದಿರುತ್ತದೆ.

ii. ಕರೆ ಹಾಗೂ ಅಲ್ಪಸೂಚನೆ ಮೇಲೆ ಪಡೆಯಬಹುದಾದ ಠೇವಣಿ :

ಸಂಸ್ಥೆಯು ತನ್ನ ದೈನಂದಿನ ವ್ಯವಹಾರದಲ್ಲಿ CRR ಮೀಸಲು ಇರಿಸಿದ ನಂತರ ಉಳಿಯುವ ಮೊಬಲಗನ್ನು ಲಾಭ ಗಳಿಕೆ ದೃಷ್ಟಿಯಿಂದ ಮತ್ತು ಲಿಕ್ವಿಡಿಟಿ ಅವಶ್ಯಕತೆಗನುಗುಣವಾಗಿ ಕರೆ ಠೇವಣಿಯಲ್ಲಿ ಇರಿಸುವ ಸಂಪ್ರದಾಯದಂತೆ ದಿನಾಂಕ 31.03.2025 ಅಂತಹ ಮೊಬಲಗು ರೂ. 10,24,00,000.00 ಗಳನ್ನು SBI-DFHI ಕರೆ ಠೇವಣಿಯಲ್ಲಿ ಮುಂದುವರೆದಿದ್ದು ಅದರ ಬಡ್ಡಿ ದರ ವಾರ್ಷಿಕ ಶೇಕಡ 7.05 ಆಗಿರುತ್ತದೆ.

ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಮಂಜೂರಾತಿ ಪಡೆದಿದೆಯೇ?	ಭಾರತೀಯ ರಿಸರ್ವ್ ಬ್ಯಾಂಕಿನ ನೀತಿ ನಿಯಮಾವಳಿಗಳ ರೀತ್ಯಾ ಸದರಿ ಚಾಲ್ತಿ ಖಾತೆಗಳನ್ನು ಹೊಂದಿರುತ್ತಾರೆ.
ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ	ನಿಷ್ಕ್ರಿಯ ಖಾತೆಗಳು ಇರುವುದಿಲ್ಲ.
ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ	ಇವು ಚಾಲ್ತಿ ಖಾತೆಗಳಾಗಿದ್ದು (ಬ್ಯಾಂಕ್ ಹೊಂದಿರಬೇಕಾದ CRR ನಿರ್ವಹಣೆ ಮತ್ತು ಇತರೆ ಉದ್ದೇಶಗಳಿಗಾಗಿ) ಖಾತೆಗಳಲ್ಲಿ ಆದಾಯ ಬಂದಿರುವುದಿಲ್ಲ.

23) ಹೂಡಿಕೆಗಳು :

ದಿನಾಂಕ:31.03.2025ಕ್ಕೆ ಸಂಘವು ಹೊಂದಿರುವ ಹೂಡಿಕೆಗಳು ಒಟ್ಟು ರೂ.1224,84,56,790.83 ಗಳನ್ನು ಸಂಸ್ಥೆಯವರು ಈ ಕೆಳಕಂಡಂತೆ ವಿವಿಧ ರೂಪದ ಸಾಲ ಪತ್ರ / ಬಾಂಡ್ / ಮ್ಯೂಚುವಲ್ ಫಂಡ್ / ಠೇವಣಿಗಳಲ್ಲಿ ಮತ್ತು ವಿವಿಧ ಸಹಕಾರ ಸಂಸ್ಥೆಗಳ ಷೇರುಗಳ ರೂಪದಲ್ಲಿ ಗುಂತಾಯಿಸಿರುತ್ತಾರೆ.

ಕ್ರ.ಸ.	ವಿಂಗಡಣೆ	2024–2025ನೇ ಸಾಲಿನ ಅಂತ್ಯಕ್ಕೆ ಇರುವ ಹೂಡಿಕೆ ಮೊತ್ತ	ದಿನಾಂಕ 31.03.2025 ಕ್ಕೆ ನಿವ್ವಳ ಮೌಲ್ಯ (ಅನ್ವಯವಾಗುವ ಗುಂತಾಯಗಳಿಗೆ)
i)	**ಸರ್ಕಾರದ ಸಾಲ ಪತ್ರಗಳಲ್ಲಿ**		
1	ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಲ ಪತ್ರಗಳಲ್ಲಿ	951,51,46,806.00	959,57,56,523.00
ii)	**ಟ್ರಸ್ಟೀ ಸೆಕ್ಯೂರಿಟಿಗಳಲ್ಲಿ**		
1	ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ	70,00,00,000.00	–––
2	ಬೆಂಗಳೂರು ಜಿಲ್ಲಾ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಠೇವಣಿ	5,00,000.00	–––
iii)	**ಸಹಕಾರ ಸಂಸ್ಥೆಗಳ ಷೇರುಗಳಲ್ಲಿ**		
1	ಬೆಂಗಳೂರು ಜಿಲ್ಲಾ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಷೇರು	25,000.00	–––
2	ಇಫ್ಕೊ ನಿಯಮಿತ, ದೆಹಲಿಯಲ್ಲಿ ಷೇರು	20,00,000.00	–––
3	ನ್ಯಾಷನಲ್ ಕೋ–ಆಪರೇಟಿವ್ ಫೈನಾನ್ಸ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿ., ದೆಹಲಿಯಲ್ಲಿ ಷೇರು	100,00,000.00	–––
iv)	**ತೆರಿಗೆ ರಹಿತ ಬಾಂಡ್‌ಗಳಲ್ಲಿ ಮತ್ತು ಇತರೆ ಬಾಂಡ್‌ಗಳಲ್ಲಿ**		
1	ಎನ್‌ಹೆಚ್‌ಎಐ ತೆರಿಗೆ ರಹಿತ ಬಾಂಡ್‌ನಲ್ಲಿ ಹೂಡಿಕೆ	1,75,96,000.00	2,04,37,774.89
2	ಐಆರ್‌ಇಡಿಎ ತೆರಿಗೆ ರಹಿತ ಬಾಂಡ್‌ನಲ್ಲಿ ಹೂಡಿಕೆ	1,02,18,000.00	1,17,26,217.67
3	ಹುಡ್ಕೊ ತೆರಿಗೆ ರಹಿತ ಬಾಂಡ್‌ನಲ್ಲಿ ಹೂಡಿಕೆ	88,26,000.00	1,02,80,612.14
4	ಐಆರ್‌ಎಫ್‌ಸಿ ತೆರಿಗೆ ರಹಿತ ಬಾಂಡ್‌ನಲ್ಲಿ ಹೂಡಿಕೆ	11,76,000.00	13,67,812.66
5	ನಬಾರ್ಡ್ ತೆರಿಗೆ ರಹಿತ ಬಾಂಡ್‌ನಲ್ಲಿ ಹೂಡಿಕೆ	10,02,000.00	11,65,749.85
6	ಆಂಧ್ರಪ್ರದೇಶ ವಿಶೇಷ ಬಾಂಡ್‌ಗಳು	1,35,00,000.00	1,37,77,074.00

v)	**ಇತರೆ ಬ್ಯಾಂಕುಗಳಲ್ಲಿ ಠೇವಣಿ**		
1	ಶ್ಯಾಮರಾವ್ ವಿತ್ತಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ನಲ್ಲಿ ನಿಶ್ಚಿತ ಠೇವಣಿ	20,00,00,000.00	–––
2	ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ	1,00,00,000.00	–––
3	ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ	13,97,00,000.00	–––
4	ಜನಾ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ	14,97,00,000.00	–––
5	ಆಕ್ಸಿಸ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ	7,87,04,983.00	–––
6	ಎ.ಯು. ಸ್ಮಾಲ್ ಫೆನಾನ್ಸ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ	5,04,00,000.00	–––
7	ಬಂಧನ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ	21,00,00,000.00	–––
8	ಸಾರಸ್ವತ್ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ	15,00,00,000.00	–––
9	ಡಿಸಿಬಿ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ	10,00,00,000.00	
10	ಕಾಸ್ಮೋಸ್ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ	12,00,00,000.00	
vi)	**ಮ್ಯೂಚುವಲ್ ಫಂಡ್‌ಗಳಲ್ಲಿ**		
1	ಟಾಟಾ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ	4,99,97,500.12	5,61,24,512.16
2	ಐ.ಸಿ.ಐ.ಸಿ.ಐ. ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ	11,49,94,250.28	13,37,72,906.71
3	ನಿಪ್ಪಾನ್ ರಿಲೈಯನ್ಸ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	5,99,97,000.14	7,04,95,388.19
4	ಬಿರ್ಲಾ ಸನ್ ಲೈಫ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	5,99,97,000.14	7,07,47,143.01
5	ಕೋಟಕ್ ಮಹೀಂದ್ರ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	11,99,94,000.29	13,09,05,929.86
6	ಎಸ್.ಬಿ.ಐ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	4,99,97,500.12	5,71,51,592.71
7	ಆಕ್ಸಿಸ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	4,99,97,500.12	6,13,22,329.08
8	ಹೆಚ್.ಡಿ.ಎಫ್.ಸಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	5,49,97,250.13	6,28,20,000.77
9	ಬಂಧನ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	8,99,95,500.22	9,58,69,555.89
10	ಡಿಎಸ್‌ಪಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	8,99,95,500.22	9,61,95,077.82
11	ಫ್ರಾಂಕ್ಲಿನ್ ಟೆಂಪಲ್‌ಟನ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ	1,99,99,000.05	2,08,07,759.56
	ಒಟ್ಟು	**1224,84,56,790.83**	

ಬ್ಯಾಂಕಿನ CRR ಹೆಚ್ಚುವರಿ ಸೇರಿದಂತೆ SLR ಹೂಡಿಕೆಗಳು ದಿನಾಂಕ 31.03.2025 ಕ್ಕೆ ರೂ. 97385.72 ಲಕ್ಷಗಳಿದ್ದು, ಇದು ವರ್ಷಾಂತ್ಯಕ್ಕೆ ಒಟ್ಟು NDTL ನ ಶೇ. 46.38 ರಷ್ಟಿದೆ. ಇದು ಕನಿಷ್ಠ ಶೇ. 18.00 ರಷ್ಟು ಇರತಕ್ಕದ್ದು. Non SLR ಹೂಡಿಕೆಗಳು (Mutual Fund ಇತ್ಯಾದಿ) ರೂ. 8122.80 ಲಕ್ಷಗಳಿದ್ದು, ಇವು ದಿನಾಂಕ 31.03.2025 ಕ್ಕೆ NDTL ನ ಶೇ. 10 ಮೀರದಂತೆ ಇರುತ್ತವೆ. ದಿನಾಂಕ: 31.03.2025 ಕ್ಕೆ ಒಟ್ಟು Non-SLR ಹೂಡಿಕೆಗಳು ರೂ. 8122.80 ಲಕ್ಷಗಳಿದ್ದು ಇವು NDTL ನ ಶೇ. 3.87 ರಷ್ಟಿದೆ.

ಬ್ಯಾಂಕು 31.3.2025 ಕ್ಕೆ ಇತರೆ ಬ್ಯಾಂಕುಗಳಲ್ಲಿ ಹೊಂದಿರುವ ಚಾಲ್ತಿ, ನಿಶ್ಚಿತ ಠೇವಣಿಗಳ ಒಟ್ಟು ಮೊತ್ತ ಹಿಂದಿನ ಸಾಲಿನ ಅಂತ್ಯಕ್ಕೆ ಬ್ಯಾಂಕು ಹೊಂದಿದ್ದ ಒಟ್ಟು ಠೇವಣಿಗಳ ಶೇ. 20 ನ್ನು ಮೀರಬಾರದಾಗಿದ್ದು, ಬ್ಯಾಂಕು ಈ ಕೆಳಕಂಡಂತೆ ಇತರೆ ಬ್ಯಾಂಕುಗಳಲ್ಲಿ ಶಿಲ್ಕು ಮತ್ತು ಹೂಡಿಕೆ ಹೊಂದಿದೆ.

ಕರೆ ಮತ್ತು ಚಾಲ್ತಿ ಠೇವಣಿಗಳು	10872.64 ಲಕ್ಷ
ನಿಶ್ಚಿತ ಠೇವಣಿಗಳು	19090.05 ಲಕ್ಷ
ಒಟ್ಟು	**29962.62 ಲಕ್ಷ**

ಇದರ ಪ್ರಮಾಣ ಹಿಂದಿನ ಸಾಲಿನ ಠೇವಣಿಗಳಿಗೆ ಶೇಕಡ 14.29 ರಷ್ಟಿದೆ. ಪ್ರತಿ ಬ್ಯಾಂಕಿನಲ್ಲಿನ ಹೂಡಿಕೆಯು ಹಿಂದಿನ ಸಾಲಿನ ಅಂತ್ಯದ ಠೇವಣಿಗಳ ಬಾಕಿಗೆ ಹೋಲಿಸಿದಾಗ ಶೇಕಡ 5 ಕ್ಕಿಂತಲೂ ಕಡಿಮೆ ಇದೆ.

ಮೇಲ್ಕಂಡ ಠೇವಣಾತಿಗಳಿಗಾಗಿ ಸಂಬಂಧಿಸಿದ ಬಾಂಡುಗಳು, ನಿಶ್ಚಿತ ಠೇವಣಿ ಪತ್ರಗಳು ದೃಢೀಕರಣ ಪತ್ರಗಳು ಮತ್ತು ಸರ್ಟಿಫೀಕೆಟ್‌ಗಳು ಸಂಸ್ಥೆಯಲ್ಲಿ ಹಾಜರಿದ್ದು, ಲೆಕ್ಕ ಪರಿಶೋಧನಾ ವೇಳೆಯಲ್ಲಿ ಪರಿಶೀಲನೆಗೆ ಹಾಜರುಪಡಿಸಿರುತ್ತಾರೆ. ಈ ಮೇಲ್ಕಂಡ ಹೂಡಿಕೆಗಳ ಬಗ್ಗೆ ಸಾಲಾಂತ್ಯಕ್ಕೆ ದೃಢೀಕರಣ ಪತ್ರಗಳನ್ನು ಪಡೆದು ಪರಿಶೀಲನೆಗೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಹಾಜರುಪಡಿಸಿರುತ್ತಾರೆ. ಧನ ಸಂಚಯಗಳ ಅಥವಾ ಹೂಡಿಕೆಗಳ ಬಗ್ಗೆ ಸದರಿ ಸಂಸ್ಥೆಗಳಿಂದ ನೀಡಿರುವ ಠೇವಣಾತಿ ಪತ್ರಗಳನ್ನು ಮತ್ತು ಷೇರು ಪತ್ರಗಳ ಪೂರ್ಣ ಪರಿಶೀಲನೆಯನ್ನು ಅಂತಿಮ ಲೆಕ್ಕ ಪರಿಶೋಧನಾ ವೇಳೆಯಲ್ಲಿ ನಡೆಸಿ ಎಲ್ಲಾ ಪತ್ರಗಳು ಹಾಜರಿರುವ ಬಗ್ಗೆ ಹೂಡಿಕೆ ರಿಜಿಸ್ಟರ್‌ನಲ್ಲಿ ದೃಢೀಕರಿಸಲಾಗಿದೆ.

ಸಹಕಾರ ವರ್ಷ 1999–2000 ರ ಸಾಲಿನಲ್ಲಿ ಕಾವೇರಿ ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ಗುಂತಾಯಿಸಿದ್ದ ಠೇವಣಿ ಒಟ್ಟು ರೂ. 75.00 ಲಕ್ಷಗಳ ಪೈಕಿ ಮುಂದುವರೆದಿದ್ದ ರೂ. 59,18,493.00 ಗಳನ್ನು ಸದರಿ ಬ್ಯಾಂಕು ಸಮಾಪನಾ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ 2023–24 ರ ಸಾಲಿನಲ್ಲಿ Technical Write off ಮಾಡಿ ಪುಸ್ತಕದಿಂದ ತೆಗೆದುಹಾಕಿದೆ.

ಸಂಸ್ಥೆಯು ಸದರಿ ಠೇವಣಿಗಳನ್ನು Technical Write off ಮಾಡಲು ತೀರ್ಮಾನಿಸಿರುವುದರಿಂದ ಈ ಮೊಬಲಗಿನ ಸ್ವೀಕೃತಿಗೆ ಕ್ರಮ ಅನುಸರಿಸುವ ಬಗ್ಗೆ ಸೂಕ್ತ ಗಮನ ನೀಡುವುದು.

ಬ್ಯಾಂಕು ಪ್ರಸಕ್ತ ವರದಿ ಸಾಲಿನಲ್ಲಿ ಯಾವುದೇ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಧನ ವಿನಿಯೋಗಿಸಿರುವುದಿಲ್ಲ. ಬ್ಯಾಂಕು ಸಾಲಾಖೈರು ದಿನಾಂಕ: 31.03.2025 ಕ್ಕೆ ಸಹಕಾರ ಸಂಘಗಳ ಕಾಯ್ದೆ ಕಲಂ 58 (ಡಿ) ಗೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ವಿರುದ್ಧವಾಗಿ ವಿನಿಯೋಗಿಸಿದ ವಿನಿಯೋಗಗಳನ್ನು ಹೊಂದಿರುವುದಿಲ್ಲ.

ಪ್ರಸಕ್ತ ವರದಿ ಸಾಲಿನಲ್ಲಿ ಸಂಸ್ಥೆಯು ಹೊಂದಿದ ಧನ ವಿನಿಯೋಗಗಳ ಮೇಲೆ ಬಡ್ಡಿ, ಬಂಡವಾಳ ಲಾಭ ಮತ್ತು ಡಿವಿಡೆಂಡ್ ಆದಾಯ ರೂ. 81,44,56,370.40 ಗಳ ಆದಾಯ ಜಮಾ ಬಂದಿದೆ. ಬ್ಯಾಂಕು ದಿನಾಂಕ: 31.03.2025 ಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಾಲ ಪತ್ರ ಹೂಡಿಕೆಗಳ ಮೇಲೆ ಬಾಕಿಯಿರುವ ಬಡ್ಡಿ ಮೊಬಲಗುಗಳ ಮೊತ್ತ ರೂ. 16,89,34,407.00 ಗಳನ್ನು ವರದಿ ಸಾಲಿನಲ್ಲಿ ಆದಾಯವಾಗಿ ಪರಿಗಣಿಸಿದ್ದು ಆಸ್ತಿ–ಜವಾಬ್ದಾರಿ ತ:ಖ್ತೆಗಳಲ್ಲಿ ಆಸ್ತಿ ಕಡೆ ತೋರಿಸಲಾಗಿದ್ದು ಪರಿಶೀಲಿಸಲಾಗಿ ಸದರಿ ಕ್ರಮವು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳಿಗನುಗುಣವಾಗಿರುವುದು ಕಂಡು ಬಂದಿದೆ.

ಕಾವೇರಿ ಪಟ್ಟಣ ಸಹಕಾರಿ ಬ್ಯಾಂಕ್‌ನಲ್ಲಿರುವ ಗುಂತಾಯಗಳ ಮೇಲೆ ಸದರಿ ಬ್ಯಾಂಕ್‌ನ ಸಮಾಪನಾ ದಿನಾಂಕ 05.08.2004 ರವರೆಗೆ ಮತ್ತು ಬೆಂಗಳೂರು ಮರ್ಕೆಂಟೈಲ್ ಸಹಕಾರಿ ಬ್ಯಾಂಕಿನಿಂದ ಸಾಲಾಂತ್ಯಕ್ಕೆ ಸಂಸ್ಥೆಗೆ ಬರಬೇಕಾದ ಬಡ್ಡಿ ಮೊಬಲಗು ರೂ. 25,10,883.00 ಕೆಳಕಂಡಂತಿದ್ದು, ಸಂಸ್ಥೆಯು ಸದರಿ ಸ್ವೀಕರಿಸಬೇಕಾದ ಬಡ್ಡಿ ಮೊಬಲಗುಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ Technical Write off ಮಾಡಲು ತೀರ್ಮಾನಿಸಿದ್ದು, ಈ ಮೊಬಲಗುಗಳನ್ನು ಸ್ವೀಕರಿಸುವ ಬಗ್ಗೆ ಸೂಕ್ತ ಗಮನ ನೀಡುವುದು.

1. ಕಾವೇರಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಸಮಾಪನಾ ದಿನಾಂಕ 05.08.2004 ರವರೆಗೆ	ರೂ. 12,17,182.00
2. ದಿ ಬೆಂಗಳೂರು ಮರ್ಕೆಂಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,	ರೂ. 12,93,701.00
ಒಟ್ಟು	**ರೂ. 25,10,883.00**

ಬ್ಯಾಂಕು ಪ್ರಸಕ್ತ ವರದಿ ಸಾಲಿನಲ್ಲಿ ರೂ.81,44,56,370.40 ಗಳ ಆದಾಯವನ್ನು ಧನ ವಿನಿಯೋಗಗಳ ಮೇಲೆ ಗಳಿಸಿದ್ದು ಬ್ಯಾಂಕಿನ ಒಟ್ಟು ಲಾಭಕ್ಕೆ ಇದು ಶೇಕಡ 30.75 ರಷ್ಟಿರುವುದನ್ನು ಗಮನಿಸಿದೆ.

ಸಮಾಧಾನ : Technical Write off ಮಾಡಲಾದ ಕಾವೇರಿ ಬ್ಯಾಂಕಿನಲ್ಲಿನ ಹೂಡಿಕೆ ಮೊಬಲಗು ವಾಪಸ್ಸು ಪಡೆಯಲು ಕ್ರಮ ಮುಂದುವರೆಸಿದೆ.

I. ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿ ಮಾಡುವ ಕುರಿತು :

ಬ್ಯಾಂಕಿನ ಆಡಳಿತ ಮಂಡಳಿಯು ದಿನಾಂಕ: 14.02.2007 ರಂದು ನಡೆದ ಸಭೆಯಲ್ಲಿ ಸಂಸ್ಥೆಯ ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ವಿವರವಾದ ಹೂಡಿಕೆಗಳ ನಿಯಮಾವಳಿಗಳನ್ನು ಅಳವಡಿಸಿಕೊಂಡು ಅದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳನ್ನು ನೇಮಿಸಿರುತ್ತಾರೆ. ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳ ರೀತ್ಯಾ ಆಗಿಂದಾಗ್ಗೆ ನಿಯಮಾವಳಿಗಳನ್ನು ಪರಿಷ್ಕರಿಸಬೇಕಾಗಿದ್ದು ಬ್ಯಾಂಕಿನ ಆಡಳಿತ ಮಂಡಳಿಯು ದಿನಾಂಕ 31.07.2024 ರಂದು ನಡೆದ ಸಭೆಯಲ್ಲಿ ಹೂಡಿಕೆಯ ನಿಯಮಗಳನ್ನು, ಹೂಡಿಕೆಗಳ ಮಿತಿಗಳನ್ನು ನಿಗದಿಗೊಳಿಸಿ ಪರಿಷ್ಕರಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಸದರಿ ನಿಯಮಗಳ ರೀತ್ಯಾ ಪ್ರಧಾನ ವ್ಯವಸ್ಥಾಪಕರು/ಉಪ ಪ್ರಧಾನ ವ್ಯವಸ್ಥಾಪಕರು/ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ವಿವಿಧ ಹೂಡಿಕೆಗಳಿಗೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತಾರೆ. ಇದಾಗ್ಯೂ ಸಂಸ್ಥೆಯ ಅಧಿಕಾರಿಗಳು ಹಣ ಹೂಡಿಕೆ ಮಾಡುವಾಗ ಜಂಟಿಯಾಗಿ ತೀರ್ಮಾನ ತೆಗೆದುಕೊಂಡು ಅಂತಹ ತೀರ್ಮಾನಗಳನ್ನು ಅಧ್ಯಕ್ಷರ ಗಮನಕ್ಕೆ ತಂದು ನಂತರ ಆಢಳಿತ ಮಂಡಳಿಯ ಖಾಯಂ ಅನುಮೋದನೆ ಪಡೆಯುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಹೂಡಿಕೆ ನಿಯಮಗಳನ್ನು ಕನಿಷ್ಠ ವರ್ಷಕ್ಕೊಮ್ಮೆ ಅವಶ್ಯಕ ಬದಲಾವಣೆ ಇದ್ದಲ್ಲಿ ಅಳವಡಿಸಿಕೊಂಡು ಪರಿಷ್ಕರಿಸಲು ಸಲಹೆ ಮಾಡಿದೆ.

II. ಹೂಡಿಕೆಗಳ ಬಗ್ಗೆ ಹತೋಟಿ, ಕಾಲ ಕಾಲಕ್ಕೆ ಅವುಗಳ ಪರಿಶೀಲನೆ/ಲೆಕ್ಕ ಪತ್ರದೊಂದಿಗೆ ಸಮನ್ವಯಗೊಳಿಸುವಿಕೆ :

ಸಂಸ್ಥೆಯು ತನ್ನ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಲ ಪತ್ರಗಳ ಹೂಡಿಕೆಗಳನ್ನು SBI-DFHI ನಲ್ಲಿ ಹೊಂದಿರುವ CSGL (Constituent Subsidiary General Ledger) ಖಾತೆಯ ಮುಖಾಂತರ ವ್ಯವಹರಿಸುತ್ತಿರುತ್ತಾರೆ.

ಸಂಸ್ಥೆಯು Demat ಖಾತೆಯನ್ನು ಮೆ॥ ಐಐಎಫ್‌ಎಲ್ ಸೆಕ್ಯೂರಿಟಿಸ್ ಲಿ., ರವರಲ್ಲಿ ಹೊಂದಿದ್ದು, ತೆರಿಗೆ ರಹಿತ ಬಾಂಡ್‌ಗಳ ಹೂಡಿಕೆಗಳನ್ನು ಅದರಲ್ಲಿ ವ್ಯವಹರಿಸುತ್ತಿರುತ್ತಾರೆ.

ಬ್ಯಾಂಕು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಾಲ ಪತ್ರಗಳಲ್ಲಿ ಧನ ವಿನಿಯೋಗಿಸುವ ಅಥವಾ ಧನ ಹಿಂತೆಗೆದುಕೊಳ್ಳುವ ಸಂದರ್ಭಗಳಲ್ಲಿ ಮಾರುಕಟ್ಟೆ ದರ ಮತ್ತು ಇತರೆ ಪ್ರೈಮರಿ ಡೀಲರ್‌ಗಳಿಂದ ಆಯಾ ದಿನಗಳಿಗೆ ದರಗಳ ಬಗ್ಗೆ ಮಾಹಿತಿ ಪಡೆದ ನಂತರ ಮಾರುಕಟ್ಟೆ ದರಗಳನ್ನು ಹೋಲಿಕೆ ಮಾಡಿದ ನಂತರ ಕ್ರಮವಹಿಸುತ್ತಿರುವುದು ಕಡತಗಳ ಪರಿಶೀಲನೆಯಿಂದ ಕಂಡು ಬಂದಿದೆ.

ಬ್ಯಾಂಕು ತನ್ನ ಹೆಚ್ಚುವರಿ ಸಂಪನ್ಮೂಲಗಳನ್ನು ಲಿಕ್ವಿಡಿಟಿ ಉದ್ದೇಶ ಸಾಧಿಸುವ ಸಲುವಾಗಿ ಹೆಚ್ಚಿನ ಲಿಕ್ವಿಡಿಟಿ ಹೊಂದಿ ಆದಾಯ ತರುವ Debt ಮ್ಯೂಚುವೆಲ್ ಫಂಡ್‌ಗಳಲ್ಲಿ ಹಣ ವಿನಿಯೋಗಿಸುತ್ತಿರುವುದು ಮತ್ತು ಕೆಲವು ಮ್ಯೂಚುಯಲ್ ಫಂಡ್‌ಗಳನ್ನು Long Term Capital Gain ರೀತ್ಯಾ ಆದಾಯ ತೆರಿಗೆ ವಿನಾಯ್ತಿ ಪಡೆಯಲು ವರ್ಷಾಂತ್ಯದಲ್ಲಿ ಮುಂದುವರೆಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಇಂತಹ ಹೂಡಿಕೆಗಳನ್ನು ಮಾಡುವಾಗ ಭಾರತೀಯ ರಿಸರ್ವ್ ಬ್ಯಾಂಕಿನವರ ನಿರ್ದೇಶನಗಳನ್ವಯ ಹೂಡಿಕೆ ಮಾಡಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಈ ಹೂಡಿಕೆಗಳ ವಿವರಗಳನ್ನು ಪ್ರತಿ ತ್ರೈಮಾಸಿಕ ಅಂತ್ಯಕ್ಕೆ ಪರಿಶೀಲಿಸಿ ಸಮನ್ವಯಗೊಳಿಸುತ್ತಿದ್ದು, ಕ್ರಮವಾಗಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

III. ಮೌಲ್ಯಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದ್ದಲ್ಲಿ ಮೌಲ್ಯಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ :

ಸಂಸ್ಥೆಯು ವರದಿಯ ಸಾಲಾಂತ್ಯಕ್ಕೆ ವಿಕ್ರಯಕ್ಕಾಗಿ ಲಭ್ಯವಿರುವ (Available for Sale) ವರ್ಗದಲ್ಲಿ ರೂ.514,04,48,314.83 ಗಳ ಸರ್ಕಾರಿ ಸಾಲ ಪತ್ರಗಳು, ಮ್ಯೂಚುಯಲ್ ಫಂಡ್ಸ್, ತೆರಿಗೆ ರಹಿತ ಬಾಂಡ್ ಇತ್ಯಾದಿ ಒಟ್ಟಾರೆ ಪುಸ್ತಕ ಮೌಲ್ಯದ ಧನ ವಿನಿಯೋಗಗಳನ್ನು ಹೊಂದಿದ್ದು, ಸದರಿ ಹೂಡಿಕೆಗಳನ್ನು 31.03.2025 ಕ್ಕೆ FIBIL (Financial Benchmark India Pvt., Ltd.,) ಸಂಸ್ಥೆಯಿಂದ ಹೊರಡಿಸಲಾದ ಹೂಡಿಕೆಗಳ ಮೌಲ್ಯದ ದರ ಪಟ್ಟಿ ಮತ್ತು ಹೂಡಿಕೆಗಳ NAV ಗಳಿಗೆ ಹೋಲಿಸಿದಾಗ ಅವುಗಳ ಒಟ್ಟು ಮೌಲ್ಯ ರೂ.525,89,49,823.00 ಗಳಿವೆ.

ಸಂಸ್ಥೆಯು ವರ್ಷಾಂತ್ಯ 31.03.2025 ಕ್ಕೆ ವಿಕ್ರಯಕ್ಕಾಗಿ ಲಭ್ಯವಿರುವ ವರ್ಗದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸಾಲ ಪತ್ರಗಳಲ್ಲಿ ರೂ.432,81,68,313.00 ಗಳ ಪುಸ್ತಕ ಬೆಲೆಯ ಹೂಡಿಕೆಗಳನ್ನು ಹೊಂದಿದ್ದು ಅವುಗಳ ಮಾರುಕಟ್ಟೆ ಮೌಲ್ಯವು ರೂ.434,39,82,386.00 ಗಳಿರುವ ಕಾರಣ, ಹಾಗೆಯೇ ಮ್ಯೂಚುಯಲ್ ಫಂಡ್‌ಗಳ ಪುಸ್ತಕ ಮೌಲ್ಯ ರೂ.75,99,62,001.83 ಗಳಿದ್ದು ಅವುಗಳ ಮಾರುಕಟ್ಟೆ ಮೌಲ್ಯ ರೂ.85,62,12,195.76 ಗಳಿರುವ ಕಾರಣ ಮತ್ತು ಇತರೆ Non-SLR ಹೂಡಿಕೆಗಳ ಪುಸ್ತಕ ಮೌಲ್ಯ ರೂ.5,23,18,000.00 ಗಳಿದ್ದು, ಅವುಗಳ ಮಾರುಕಟ್ಟೆ ಮೌಲ್ಯ ರೂ.5,87,55,241.00 ಗಳಿರುವ ಕಾರಣ ಗುಂತಾಯ ಸವಕಳಿ ತೆಗೆದಿರಿಸಬೇಕಾಗಿರುವುದಿಲ್ಲ. ಆದ್ದುದರಿಂದ ಹಿಂದಿನ ಸಾಲಿನಲ್ಲಿ ಮುಂದುವರೆದಿದ್ದ ಗುಂತಾಯ ಸವಕಳಿ ಅವಕಾಶ ರೂ.8,45,60,091.00 ಗಳನ್ನು ವರದಿ ವರ್ಷದಲ್ಲಿ ಲಾಭವಾಗಿ ಪರಿಗಣಿಸಿರುವುದು ಕಂಡು ಬಂದಿದೆ.

IV. S.G.L / B.R.s ಪದ್ಧತಿ, ಸಾಲಾಂತ್ಯಕ್ಕೆ ಇರುವ ಎಸ್.ಜಿ.ಎಲ್ / ಬಿ.ಆರ್.ನ ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ :

ಸರ್ಕಾರಿ ಭದ್ರತಾ ಪತ್ರಗಳ ಹೂಡಿಕೆಗಳನ್ನು ವಿದ್ಯುನ್ಮಾನ ಲೆಕ್ಕ ಖಾತೆ (Demat) ರೂಪದಲ್ಲಿ ಎಸ್.ಬಿ.ಐ.ಡಿ.ಎಫ್.ಹೆಚ್.ಐ ನ ಸಿ.ಎಸ್.ಜಿ.ಎಲ್.ಲೆಕ್ಕದ ಮುಖಾಂತರ, ತೆರಿಗೆ ರಹಿತ ಬಾಂಡ್‌ಗಳನ್ನು M/s ಐಐಎಫ್‌ಎಲ್ ಸೆಕ್ಯೂರಿಟಿಸ್ ಲಿ., ನಲ್ಲಿನ Demat ಖಾತೆಯ ಮುಖಾಂತರ ಮತ್ತು ಮ್ಯೂಚುಯಲ್ ಫಂಡ್‌ಗಳ ವ್ಯವಹಾರಗಳನ್ನು ಆಯಾ ಫಂಡ್ ಹೌಸ್ ಮುಖಾಂತರ ನಿರ್ವಹಿಸಲಾಗುತ್ತಿದ್ದು ಅದರ ನಿರ್ವಹಣೆಯನ್ನು ಹೂಡಿಕೆ ನಿಯಮಗಳಲ್ಲಿ ನಿಯೋಜಿತರಾಗಿರುವ ಅಧಿಕಾರಿಗಳು ಜಂಟಿಯಾಗಿ ನಿರ್ವಹಿಸಿರುತ್ತಾರೆ.

23. ಎ. ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ :

1) ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ

ವರದಿಯ ಕಂಡಿಕೆ 15 ರಲ್ಲಿ ವಿವರಿಸಿದೆ.

2) SLR/BRs ನ ಹೂಡಿಕೆಗಳನ್ನು HTM ಮತ್ತು AFS/HFT ಗಳೆಂದು ಪ್ರತ್ಯೇಕಿಸಲಾಗಿದೆಯೇ?

ದಿನಾಂಕ: 31.03.2025 ರ ಅಂತ್ಯಕ್ಕೆ ಬ್ಯಾಂಕ್ ಹೊಂದಿರುವ ಧನ ವಿನಿಯೋಗಗಳನ್ನು (ಬ್ಯಾಂಕಿನಲ್ಲಿನ ಠೇವಣಿ ಹೂಡಿಕೆ ಹೊರತುಪಡಿಸಿ) ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಾನುಸಾರ ಕೆಳಕಂಡಂತೆ ವಿಂಗಡಿಸಿರುವುದು ಕಂಡು ಬಂದಿದೆ.

Held to Maturity	519,90,03,493.00
Available for sale	514,04,48,314.83
Held for Trading	---
ಒಟ್ಟು	**1033,94,51,807.83**

1) ರೂ. 100.00 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಕೆ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?

ರಿಸರ್ವ್ ಬ್ಯಾಂಕಿನ ಮಾರ್ಗದರ್ಶನ ಸಂಖ್ಯೆ: CO.BSD.I.PCB. 44/12.05.05/2000–2001 ದಿನಾಂಕ : 23.04.2001 ರಲ್ಲಿ ಸಲಹೆ ನೀಡಿರುವಂತೆ ಭಾರತ ಸರ್ಕಾರದ ಸಾಲ ಪತ್ರಗಳನ್ನು ಮಾರಾಟ ಮಾಡುವುದರಿಂದ ಬಂದ ಲಾಭವನ್ನು ಲಾಭವನ್ನಾಗಿ ಪರಿಗಣಿಸಬಹುದಾಗಿದ್ದು, ಇಂತಹ ಲಾಭದಲ್ಲಿ ವಿಕ್ರಯಕ್ಕಾಗಿ ಬ್ಯಾಂಕು ಹೊಂದಿರುವ ಒಟ್ಟು ಗುಂತಾಯಗಳ ಮೊಬಲಗಿನ ಕನಿಷ್ಠ ಶೇಕಡ 5 ರಷ್ಟು ಮೊಬಲಗನ್ನು ಕಡ್ಡಾಯವಾಗಿ ಗುಂತಾಯ ಆಕಸ್ಮಿಕ ನಿಧಿ ರೂಪಿಸಲು ಸೂಚಿಸಿರುತ್ತಾರೆ. ಸದರಿ ನಿರ್ದೇಶನಗಳನ್ವಯ ಬ್ಯಾಂಕು ತನ್ನ ವಿಕ್ರಯಕ್ಕಾಗಿ ಲಭ್ಯವಿರುವ ಧನವಿನಿಯೋಗದ ಮೊತ್ತ ರೂ. 51404.48 ಲಕ್ಷ ರೂಪಾಯಿಗಳ ಮೇಲೆ ಕನಿಷ್ಠ ರೂ. 2570.23 ಲಕ್ಷ ರೂಪಾಯಿಗಳ ಗುಂತಾಯಗಳ ಆಕಸ್ಮಿಕ ನಿಧಿಯನ್ನು ಕಡ್ಡಾಯವಾಗಿ ಹೊಂದಬೇಕಾಗಿದ್ದು ವರದಿ ಸಾಲಾಂತ್ಯಕ್ಕೆ ರೂ.2839.21 ಲಕ್ಷ ರೂಪಾಯಿಗಳ ಗುಂತಾಯಗಳ ಆಕಸ್ಮಿಕ ನಿಧಿಯನ್ನು ಹೊಂದಿದೆ. ಈ ಮೊಬಲಗು available for sale ನಲ್ಲಿನ ಒಟ್ಟು ಗುಂತಾಯ ಮೊತ್ತದ ಶೇ.5.52 ರಷ್ಟಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ಮೇಲಿನ ನಿರ್ದೇಶನಗಳ ಪ್ರಕಾರ ಗುಂತಾಯಗಳ ಆಕಸ್ಮಿಕ ನಿಧಿ ಹೊಂದಿರುವುದು ಕಂಡು ಬಂದಿದೆ.

ಸಂಸ್ಥೆಯು ವರದಿ ಸಾಲಿನಲ್ಲಿ ಸರ್ಕಾರಿ ಸಾಲ ಪತ್ರಗಳ ಖರೀದಿ ಮತ್ತು ಮಾರಾಟ ವ್ಯವಹಾರದಲ್ಲಿ ರೂ. 4,54,13,718.00 ಗಳಷ್ಟು ನಿವ್ವಳ ಲಾಭ ಗಳಿಸಿರುವುದು ಕಂಡು ಬಂದಿದೆ.

ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೇ?	ಬ್ಯಾಂಕು ಹೊಂದಿರುವ ಎಲ್ಲಾ ಹೂಡಿಕೆಗಳು ಆಯಾ ಸಂಸ್ಥೆಯವರು ಮಾಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗುತ್ತಿವೆ.
ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೇ?	ಬ್ಯಾಂಕು ಹೂಡಿಕೆ ನಿಯಮಾವಳಿಗಳನ್ನು ರಚಿಸಿಕೊಂಡಿದ್ದು, ಅವುಗಳು ಭಾರತೀಯ ರಿಸರ್ವ್ ಬ್ಯಾಂಕಿನ ನೀತಿಗಳಿಗನುಗುಣವಾಗಿರುತ್ತವೆ.
ನಿಧಿಗಳಲ್ಲಿನ ಹೂಡಿಕೆಗಳು ಕಾಂಪ್ಲಿಗನುಗುಣವಾಗಿದೆಯೇ?	ಬ್ಯಾಂಕು ಹೊಂದಿರುವ ಹೂಡಿಕೆಗಳು ಸಹಕಾರ ಕಾಯಿದೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾನುಸಾರವಿರುತ್ತವೆ.
ಸದರಿ ಹೂಡಿಕೆಗಳ ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ?	ಬ್ಯಾಂಕು ಹೊಂದಿರುವ ಹೂಡಿಕೆಗಳ ಮೇಲಿನ ಬಡ್ಡಿಗಳು ಕಾಲಕಾಲಕ್ಕೆ ಜಮಾ ಪಡೆಯಲಾಗುತ್ತಿದೆ.
ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ	ಆಯಾ ಕಂಡಿಕೆಯಲ್ಲಿ ವಿವರವಾಗಿ ವಿವರಿಸಿದೆ.

24) 1. ಸದಸ್ಯರ ಸಾಲ ಮತ್ತು ಮುಂಗಡಗಳು :

ಎ.	ಸಾಲಗಳ ಮೌಲ್ಯಾಂಕನ (Credit Appraisal) ಉಪನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲ ರೀತಿಯು ಪಡೆಯಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ ಸಂಘದಲ್ಲಿ ಬರೆದಿಟ್ಟಿರುವುದ ಬಗ್ಗೆ ವಿಮರ್ಶೆ	ಬ್ಯಾಂಕಿನ ಉಪನಿಯಮ 65 ರಿಂದ 77 ರವರೆಗಿನ ನಿಯಮಗಳನ್ವಯ ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನಗಳಿಗೊಳಪಟ್ಟು ವಿವಿಧ ಸಾಲಗಳನ್ನು ನೀಡುತ್ತಿದ್ದು, ಸಂಸ್ಥೆಯವರು ರಚಿಸಿ ಆಳವಡಿಸಿ ಕೊಂಡಿರುವ ಸಾಲಗಳ ಮಂಜೂರಾತಿ ನಿಯಮಾವಳಿಗಳನ್ನು ಪಾಲಿಸುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಸದಸ್ಯರೊಬ್ಬರಿಗೆ ಬ್ಯಾಂಕಿನ Tier 1 ಬಂಡವಾಳ ಧನ (ಒಟ್ಟು ಷೇರು ಬಂಡವಾಳ, ಅಪದ್ಧನ ನಿಧಿ, ಆಸ್ತಿ ಮರುಮೌಲ್ಯಮಾಪನ ನಿಧಿಯ ಶೇಕಡ 45 ರಷ್ಟು ಮತ್ತು ಕಟ್ಟಡ ನಿಧಿ) ಇದರ ಶೇಕಡ 15 ರವರೆಗೆ ಮತ್ತು ಗುಂಪು ಸಾಲಗಾರರಾಗಿದ್ದಲ್ಲಿ ಶೇಕಡ 25 ರವರೆವಿಗೆ ಗರಿಷ್ಠ ಸಾಲ ನೀಡಬಹುದಾಗಿದ್ದರೂ ಸದಸ್ಯರುಗಳಿಗೆ ರೂ. 1200.00 ಲಕ್ಷಗಳ ಮಿತಿಗೊಳಪಟ್ಟು ಸ್ಥಿರಾಸ್ತಿ ಆಧಾರ ಸಾಲಗಳನ್ನು ಮಂಜೂರು ಮಾಡಲಾಗುತ್ತಿದ್ದು ಸದರಿ ಮಿತಿಯು ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ ಮಿತಿಯೊಳಗೆ ಇರುವುದು ಕಂಡು ಬಂದಿದೆ. ಹಾಗೆಯೇ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಬ್ಯಾಂಕಿನ ಒಟ್ಟು ಸಾಲಗಳ ಪೈಕಿ ಶೇಕಡ 50 ರಷ್ಟು ಸಾಲಗಳು ಮೂರು ಕೋಟಿ ಮಿತಿಗೊಳಪಟ್ಟು ರೂ. 25.00 ಲಕ್ಷ ಅಥವಾ Tier 1 ಬಂಡವಾಳ ಧನದ ಶೇಕಡ 0.4 ರಷ್ಟು ಇವುಗಳಲ್ಲಿ ಯಾವುದೋ ಹೆಚ್ಚು ಅಂತಹ ಮಿತಿಯೊಳಗೆ ಇರಿಸಬೇಕಾಗಿದೆ. ದಿನಾಂಕ 31.03.2025 ಕ್ಕೆ ಬ್ಯಾಂಕಿನ Tier 1 ಬಂಡವಾಳಗಳು ರೂ.27098.33 ಲಕ್ಷ ಗಳಿದ್ದು, ಅದರ ಶೇಕಡ 0.4 ರಷ್ಟು ಅಂದರೆ ರೂ.108.39 ಲಕ್ಷ ಗರಿಷ್ಠ ಮಿತಿಯೊಳಗೆ ಬ್ಯಾಂಕಿನ ಒಟ್ಟು ಸಾಲದ ಕನಿಷ್ಠ ಶೇಕಡ 50 ರಷ್ಟು ಸಾಲಗಳು ಇರಬೇಕಿದ್ದು, ಅಂತಹ ಸಾಲಗಳು ರೂ. 108873.66 ಲಕ್ಷಗಳಿದ್ದು ಇವು ಒಟ್ಟು ಸಾಲದ ಶೇಕಡ 78.81 ರಷ್ಟು ಗಳಿರುತ್ತವೆ.
ಬಿ.	**ಸಾಲ ಮಂಜೂರಾತಿ / ವಿತರಣೆ** ಅಧಿಕಾರ ಪ್ರತ್ಯಾಯೋಜನೆ / ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?	ಸಂಸ್ಥೆಯು ತನ್ನ ಶಾಖಾ ವ್ಯವಸ್ಥಾಪಕರುಗಳಿಗೆ ಠೇವಣಿ ಆಧಾರಿತ ಸಾಲಗಳನ್ನು ಮತ್ತು ಒಡವೆ ಆಧಾರಿತ ಸಾಲಗಳನ್ನು ಮಂಜೂರು ಮಾಡಲು ಅಧಿಕಾರ ನೀಡಿರುತ್ತದೆ. ಸದರಿ ಅಧಿಕಾರಿಗಳು ಠೇವಣಿ ಆಧಾರಿತ ಸಾಲಗಳನ್ನು ಮತ್ತು ಒಡವೆ ಆಧಾರಿತ ಸಾಲಗಳನ್ನು ನಿಯಮಾವಳಿಗಳನ್ವಯ ಮಂಜೂರು ಮಾಡಿ ವಿತರಣೆ ಮಾಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಸಂಸ್ಥೆಯ ಆಡಳಿತ ಮಂಡಳಿಯು ದಿನಾಂಕ 18.05.2024 ರ ಸಭೆಯಲ್ಲಿ ಸ್ಥಿರಾಸ್ತಿ ಸಾಲ ರೂ. 25.00 ಲಕ್ಷಗಳವರೆಗೆ, ಜಾಮೀನು ಸಾಲ / ವ್ಯಾಪಾರ ಸಾಲ ರೂ. 2.00 ಲಕ್ಷಗಳವರೆಗೆ ಮತ್ತು ಸರಕು ಸಾಗಾಣಿಕೆ ವಾಹನ ಸಾಲ / ವಾಹನ ಸಾಲ ವಾಹನ ಮೌಲ್ಯದ ಗರಿಷ್ಠ ಶೇಕಡ 70 ರಷ್ಟು ಮಂಜೂರು ಮಾಡಲು ಪ್ರಧಾನ ವ್ಯವಸ್ಥಾಪಕರಿಗೆ ಅಧಿಕಾರ ನೀಡಿರುತ್ತದೆ. ಇನ್ನುಳಿದ ಸಾಲಗಳನ್ನು ಶಾಖಾ ವ್ಯವಸ್ಥಾಪಕರು / ಪ್ರಧಾನ ವ್ಯವಸ್ಥಾಪಕರುಗಳ ಶಿಫಾರಸ್ಸಿನ ಮೇರೆಗೆ ಸಂಸ್ಥೆಯ ಕಾರ್ಯಕಾರಿ ಮಂಡಳಿಯು ಮಂಜೂರು ಮಾಡುತ್ತಿದೆ.

		ಸಾಲಗಳ ಮೌಲ್ಯಾಂಕನ (Credit Appraisal) ಕ್ಕೆ ಸಂಬಂಧಿಸಿದಂತೆ ರೂ. 100.00 ಲಕ್ಷಗಳವರೆಗಿನ ಸಾಲಗಳ ಅರ್ಜಿಯನ್ನು ಶಾಖಾ ವ್ಯವಸ್ಥಾಪಕರುಗಳು ಮತ್ತು ರೂ. 100.00 ಲಕ್ಷಗಳಿಗೂ ಮೀರಿದ ಸಾಲದ ಅರ್ಜಿಯನ್ನು ಶಾಖಾ ವ್ಯವಸ್ಥಾಪಕರುಗಳು ಮತ್ತು ಆಡಳಿತ ಕಛೇರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕರು /ಪ್ರಧಾನ ವ್ಯವಸ್ಥಾಪಕರು ಪೈಕಿ ಯಾರಾದರೂ ಒಬ್ಬರು ಹೀಗೆ ಜಂಟಿಯಾಗಿ ಸಾಲಗಳ ಮೌಲ್ಯಾಂಕನ ಪಡೆಯಲಾಗುತ್ತಿದೆ. ಸಾಲಗಳ ಮೌಲ್ಯಾಂಕನ ಮಾಡುವಾಗ ಅರ್ಜಿದಾರರು ಪಡೆಯುವ ಸಾಲದ ಕಂತುಗಳನ್ನು ಮರುಪಾವತಿ ಮಾಡಲು ಶಕ್ತರಾಗಿರುವುದನ್ನು ಧೃಢೀಕರಿಸಿಕೊಳ್ಳಲು ಒತ್ತು ನೀಡಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.
ಸಿ.	**ದಾಖಲೀಕರಣ ಸಂಗ್ರಹಣೆ (Documentation)** ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳ. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)	ಸ್ಥಿರಾಸ್ತಿ ಆಧಾರ ಸಾಲಗಳ ಮಂಜೂರಾತಿಗೆ ಸಂಬಂಧಿಸಿದಂತೆ ಸ್ಥಿರಾಸ್ತಿ ಒಡೆತನದ ದಾಖಲೆಗಳು, ಋಣಭಾರ ಪತ್ರ, ಖಾತಾ ಧೃಢೀಕರಣ ಪತ್ರ, ಕಂದಾಯ ರಸೀದಿ, ಕಟ್ಟಡ ನಕ್ಷೆ, ವಕೀಲರ ಅಭಿಪ್ರಾಯ ಮೌಲ್ಯಮಾಪನ ವರದಿಗಳನ್ನು ಪಡೆದು ಬ್ಯಾಂಕಿನ ಪರವಾಗಿ ದಸ್ತಾವೇಜು ಮಾಡಿಸಿ, ಸಾಲ ವಿತರಣೆ ಮಾಡುತ್ತಿರುವುದು ಕಂಡು ಬಂದಿದೆ. ಯಾವುದೇ ಜಂಟಿ / ಸಹಕಾರ ಕೂಟ ಸಾಲಗಳನ್ನು ನೀಡಿರುವುದಿಲ್ಲ.
ಡಿ.	**ದಾಖಲೆಗಳ ನವೀಕರಣ /ಪುನರ್ ಪರಿಶೀಲನೆ / ಮುನ್ನೆಚ್ಚರಿಕೆ / ಮೇಲ್ವಿಚಾರಣೆ:**	
1	ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ	ಬ್ಯಾಂಕಿನಲ್ಲಿ ವರ್ಷಾಂತ್ಯಕ್ಕೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಕೆಲವು ಖಾತೆಗಳಿಗೆ ಸಂಬಂಧಿಸಿದಂತೆ ದೃಢೀಕರಿಸಿಕೊಳ್ಳಲಾಗಿದೆ.
2	ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿಯಾಗುತ್ತಿರುವ ಬಗ್ಗೆ.	ಚರಾಸ್ತಿ ಆಧಾರ ಸಾಲಗಳನ್ನು ಸಂಸ್ಥೆಯು ನೀಡಿಲ್ಲವಾದ್ದರಿಂದ ಸಾಲಗಾರರಿಂದ ಮಾಹಿತಿ ಗಳನ್ನು ಪಡೆಯುತ್ತಿಲ್ಲ.
3	ರೂ. 10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆ ಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ	ರೂ. 10.00 ಲಕ್ಷಗಳಿಗಿಂತ ಹೆಚ್ಚಿನ ಸಾಲಗಳನ್ನು ವ್ಯಾಪಾರ ಉದ್ದೇಶಕ್ಕೆ ನೀಡುವಾಗ ಅಂತಹ ಸಂಸ್ಥೆಗಳಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆಯಬೇಕಾಗಿದ್ದು, ಸಂಸ್ಥೆಗಳಿಗೆ ಸಾಲ ನೀಡುವ ಸಂದರ್ಭದಲ್ಲಿ / ಓವರ್‌ಡ್ರಾಫ್ಟ್ ನವೀಕರಣ ಸಂದರ್ಭದಲ್ಲಿ ಪಡೆಯುತ್ತಿರುವುದು ಕಂಡು ಬಂದಿದೆ.

4	ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ.	ಸದರಿ ವ್ಯವಸ್ಥೆಯನ್ನು ಪಾಲಿಸಲಾಗುತ್ತಿದೆ.
5	ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ.	ವಾಹನ ಆಧಾರಗಳ ಮೇಲೆ ನೀಡಿದ ಸಾಲಗಳ ಬಗ್ಗೆ ವಾಹನಗಳನ್ನು ಆಗಿಂದಾಗ್ಗೆ ಭೌತಿಕವಾಗಿ ಪರಿಶೀಲಿಸುವ ಕ್ರಮವಿಟ್ಟಿದ್ದು ಪರಿಶೀಲನೆಗೆ ಹಾಜರಾಗದ ವಾಹನ ಸಾಲಗಾರ ಸದಸ್ಯರ ವಿರುದ್ಧ ಸೂಕ್ತ ಕ್ರಮ ಅಳವಡಿಸಲು ತಿಳಿಸಿದೆ. ಹಾಗೆಯೇ ಅಡಮಾನ ಪಡೆದ ಒಡವೆಗಳನ್ನು ಎರಡನೇ ಚಿನ್ನಾಭರಣ ಮೌಲ್ಯಮಾಪಕರಿಂದ ಆಗಾಗ್ಗೆ ಮೌಲ್ಯಮಾಪನ ಪಡೆದು ದಾಖಲಿಸಲು ಕ್ರಮ ಸೂಚಿಸಿದೆ.

ಸಮಾಧಾನ : ಅಡವು ಪಡೆದ ಚಿನ್ನಾಭರಣಗಳನ್ನು ಎರಡನೇ ಮೌಲ್ಯಮಾಪಕರಿಂದ ಮೌಲ್ಯಮಾಪನವನ್ನು ಆಗಿಂದಾಗ್ಗೆ ಪಡೆಯಲಾಗುತ್ತಿದೆ.

6	ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ	ದಾಸ್ತಾನು ಆಧಾರ ಸಾಲಗಳನ್ನು ಸಂಸ್ಥೆಯು ನೀಡುತ್ತಿಲ್ಲವಾದುದರಿಂದ ತನಿಖಾ ವರದಿಗಳು ಲಭ್ಯವಿರುವುದಿಲ್ಲ.
7	ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI)	ಈ ವ್ಯವಸ್ಥೆ ಚಾಲ್ತಿಯಲ್ಲಿರುವುದಿಲ್ಲ, ಬದಲಾಗಿ NPA ವಿಂಗಡನೆ ಚಾಲ್ತಿಯಲ್ಲಿದೆ.
8	ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣಇತ್ಯಾದಿ	ಸಾಲದ ಮಿತಿಯನ್ನು ಹೆಚ್ಚಿಸಿದಂತೆಲ್ಲಾ ಅಗತ್ಯ ಭದ್ರತೆ ಪಡೆಯಲಾಗುತ್ತಿದೆ.
9	ಸೌಲಭ್ಯಗಳ ನವೀಕರಣ	ಸ್ಥಿರಾಸ್ತಿ ಆಧಾರ ವ್ಯಾಪಾರಸ್ಥ ಸಾಲಗಾರರಿಗೆ ಓವರ್ ಡ್ರಾಫ್ಟ್ ಸೌಲಭ್ಯ ಒದಗಿಸುತ್ತಿದ್ದು ನಿಯಮಗಳ ರೀತ್ಯಾ ನವೀಕರಿಸುತ್ತಿರುವುದು ಕಂಡು ಬಂದಿದೆ.
10	ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.	ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಮತ್ತು ಅನುತ್ಪಾದಕ ಸಾಲಗಳಿಗೆ ಸಂಬಂಧಿಸಿದಂತೆ ಸುಸ್ತಿಯಾದ ಮೊಬಲಗುಗಳ ವಸೂಲಾತಿಗೆ ಕ್ರಮವಹಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.
ಇ	**ಕರಡು ಮತ್ತು ಸಂಶಯಾಸ್ಪದ ಸಾಲಗಳು :**	
1	ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ	ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನಗಳನ್ವಯ ಅನುತ್ಪಾದಕ ಆಸ್ತಿಗಳನ್ನು ಗಣಕೀಕರಣ ವ್ಯವಸ್ಥೆಯಲ್ಲಿ ಶಾಖಾವಾರು ವಿಂಗಡಿಸಿ, ಅದರ ವಸೂಲಾತಿ ಬಗ್ಗೆ ಶಾಖಾ ವ್ಯವಸ್ಥಾಪಕರುಗಳಿಗೆ ಜವಾಬ್ದಾರಿ ವಹಿಸಿದೆ. ಇಂತಹ ಅನುತ್ಪಾದಕ ಸಾಲಗಳ ವಿವರಗಳನ್ನು ಆಡಳಿತ ಕಛೇರಿಯಲ್ಲಿ ಕ್ರೋಢೀಕರಿಸಲಾಗುತ್ತಿದ್ದು, ವರ್ಷಾಂತ್ಯಕ್ಕೆ ರೂ.10418.93 ಲಕ್ಷಗಳು ಅನುತ್ಪಾದಕ ಆಸ್ತಿಗಳಾಗಿದ್ದು ಈ ಸಂಬಂಧವಾಗಿ ರೂ.3652.23 ಲಕ್ಷಗಳ ಅವಕಾಶ ಮಾಡಬೇಕಿದ್ದು ಸಂಸ್ಥೆಯು ರೂ.24658.96 ಲಕ್ಷಗಳ ಅವಕಾಶ ಹೊಂದಿದ್ದು, ಈ ಸಂಬಂಧದಲ್ಲಿ ಕೊರತೆ ಇರುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್‌ನ Resolution Frame Work-I ನಿರ್ದೇಶನಗಳನ್ನು ಅನುಸರಿಸಿ 2020–21 ರ ಸಾಲಿನಲ್ಲಿ ಕೋವಿಡ್–

		19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ಆರ್ಥಿಕ ತೊಂದರೆಗೊಳಗಾದ ಒಟ್ಟು 352 ಪ್ರಕರಣಗಳಲ್ಲಿ ರೂ.167,85,13,823.00 ಮೊತ್ತದ ಸಾಲಗಳನ್ನು ಮತ್ತು 2021–22 ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ Resolution Frame Work-II ನಿರ್ದೇಶನಗಳನ್ನು ಅನುಸರಿಸಿ ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ಆರ್ಥಿಕ ತೊಂದರೆಗೊಳಾಗದ ಒಟ್ಟು 2015 ಪ್ರಕರಣಗಳಲ್ಲಿ ರೂ.419,45,10,376.00 ಮೊತ್ತದ ಸಾಲಗಳನ್ನು ಪುನರ್ರಚನೆ ಮಾಡಲಾಗಿತ್ತು. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಪುನರ್ರಚನೆಗೊಂಡ ಸಾಲಗಳ ಶೇಕಡ 10 ರಷ್ಟು ಅವಕಾಶಗಳನ್ನು ಕಡ್ಡಾಯ ತೆಗೆದಿರಿಸಬೇಕಾಗಿದ್ದು ಅಂತಹ ಅವಕಾಶಗಳನ್ನು ಹಿಂದಿನ ವರ್ಷಗಳಲ್ಲಿ ಕಲ್ಪಿಸಲಾಗಿತ್ತು. Resolution Frame Work-I ಮತ್ತು Resolution Frame Work-II ರೀತ್ಯಾ ಸಾಲ ಪುನರ್ರಚನೆ ಸಂಬಂಧ ಅವಕಾಶಗಳು ಸಾಲಾರಂಭದಲ್ಲಿ ರೂ.35,79,58,647.00 ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (ಕೋವಿಡ್–19 ಪ್ಯಾಕೇಜ್ ನಿಮಿತ್ತ ಪುನರ್ರಚನೆ ಸಾಲ ಸಂಬಂಧ) ಗಳಿದ್ದು, ಸಂಸ್ಥೆಯು ಕೋವಿಡ್–19 Resolution Frame Work-I & II ರನ್ವಯ ಪುನರ್ರಚನೆಗೊಂಡ ಸಾಲಗಳ ಪೈಕಿ 2024–25 ರ ಸಾಲಿನಲ್ಲಿ ಪೂರ್ತಿಯಾಗಿ ತೀರುವಳಿಗೊಂಡ ಸಾಲಗಳ ಸಂಬಂಧ ಹಿಂದಿನ ವರ್ಷಗಳಲ್ಲಿ ಮುಂದುವರೆದಿದ್ದ ಅವಕಾಶಗಳ ಪೈಕಿ ರೂ.5,13,27,857.00 ಗಳನ್ನು ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (Covid-19 package) ಯಿಂದ ಹಿಂತೆಗೆದು ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ ಕ್ರೋಢೀಕರಣಕ್ಕೆ ಬಳಸಿಕೊಂಡಿರುವುದು ಪರಿಶೀಲನೆಯಲ್ಲಿ ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳನುಸಾರ ಕೋವಿಡ್–19 ಸಂಬಂಧ ಸಾಲ ಪುನರ್ರಚನೆಗೊಂಡು ನಂತರದಲ್ಲಿ ಅಂತಹ ಸಾಲ ಪೂರ್ತಿ ತೀರುವಳಿಯಾದಲ್ಲಿ ಪುನರ್ರಚನೆ ಸೌಲಭ್ಯ ಮಂಜೂರು ಮಾಡಲು ತೆಗೆದಿರಿಸಿದ ಅವಕಾಶವನ್ನು ಹಿಂತೆಗೆಯ ಬಹುದಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ತಪಸಾಣಾಧಿಕಾರಿಗಳು 2023–24 ರ ಸಾಲಾಂತ್ಯಕ್ಕೆ ಬ್ಯಾಂಕಿನ ತಪಾಸಣೆ ನಡೆಸಿದ್ದು, 2023–24 ರ ಸಾಲಾಂತ್ಯಕ್ಕೆ ಸಂಸ್ಥೆಯು ಅನುತ್ಪಾದಕ ಸಾಲಗಳನ್ನು ಗುರುತಿಸುವಲ್ಲಿ ವ್ಯತ್ಯಯ ಗಮನಿಸಿ ಬ್ಯಾಂಕು ಗುರುತಿಸಿದ್ದ ಒಟ್ಟು ಅನುತ್ಪಾದಕ ಸಾಲಗಳು ರೂ. 143.67 ಕೋಟಿಗಳ ಜೊತೆಗೆ ಹೆಚ್ಚುವರಿಯಾಗಿ ರೂ. 6.69 ಕೋಟಿ ಸಾಲಗಳನ್ನು ಅನುತ್ಪಾದಕ ಸಾಲಗಳೆಂದು ಗುರುತಿಸಿ ಬ್ಯಾಂಕಿನ ಒಟ್ಟಾರೆ ಅನುತ್ಪಾದಕ ಸಾಲಗಳು ರೂ.150.36 ಕೋಟಿಗಳೆಂದು ಮತ್ತು ಅನುತ್ಪಾದಕ ಸಾಲಗಳ ಸಂಬಂಧ ಇರಬೇಕಾದ ಅವಕಾಶಗಳಲ್ಲಿ ಕೊರತೆ ಇರುವುದಿಲ್ಲವೆಂದು ದೃಢೀಕರಿಸಿರುತ್ತಾರೆ.
2	ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ	2024–25 ರ ಸಾಲಾಂತ್ಯಕ್ಕೆ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನವರ ಸೂಚನೆಗಳನ್ವಯ ಗುರುತಿಸಿ ವಿಂಗಡಿಸಿದ್ದು, ಸಂಬಂಧಿಸಿದಂತೆ ವರದಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಸಲ್ಲಿಸಿರುವುದು ಕಂಡು ಬಂದಿದೆ ಮತ್ತು ಈ ಸಂಬಂಧದಲ್ಲಿ ಅವಶ್ಯಕವಾಗಿರುವ ಅವಕಾಶಗಳನ್ನು ಕಲ್ಪಿಸಲಾಗಿದೆ.

3	ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.	ಬ್ಯಾಂಕಿನ ಬೈಲಾ ಸಂಖ್ಯೆ 81 ರನ್ವಯ ಎಲ್ಲಾ ವಿಧವಾದ ಸಾಲ ಮತ್ತು ಮುಂಗಡಗಳಿಗೆ ಪ್ರತಿ ಮಾಸಿಕದ ಕೊನೆಯಲ್ಲಿ ಬಡ್ಡಿ ವಿಧಿಸಿ ಬಂಡವಾಳೀಕೃತ ಮಾಡಬೇಕಾಗಿದ್ದು, ಸಂಸ್ಥೆಯು ಇಂತಹ ಮೊಬಲಗನ್ನು ಗಣಕೀಕರಣ ವ್ಯವಸ್ಥೆಯಲ್ಲಿ ಬರಬೇಕಾದ ಬಡ್ಡಿ ಎಂದು ಗುರುತಿಸುವ ವ್ಯವಸ್ಥೆ ಅಳವಡಿಸಿಕೊಂಡಿದೆ. ಸಾಲಗಾರರಿಂದ ಹಣ ಸ್ವೀಕರಿಸಿದ ದಿನದಂದು ಸ್ವೀಕರಿಸಿದ ಪೂರ ಹಣವನ್ನು ಸಾಲ ಖಾತೆಗೆ ಜಮಾ ಪಡೆದು ಬಾಕಿ ನಿಂತ ಬಡ್ಡಿ ಮೊಬಲಗನ್ನು ಸಾಲ ಖಾತೆಗೆ ಡೆಬಿಟ್ ಮಾಡುವ ಮೂಲಕ ಬಡ್ಡಿ ಲೆಕ್ಕಕ್ಕೆ ಜಮಾ ಪಡೆಯಲಾಗುತ್ತಿದೆ.
4	ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನು ದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ: ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGC ಯನ್ನೊಳಗೊಂಡಂತೆ.	ಭದ್ರತೆಯ ಸಾಲಗಳನ್ನು ಸೂಕ್ತ ಭದ್ರತೆಯ ಆಧಾರದ ಮೇಲೆ ನೀಡಲಾಗಿದೆ. ಜಾಮೀನು ಸಾಲಗಳಿಗೆ ಸಂಬಂಧಿಸಿದಂತೆ ಸಾಲಗಾರರು ಮತ್ತು ಜಾಮೀನುದಾರರ ವಿರುದ್ಧ ದಾವಾ ಕ್ರಮ ಜಾರಿಗೊಳಿಸಿ ಬಾಕಿ ಸಾಲ ವಸೂಲು ಮಾಡಲು ಸಾಧ್ಯತೆಗಳಿವೆ. 2024–25 ರ ಸಾಲಿನಲ್ಲಿ ಸದಸ್ಯರುಗಳ ಕೋರಿಕೆ ಮೇರೆಗೆ 5 ಪ್ರಕರಣಗಳಲ್ಲಿ ಒಟ್ಟಾರೆ ಸಾಲ ರೂ. 142.64 ಲಕ್ಷಗಳನ್ನು Equal monthly Installment ಬದಲಾಗಿ Equated monthly Installment ರಂತೆ ಪಾವತಿಸಲು ಅನುಮತಿಸಿದ ಹೊರತಾಗಿ ಪುನಃ ಸ್ಪಷ್ಟೀಕರಣದ (Rehabilitation) ಪ್ರಕರಣಗಳು ಇರುವುದಿಲ್ಲ.
5	ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ / ಕಲ್ಪಿಸಲಾದ ಅವಕಾಶಗಳು	ಹಿಂದಿನ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಸಂಸ್ಥೆಯು ಜಯನಗರ ಶಾಖೆ ಮತ್ತು ಪದ್ಮನಾಭನಗರ ಶಾಖೆಗಳಲ್ಲಿ ಮುಂದುವರೆದಿದ್ದ ನಕಲಿ ಚಿನ್ನಾಭರಣ ಆಧಾರ ಸಾಲ 34 ಪ್ರಕರಣಗಳಲ್ಲಿ 73.76 ಲಕ್ಷಗಳನ್ನು Techincal Write Off ಮಾಡಲು ತೀರ್ಮಾನಿಸಿ ಪುಸ್ತಕಗಳಿಂದ ತೆಗೆದು ಹಾಕಲಾಗಿದೆ. ಹಾಗೆಯೇ ಬ್ಯಾಂಕಿಗೆ ಆಧಾರ ಮಾಡಿದ ಸ್ಥಿರಾಸ್ತಿಯನ್ನು ಸಾಲ ವಸೂಲಾತಿಗಾಗಿ SARFAESIA-2002 ಕಾಯ್ದೆಯಡಿಯಲ್ಲಿ ಹರಾಜು ಕ್ರಮವಹಿಸಿದಾಗ ಬಂದ ಮೊಬಲಗಿನಲ್ಲಿ ಬಾಕಿ ಅಸಲು / ಬಡ್ಡಿ ಹೊಂದಾಣಿಕೆಯಾದ ನಂತರ ಒಂದು ಪ್ರಕರಣದಲ್ಲಿ ಉಳಿದ ಅಸಲು ರೂ. 100 ಗಳನ್ನು Techincal Write Off ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿ ಪುಸ್ತಕಗಳಿಂದ ತೆಗೆದುಹಾಕಲಾಗಿದೆ. ಹಾಗೆಯೇ ಸಂಸ್ಥೆಯು ಹಿಂದಿನ ಸಾಲಿನಲ್ಲಿ ಬ್ಯಾಂಕಿನ ಪದ್ಮನಾಭನಗರ ಶಾಖೆಯಲ್ಲಿ ನಕಲಿ ಸ್ಥಿರಾಸ್ತಿ ದಾಖಲೆ ಆಧಾರ ಸ್ಥಿರಾಸ್ತಿ ಸಾಲ ವಂಚನೆ ಪ್ರಕರಣದಲ್ಲಿ ಮುಂದುವರೆದಿದ್ದ ಸ್ಥಿರಾಸ್ತಿ ಸಾಲ ರೂ.72.89 ಲಕ್ಷಗಳನ್ನು Techincal Write Off ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿ ಪುಸ್ತಕಗಳಿಂದ ತೆಗೆದುಹಾಕಲಾಗಿದೆ. ವರದಿ ವರ್ಷದಲ್ಲಿ ಬಹು ವರ್ಷಗಳಿಂದ ವಸೂಲಾಗದೆ ಮುಂದುವರೆದಿದ್ದ ವೈಯಕ್ತಿಕ ಜಾಮೀನು ಆಧಾರ ವೇತನದಾರರಿಗೆ ನೀಡಿದ ಜಾಮೀನು ಸಾಲಗಳು ಮತ್ತು ವ್ಯಾಪಾರ ಸಾಲ ಮತ್ತು ಬ್ಯಾಂಕಿಗೆ ಆಧಾರವಾಗಿದ್ದ ಸ್ಥಿರಾಸ್ತಿಯನ್ನು ಕೆರೆ ಅಂಗಳಕ್ಕೆ ಸೇರಿದ

		ಸ್ವತ್ತೆಂದು ಬಿಡಿಎ ರವರು ವಶಕ್ಕೆ ಪಡೆದಿದ್ದ ಸ್ಥಿರಾಸ್ತಿ ಆಧಾರ ಸಾಲವನ್ನು ಅನುತ್ಪಾದಕ ಸಾಲ ನಿರ್ವಹಣೆ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ Techincal Write Off ಮಾಡಲು ಆಡಳಿತ ಮಂಡಳಿಯು ತೀರ್ಮಾನಿಸಿ ಪುಸ್ತಕಗಳಿಂದ ತೆಗೆದುಹಾಕಿದೆ.

ಒಟ್ಟು ಸಾಲ ಪ್ರಕರಣಗಳು	ಸಾಲ ವಿಧ	Techincal Write Off ಮಾಡಿದ ಅಸಲು	ಕಾರಣ
1	ವ್ಯಾಪಾರ ಸಾಲ	47,906	ಸಾಲಗಾರರು / ಜಾಮೀನುದಾರರು ನಾಪತ್ತೆ ಕಾರಣ
68	ಜಾಮೀನು ಸಾಲ	19,40,245	ಸಾಲಗಾರರು / ಜಾಮೀನುದಾರರು ನಾಪತ್ತೆ ಕಾರಣ
1	ಸ್ಥಿರಾಸ್ತಿ ಆಧಾರ ಸಾಲ	66,47,669	ಆಧಾರವಾಗಿದ್ದ ಸ್ಥಿರಾಸ್ತಿಯನ್ನು ಕೆರೆಅಂಗಳಕ್ಕೆ ಸೇರಿದ ಆಸ್ತಿಯೆಂದು ಬಿಡಿಎ ರವರು ವಶಪಡಿಸಿಕೊಂಡ ಕಾರಣ

ಸಂಸ್ಥೆಯು ಮೇಲೆ ವಿವರಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನಾವುದೇ ಪ್ರಕರಣಗಳಲ್ಲಿ ಅಸಲು ಸಾಲ ಮನ್ನಾ ತೀರ್ಮಾನ ಕೈಗೊಂಡಿರುವುದಿಲ್ಲ.

Techincal Write Off ಆದ ಮೇಲಿನ ಪ್ರಕರಣಗಳಲ್ಲಿ ಸಾಲಗಾರರು ಸಾಲ ಮರುಪಾವತಿಸಬೇಕಾದ ಜವಾಬ್ದಾರಿಯು ಮುಂದುವರೆದಿದ್ದು, ಸಂಸ್ಥೆಯು ಸೂಕ್ತ ಗಮನಹರಿಸಿ ಸಾಲ ವಸೂಲಿ ಮಾಡಲು ಸೂಚಿಸಿದೆ.

ಸಮಾಧಾನ : "Technical Write off" ಆದ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

6	ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ.	ಸುಸ್ತಿ ಸಾಲಗಾರರಿಂದ ಸಂಸ್ಥೆಗೆ ಬಾಕಿಯಾಗಿರುವ ಮೊಬಲಗನ್ನು ವಸೂಲಿ ಮಾಡುವ ಉದ್ದೇಶದಿಂದ ಅಂತಹ ಸುಸ್ತಿದಾರರಿಗೆ ಅಂಚೆ ಮೂಲಕ ಬಾಕಿ ಕಂತುಗಳನ್ನು ಪಾವತಿಸಲು ನೋಟಿಸು ಕಳುಹಿಸುವುದು, ಸಾಲ ಮರುಪಾವತಿ ಮಾಡದಿದ್ದಲ್ಲಿ ಬ್ಯಾಂಕಿನಿಂದ ಮುಂದೆ ಕೈಗೊಳ್ಳುವ ಕ್ರಮದ ಬಗ್ಗೆ ತಿಳಿಸಿ ಸೂಚನೆ ನೀಡುವುದು, ವಸೂಲಾತಿ ಸಿಬ್ಬಂದಿಗಳು ಸದರಿ ಸುಸ್ತಿದಾರರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಬಾಕಿಯಿರುವ ಸಾಲವನ್ನು ಮರುಪಾವತಿ ಪಡೆಯಲು ಕ್ರಮವಹಿಸುತ್ತಿರುವುದು ಮತ್ತು ಕಾನೂನು ಕ್ರಮ ಅಳವಡಿಸಿ ಸಾಲ ವಸೂಲಿ ಮಾಡುತ್ತಿರುವುದು ಕಂಡು ಬಂದಿದೆ.

ಎಫ್.	**ದೊಡ್ಡ ಪ್ರಮಾಣ ಸಾಲ /ಮುಂಗಡಗಳು:** ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯ ಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.	ದೊಡ್ಡ ಪ್ರಮಾಣ ಸಾಲ / ಮುಂಗಡಗಳಿಗೆ ಸಂಬಂಧಿಸಿದಂತೆ ಸಾಲಗಾರರು ನೀಡುವ ಯೋಜನಾ ವರದಿ ನೈಜತೆ ಮತ್ತು ಅಂತಹ ಯೋಜನಾ ಸಫಲತೆ ಪರೀಕ್ಷಿಸಲು ಮತ್ತು ಸಾಲಗಾರನು ಯೋಜನೆ ಸಫಲ ಮಾಡಲು ಆತನ ಅನುಭವ ಪರಿಗಣಿಸುವುದ ರೊಂದಿಗೆ ಸಾಲಗಾರನ ಮರುಪಾವತಿ ಸಾಮರ್ಥ್ಯವನ್ನು ಗಮನದಲ್ಲಿರಿಸಿ ಕ್ರಮವಹಿಸುವುದು.

ಜಿ.	**ಸದಸ್ಯರ ಸಾಲ ಮತ್ತು ಮುಂಗಡಗಳು** ಬ್ಯಾಂಕಿನ ಉಪನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ.

ಕ್ರ. ಸ.	ಸಾಲದ ಸ್ವರೂಪ	ಉಪ ನಿಯಮ	ಸಾಲದ ಗರಿಷ್ಠ ಮಿತಿ
1	ಠೇವಣಿ ಸಾಲ	ಸಾಲ ಒಳನಿಯಮ	ಠೇವಣಿ ಮೊತ್ತ ಶೇಕಡ 90 ರಷ್ಟು
2	ಸ್ಥಿರಾಸ್ತಿ ಆಧಾರ ಓವರ್ ಡ್ರಾಫ್ಟ್ ಸೌಲಭ್ಯ /ಸ್ಥಿರಾಸ್ತಿ ಆಧಾರ ಸಾಲ	ಸಾಲ ಒಳನಿಯಮ	ರೂ. 1200.00 ಲಕ್ಷ
3	ವಿಶೇಷ ಒಡವೆ ಸಾಲ	ಸಾಲ ಒಳನಿಯಮ	ರೂ. 4.00 ಲಕ್ಷ
4	ಒಡವೆ ಸಾಲ ಮತ್ತು ಒಡವೆ ಆಧಾರ OD	ಸಾಲ ಒಳನಿಯಮ	ರೂ. 20.00 ಲಕ್ಷ
5	LIC/NSC/IVP ಆಧಾರ	ಸಾಲ ಒಳನಿಯಮ	ಸರೆಂಡರ್ ವ್ಯಾಲ್ಯೂನ ಶೇಕಡ 90 ರಷ್ಟು
6	ವಾಹನ ಸಾಲ	ಸಾಲ ಒಳನಿಯಮ	ವಾಹನ ಮೌಲ್ಯದ ಶೇಕಡ 70 ರಷ್ಟು
7	ವ್ಯಾಪಾರ ಸಾಲ/ಜಾಮೀನು ಸಾಲ	ಸಾಲ ಒಳನಿಯಮ	ರೂ. 2.00 ಲಕ್ಷ
8	"ಬಿ" ಖಾತಾ ಸ್ಥಿರಾಸ್ತಿ ಆಧಾರ ಸಾಲಗಳು	ಸಾಲ ಒಳನಿಯಮ	ರೂ. 30.00 ಲಕ್ಷ

2. ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು.

ಸಾಲಗಳ ಸ್ವರೂಪ	ಆರಂಭದ ಬಾಕಿ	ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ	ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ	ವರ್ಷಾಂತ್ಯಕ್ಕೆ ಬಾಕಿ	ಯಾದಿಯ ಮೊತ್ತ	ಅಂತರ	ಶೇಕಡವಾರು ಪ್ರಮಾಣ
ಜಾಮೀನು ಸಾಲ	33,46,206.00	3,02,98,524	3,21,16,154.00	15,28,576.00	15,28,576.00	ಇಲ್ಲ	0.01
ವಾಹನ ಹೈಪೋಥಿಕೇಷನ್ ಸಾಲ	18,76,261.00	6,39,275	11,21,736.00	13,93,800.00	13,93,800.00	ಇಲ್ಲ	0.01
ಸಾರಿಗೆ ವಾಹನ ಸಾಲ	72,10,367.00	26,77,494.40	38,73,057.40	60,14,804.00	60,14,804.00	ಇಲ್ಲ	0.04
ಸ್ಥಿರಾಸ್ತಿ ಆಧಾರ ಸಾಲ	1179,01,36,943.41	407,10,65,579.32	395,05,23,380.65	1191,06,79,142.08	1191,06,79,142.08	ಇಲ್ಲ	86.22

ಠೇವಣಿ ಆಧಾರ ಸಾಲ	35,30,22,403.00	83,86,10,930.00	82,83,54,472.13	36,32,78,860.88	36,32,78,860.88	ಇಲ್ಲ	2.63
ಚಿನ್ನಾಭರಣ ಆಧಾರ ಸಾಲ	8,42,68,276.00	28,42,70,539.00	24,47,28,706.00	12,38,10,109.00	12,38,10,109.00	ಇಲ್ಲ	0.90
ಚಾಲ್ತಿ ಖಾತೆಯಲ್ಲಿ ಓವರ್ ಡ್ರಾಫ್ಟ್	40,71,66,595.32	297,05,90,732.91	296,03,47,460.86	41,74,09,867.37	41,74,09,867.37	ಇಲ್ಲ	3.02
ಠೇವಣಿ ಮೇಲೆ ಓವರ್ ಡ್ರಾಫ್ಟ್	7,30,31,974.21	45,42,40,729.58	45,09,21,448.97	7,63,51,254.82	7,63,51,254.82	ಇಲ್ಲ	0.55
ವಿಶೇಷ ಒಡವೆ ಸಾಲ	42,51,16,120.00	96,87,36,161.00	73,87,10,448.00	65,51,41,833.00	65,51,41,833.00	ಇಲ್ಲ	4.74
ಒಡವೆ ಆಧಾರ ಓವರ್ ಡ್ರಾಫ್ಟ್	37,027.00	1,01,660.00	1,38,687.00	---	---	ಇಲ್ಲ	–
ವ್ಯಾಪಾರ ಸಾಲ	3,90,25,441.77	4,23,72,290.00	2,73,53,058.13	5,40,44,673.64	5,40,44,673.64	ಇಲ್ಲ	0.39
NSC/IVP/LIC ಆಧಾರ ಸಾಲ	–	1,68,598.00	1,41,598.00	27,000.00	27,000.00	ಇಲ್ಲ	0.002
ಸಿಬ್ಬಂದಿ ಸಾಲ	15,00,84,642.50	10,50,89,710.00	4,96,91,583.50	20,54,82,769.00	20,54,82,769.00	ಇಲ್ಲ	1.49
ಒಟ್ಟು ರೂ.	**1333,43,22,257.21**	**976,88,62,223.21**	**928,80,21,790.64**	**1381,51,62,689.79**	**1381,51,62,689.79**	**ಇಲ್ಲ**	**100%**

ಠೇವಣಿಗೆ ಸಾಲಗಳ ಅನುಪಾತವು ಶೇಕಡ 63.99 ರಷ್ಟಿದೆ.

3. ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ.

ಸಾಲ ಮತ್ತು ಮುಂಗಡಗಳು :

ಬ್ಯಾಂಕಿನ ಉಪನಿಯಮ ಸಂಖ್ಯೆ 68 ರಂತೆ ವಿವಿಧ ಉದ್ದೇಶಗಳಿಗಾಗಿ ಸಂಸ್ಥೆಯ ಸದಸ್ಯರುಗಳಿಗೆ ಸಾಲ ನೀಡಲು ಅವಕಾಶವಿರುತ್ತದೆ. ಪ್ರಸಕ್ತ ಸಾಲಿನ ಪ್ರಾರಂಭದಲ್ಲಿ ರೂ. 1318,42,37,614.71 ಗಳು ವಿವಿಧ ಸಾಲಗಳ ಬಾಬ್ತು ಸಂಸ್ಥೆಗೆ ಬಾಕಿಯಾಗಿದ್ದು 2024–25ನೇ ಸಾಲಿನಲ್ಲಿ ಸದಸ್ಯರುಗಳಿಗೆ ರೂ. 966,37,72,513.21 ಗಳನ್ನು ವಿವಿಧ ಸಾಲಗಳ ರೂಪದಲ್ಲಿ ನೀಡಿದ್ದು ಹಾಗೂ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 923,83,30,207.14 ಗಳು ವಸೂಲಾಗಿದ್ದು ಸಾಲಾಂತ್ಯಕ್ಕೆ ವಿವಿಧ ಸಾಲಗಳ ಬಾಬ್ತು ಒಟ್ಟು ರೂ. 1360,96,79,920.79 ಗಳು 14133 ಖಾತೆಗಳ ಸದಸ್ಯರಿಂದ ಬ್ಯಾಂಕಿಗೆ ಬಾಕಿ ಬರಬೇಕಾಗಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸಾಲಗಳು ಮತ್ತು ಮುಂಗಡಗಳು	ದಿನಾಂಕ 31.03.2024ಕ್ಕೆ ಮೊಬಲಗು	ದಿನಾಂಕ : 31.03.2025 ರಲ್ಲಿದ್ದಂತೆ	
		ಖಾತೆಗಳ ಸಂಖ್ಯೆ	ಮೊಬಲಗು
1. ಠೇವಣಿ ಆಧಾರ ಸಾಲ	35,30,22,403.00	1111	36,32,78,860.88
2. ಚಾಲ್ತಿ ಖಾತೆಯಲ್ಲಿ ಓವರ್ ಡ್ರಾಫ್ಟ್	40,71,66,595.32	109	41,74,09,867.37
3. ಠೇವಣಿಗಳ ಮೇಲಿನ ಓವರ್ ಡ್ರಾಫ್ಟ್	7,30,31,974.21	140	7,63,51,254.82
4. ವಿಶೇಷ ಒಡವೆ ಸಾಲ	42,51,16,120.00	5038	65,51,41,833.00
5. ಒಡವೆ ಆಧಾರ ಓವರ್ ಡ್ರಾಫ್ಟ್	37,027.00	–	–

6. ಚಿನ್ನದ ಒಡವೆ ಆಧಾರ ಸಾಲ	8,42,68,276.00	208	12,38,10,109.00
7. ವಾಹನ ಸಾಲ	18,76,261.00	9	13,93,800.00
8. ಸಾರಿಗೆ ವಾಹನ ಸಾಲ	72,10,367.00	11	60,14,804.00
9. ಜಾಮೀನು ಸಾಲ	33,46,206.00	19	15,28,576.00
10. ವ್ಯಾಪಾರ ಸಾಲ	3,90,25,441.77	396	5,40,44,673.64
11. ಸ್ಥಿರಾಸ್ತಿ ಆಧಾರ ಸಾಲ	1179,01,36,943.41	7091	1191.06,79,142.08
12. NSC/IVP/LIC ಆಧಾರ ಸಾಲ	–		27,000.00
ಒಟ್ಟು	**1318,42,37,614.71**	**14133**	**1360,96,79,920.79**

ಸಾಲು ಪ್ರಾರಂಭಕ್ಕೆ ರೂ. 1318,42,37,614.71 ಗಳ ಸಾಲವನ್ನು ಸದಸ್ಯರುಗಳಿಗೆ ನೀಡಲಾಗಿದ್ದು, ಪ್ರಸಕ್ತ ವರದಿಯ ಸಾಲಿನ ಅಂತ್ಯಕ್ಕೆ ಬ್ಯಾಂಕು ತನ್ನ ಸದಸ್ಯರಿಗೆ ಒದಗಿಸಿರುವ ಸಾಲದ ಸೌಲಭ್ಯವು ರೂ. 1360,96,79,920.79 ಗಳಾಗಿದ್ದು, ವರದಿ ಸಾಲಿನಲ್ಲಿ ರೂ. 42,54,47,306.08 ಗಳ ಸಾಲಗಳು ಹೆಚ್ಚಿರುತ್ತದೆ. ಅಂದರೆ ವರದಿ ಸಾಲಿನಲ್ಲಿ ಸಾಲಗಳು ಶೇಕಡ 3.23 ಗಳು ಹೆಚ್ಚಾಗಿವೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ಬ್ಯಾಂಕು ಸಂಗ್ರಹಿಸಿರುವ ಒಟ್ಟು ಠೇವಣಿ ಮತ್ತು ಮೂಲ ಬಂಡವಾಳದ ಶೇಕಡ 75 ರಷ್ಟು ಸೇರಿ ಒಟ್ಟು ಮೊಬಲಗು ರೂ.236858.19 ಲಕ್ಷಗಳ ಶೇಕಡ 70 ರಷ್ಟು ರೂ. 165800.73 ಲಕ್ಷಗಳ ಸಾಲವನ್ನು ನೀಡಲು ಅವಕಾಶವಿದ್ದು ಸಾಲಾಖೈರು ದಿನಾಂಕ: 31.03.2025 ರ ಅಂತ್ಯಕ್ಕೆ ರೂ. 138151.63 ಲಕ್ಷಗಳ ಸಾಲವನ್ನು ನೀಡಲಾಗಿದೆ. ಪ್ರಸಕ್ತ ಸಾಲಿನ ಅಂತ್ಯಕ್ಕೆ ಬಾಕಿ ಇರುವ ರೂ. 138151.63 ಲಕ್ಷಗಳಲ್ಲಿ ರೂ.107167.86 ಲಕ್ಷಗಳ ಮೊಬಲಗು ಆದ್ಯತಾ ವಿಭಾಗಕ್ಕೆ (ಪ್ರಿಯಾರಿಟಿ ಸೆಕ್ಟರ್‌ಗೆ) ಸಂಬಂಧಿಸಿರುತ್ತದೆಂದು ಸಂಸ್ಥೆಯವರು ಆರ್.ಬಿ.ಐ.ಗೆ ಸಲ್ಲಿಸಿರುವ ವರದಿಗಳಲ್ಲಿ ತಿಳಿಸಿರುತ್ತಾರೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ದಿನಾಂಕ 31.03.2025 ರ ಅಂತ್ಯಕ್ಕೆ ಆದ್ಯತಾ ವಲಯಗಳ ಸಾಲಗಳು ಒಟ್ಟು ಹೊಂದಾಣಿಕೆ ನಿವ್ವಳ ಸಾಲಗಳ ಕನಿಷ್ಠ ಶೇಕಡ 60 ರಷ್ಟು ಇರಬೇಕಿದ್ದು ಬ್ಯಾಂಕು ಸದರಿ ನಿಯಮ ಪಾಲಿಸಿರುವುದು ಕಂಡು ಬಂದಿದೆ.

ದಿನಾಂಕ 31.03.2025 ಕ್ಕೆ ಬ್ಯಾಂಕಿನಲ್ಲಿ ರೂ. 283945.41 ಲಕ್ಷ ರೂ. ಗಳ ನಿವ್ವಳ ಆಸ್ತಿ ಲೆಕ್ಕಗಳ ಮೊಬಲಗಿದ್ದು ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಸದರಿ ನಿವ್ವಳ ಆಸ್ತಿ ಮೊಬಲಗಿನ ಶೇಕಡ 10 ರಷ್ಟು ಮೊತ್ತ ಅಂದರೆ ರೂ. 28394.54 ಲಕ್ಷಗಳ ಆಧಾರ ರಹಿತ (ಭದ್ರತೆ ಇಲ್ಲದ) ಸಾಲಗಳನ್ನು ನೀಡಲು ಅವಕಾಶವಿದೆ. ಆದರೆ ಸಂಸ್ಥೆಯವರು ಸಾಲಾಂತ್ಯಕ್ಕೆ ರೂ. 555.73 ಲಕ್ಷಗಳ ಆಧಾರ ರಹಿತ (ಭದ್ರತೆಯಿಲ್ಲದ) ಸಾಲಗಳನ್ನು ನೀಡಿದ್ದು ಇದು ಬ್ಯಾಂಕಿನ ಒಟ್ಟು ನಿವ್ವಳ ಆಸ್ತಿಯ ಶೇಕಡವಾರು 0.20 ಆಗಿದ್ದು ಸದರಿ ಸಾಲಗಳು ಭಾರತೀಯ ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿರುವ ಮಿತಿಯೊಳಗೆ ಇರುವುದು ಕಂಡು ಬಂದಿದೆ.

ಈ ಮೇಲ್ಕಂಡ ಎಲ್ಲಾ ಸಾಲಗಳ ಬಗ್ಗೆ ಸಂಸ್ಥೆಯವರು ಕುಳುವಾರು ಬಾಕಿ ಪಟ್ಟಿಗಳನ್ನು ತಯಾರಿಸಿದ್ದು ಪರಿಶೀಲಿಸಲಾಗಿ ಎಲ್ಲಾ ಸಾಲಗಳ ಬಗ್ಗೆ ಕುಳುವಾರು ಪಟ್ಟಿಯ ಬಾಕಿ ಮೊಬಲಗುಗಳು ಆಸ್ತಿ ಜವಾಬ್ದಾರಿ ತ:ಖ್ತೆಯ ಮೊಬಲಗುಗಳೊಂದಿಗೆ ತಾಳೆ ಇರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನವರ ಸೂಚನೆಯ ಮೇರೆಗೆ ಸಂಸ್ಥೆಯು ಸದಸ್ಯರುಗಳಿಗೆ ನೀಡುವ ಸಾಲಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚಿಸಿಕೊಂಡು ಸಹಕಾರ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದೆ ಮತ್ತು ಆಡಳಿತ ಮಂಡಳಿಯು ಕಾಲಕಾಲಕ್ಕೆ ಸದರಿ ನಿಯಮಗಳಿಗೆ ತಿದ್ದುಪಡಿಗಳನ್ನು ಮಾಡಿ ಅನುಷ್ಠಾನಗೊಳಿಸಿರುವುದು ಕಂಡು ಬಂದಿದೆ.

4	ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಕೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?	ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಠೇವಣಿ ಆಧಾರ ಸಾಲ ಹೊರತುಪಡಿಸಿ ಇತರೆ ಯಾವುದೇ ಸಾಲ ಪಡೆದಿರುವುದಿಲ್ಲ. ಅನ್ವಯಿಸುವುದಿಲ್ಲ
5	ಸಾಲದ ಕುಳುವಾರು ತಃಖ್ತೆಗಳು ಆಸ್ತಿ–ಜವಾಬ್ದಾರಿ ತಃಖ್ತೆಗೆ ತಾಳೆ ಇರುವ ಬಗ್ಗೆ.	ಕಂಡಿಕೆ 24 (ಜಿ) (2) ರಲ್ಲಿ ವಿವರ ನೀಡಿದ್ದು ಆಸ್ತಿ–ಜವಾಬ್ದಾರಿ ತಃಖ್ತೆಗೆ ಕುಳುವಾರು ಪಟ್ಟಿಯಲ್ಲಿನ ಮೊಬಲಗುಗಳು ತಾಳೆಯಾಗುತ್ತಿವೆ.
6	ಮುದ್ದತ್ತ ಮೀರಿದ ಮತ್ತು ಮುದ್ದತ್ತ ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶವಿರುವುದೋ?	ಸಂಸ್ಥೆಯು ಓವರ್ ಡ್ರಾಫ್ಟ್ ಸೌಲಭ್ಯಗಳನ್ನು ಮಾತ್ರ ನವೀಕರಿಸುವ ಪದ್ಧತಿ ಇರಿಸಿಕೊಂಡಿದ್ದು ಅವುಗಳು ಸಾಲ ನಿಯಮಾವಳಿಗಳ ರೀತ್ಯಾ ಇರುತ್ತದೆ.
7	ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ.	ಸಂಸ್ಥೆಯು ಸ್ಥಿರಾಸ್ತಿ ಆಧಾರ ಓವರ್‌ಡ್ರಾಫ್ಟ್ ಸೌಲಭ್ಯಗಳನ್ನು ಹೊರತುಪಡಿಸಿ ಉಳಿದ ಸಾಲ ಸೌಲಭ್ಯಗಳನ್ನು ನವೀಕರಿಸುವ ಪದ್ಧತಿ ಇರುವುದಿಲ್ಲ. ಈ ರೀತಿ ನವೀಕರಿಸಿದ ಓವರ್ ಡ್ರಾಫ್ಟ್ ಸೌಲಭ್ಯಗಳು 60 ಪ್ರಕರಣಗಳಲ್ಲಿ ರೂ.32,91,33,000.00 ಗಳಾಗಿರುತ್ತವೆ.
8	ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತಿವೆಯೇ ವಿವರಿಸಿ.	ಇಂತಹ ಪದ್ಧತಿ ಸಂಸ್ಥೆಯಲ್ಲಿ ಇರುವುದಿಲ್ಲ.
9	ಹಳೆ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರು ಮಾಡಿ ಹಳೆ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ	ಇರುವುದಿಲ್ಲ.
10	ಬಂಗಾರ ಅಡುವಿನ ಸಾಲ ನೀಡಿದಲ್ಲಿ ಸಂಸ್ಥೆಯಲ್ಲಿಯ ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ	ವರ್ಷಾಂತ್ಯಕ್ಕೆ ಸಂಸ್ಥೆಯು ಸದಸ್ಯರುಗಳಿಗೆ ಚಿನ್ನಾಭರಣಗಳ ಆಧಾರ ಕೆಳಕಂಡ ಸಾಲಗಳನ್ನು ನೀಡಿದೆ. ವಿಶೇಷ ಒಡವೆ ಸಾಲ – ರೂ. 65,51,41,833.00 ಚಿನ್ನದ ಒಡವೆ ಆಧಾರ ಸಾಲ – ರೂ. 12,38,10,109.00

		ಶಾಖೆಗಳಲ್ಲಿ ಪ್ರತಿ ಖಾತೆದಾರರಿಗೆ ಸಂಬಂಧಿಸಿದ ಆಭರಣಗಳ ವಿವರಗಳುಳ್ಳ ಸ್ಟಾಕ್ ಪುಸ್ತಕಗಳನ್ನು ಬರೆದಿಟ್ಟಿರುತ್ತಾರೆ. ಈ ಸಾಲಗಳನ್ನು ಮಂಜೂರು ಮಾಡುವಾಗ ಆಧಾರ / ಅಡಮಾನ ಮಾಡಿಕೊಳ್ಳಲಾಗುವ ಆಭರಣಗಳನ್ನು ಪ್ರತಿಯೊಬ್ಬ ಖಾತೆದಾರರಿಗೂ ಪ್ರತ್ಯೇಕವಾದ ಸೀಲ್ ಮಾಡಿದ ಪ್ಲಾಸ್ಟಿಕ್ ಕವರ್‌ಗಳಲ್ಲಿಟ್ಟು ಸಂಸ್ಥೆಯ ವಶದಲ್ಲಿರುವ ಸುರಕ್ಷಿತವಾದ ತಿಜೋರಿಯಲ್ಲಿಡಲಾಗಿದೆ. ಸದರಿ ತಿಜೋರಿಯು ಬ್ಯಾಂಕಿನ ಶಾಖೆಯ ವ್ಯವಸ್ಥಾಪಕರು ಹಾಗೂ ಸಹಾಯಕ ಲೆಕ್ಕ ಲೇಖಕರು ಇವರುಗಳ ಜಂಟಿ ಜವಾಬ್ದಾರಿಯಲ್ಲಿರುತ್ತದೆ. ಸಂಸ್ಥೆಯು ವರ್ಷಾಂತ್ಯಕ್ಕೆ ನಗದು ಶಿಲ್ಕು ಮತ್ತು ಚಿನ್ನಾಭರಣ ಆಧಾರ ಸಾಲಗಳಿಗೆ ಒತ್ತೆ ಇರಿಸಿದ ಒಡವೆಗಳಿಗೆ ಸಂಬಂಧಿಸಿದಂತೆ IFFCO TOKIO ಜನರಲ್ ಇನ್ಸುರೆನ್ಸ್ ಕಂಪನಿಯವರಿಂದ ರೂ. 40.95 ಕೋಟಿಗಳಿಗೆ ಬ್ಯಾಂಕರ್ಸ್ ಬ್ಲಾಂಕೆಟ್ ವಿಮೆ ಪಡೆದಿದ್ದು ವಿಮೆಯು ಚಾಲ್ತಿಯಲ್ಲಿರುತ್ತದೆ.
11	ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು.	ದಿನಾಂಕ 31.03.2025 ಕ್ಕೆ ಸದಸ್ಯರುಗಳಿಗೆ ನೀಡಿದ ಒಟ್ಟು ಸಾಲ ಸೌಲಭ್ಯ ರೂ. 1360,96,79,920.79 ಗಳಿದ್ದು ಅವುಗಳ ಪೈಕಿ ಜಾಮೀನು ಸಾಲ ರೂ. 15,28,576.00 ಗಳು ಮತ್ತು ವ್ಯಾಪಾರ ಸಾಲ ರೂ. 5,40,44,673.64 ಗಳು ಮಾತ್ರ ವೈಯಕ್ತಿಕ ಜಾಮೀನು ಆಧಾರ ನೀಡಿದ ಸಾಲಗಳಾಗಿವೆ. ಇನ್ನುಳಿದ ಎಲ್ಲಾ ಸಾಲಗಳು ವಿವಿಧ ಭದ್ರತೆ ಆಧಾರ ನೀಡಿದ ಸಾಲಗಳಾಗಿವೆ. ಒಟ್ಟು ಸಾಲದ ಶೇಕಡ 0.40 ರಷ್ಟು ಮಾತ್ರ ವೈಯಕ್ತಿಕ ಜಾಮೀನು ಆಧಾರ ನೀಡಿದ ಸಾಲಗಳಿದ್ದು ಇನ್ನುಳಿದ ಶೇಕಡ 99.60 ರಷ್ಟು ಸಾಲಗಳು ವಿವಿಧ ಭದ್ರತೆ ಆಧಾರ ನೀಡಿದ ಸಾಲಗಳಾಗಿರುತ್ತದೆ.
12	ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘ ಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಸ್ಥಿರಾಸ್ತಿ ಆಧಾರದ ಸಾಲಗಳಿಗೆ ಆಧಾರವಾದ ಸ್ಥಿರಾಸ್ತಿಗಳ ಋಣಭಾರ ಪತ್ರ ಮತ್ತು ಕಂದಾಯ ರಶೀದಿಗಳನ್ನು ವರ್ಷ ವರ್ಷ ಪಡೆದು ಕಡತದಲ್ಲಿರಿಸಲು ಕ್ರಮ ಇಟ್ಟಿರುವುದು ಕಂಡು ಬಂದಿದ್ದು, ಎಲ್ಲಾ ಕೇಸುಗಳಲ್ಲಿ ಪಡೆದಿರುವುದಿಲ್ಲ. ಸಾಲ ಮಂಜೂರು ಮಾಡುವ ಮುನ್ನಾ ಅರ್ಜಿದಾರನ ಆದಾಯಗಳನ್ನು ಆತನ ಆದಾಯ ತೆರಿಗೆ ರಿಟರ್ನ್ಸ್‌ಗಳೊಂದಿಗೆ ಸಮೀಕರಿಸಿ ಕ್ರಮವಹಿಸಲು ಸೂಚಿಸಿದೆ.
13	ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು.	ಶಾಖೆಗಳಲ್ಲಿ ಕೆಲವು ಪ್ರಕರಣಗಳಲ್ಲಿ ಬಡ್ಡಿ ಲೆಕ್ಕಾಚಾರ ಮಾಡಿ ಪರಿಶೀಲಿಸಿದ್ದು ಬಡ್ಡಿ ಆಕರಣೆಯು ಸರಿ ಇರುವುದನ್ನು ದೃಢೀಕರಿಸಿಕೊಂಡಿದೆ.
14	ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಚಾರ ಹಾಕಿ ವಿಮರ್ಶಿಸುವುದು.	1) 31.03.2025ಕ್ಕೆ ಬ್ಯಾಂಕಿನ ಒಟ್ಟು ಸದಸ್ಯರು 81330 2) ಸಾಲ ಪಡೆದ ಸದಸ್ಯರು 8022 3) ಶೇಕಡವಾರು ಪ್ರಮಾಣ 9.86 ರಷ್ಟು

15	ರೂ. 20,000 ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು.	ಸಂಸ್ಥೆಯು ಯಾವುದೇ ಸಾಲಗಳನ್ನು ನಗದು ಪಾವತಿಸುತ್ತಿಲ್ಲ. ಸಾಲಗಳನ್ನು ಸಾಲಗಾರ ಉಳಿತಾಯ ಖಾತೆಗೆ ವರ್ಗಾಯಿಸುವ ಮೂಲಕ ವಿತರಿಸುತ್ತಿರುವುದನ್ನು ಪರಿಶೀಲಿಸಿ ದೃಢೀಕರಿಸಿಕೊಂಡಿದೆ.
16	ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಷಿಸುವುದು.	1) ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ಸಂಖ್ಯೆ 1131 2) ಸಾಲ ಮಂಜೂರು ಪಡೆದ ಸದಸ್ಯರು 1039 3) ಶೇಕಡವಾರು ಪ್ರಮಾಣ 91.87% (ಒಡವೆ ಸಾಲ, ಠೇವಣಿ ಸಾಲ ಹೊರತುಪಡಿಸಿ)
17	ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ ವಿವರಿಸುವುದು.	ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗನುಗುಣವಾಗಿ ದಿನಾಂಕ 31.03.2025 ರಲ್ಲಿದ್ದಂತೆ ಇರುವ ತನ್ನ ಒಟ್ಟು ಸಾಲ ರೂ. 138151.63 ಲಕ್ಷಗಳನ್ನು ಉತ್ಪಾದಕ ಸಾಲ ಮತ್ತು ಅನುತ್ಪಾದಕ ಸಾಲಗಳಾಗಿ ವಿಂಗಡಿಸಿದೆ. ಸದರಿ ವಿಂಗಡಣೆಯ ರೀತ್ಯಾ ಉತ್ಪಾದಕ ಸಾಲಗಳು ರೂ. 127732.70 ಲಕ್ಷಗಳಿದ್ದು ಉಳಿದ ಮೊಬಲಗು ರೂ. 10418.93 ಲಕ್ಷಗಳು ಅನುತ್ಪಾದಕ ಸಾಲಗಳಾಗಿರುತ್ತದೆ ಮತ್ತು ಸದರಿ ಅನುತ್ಪಾದಕ ಸಾಲಗಳ ಪೈಕಿ ರೂ. 5221.75 ಲಕ್ಷಗಳನ್ನು ಸಂಶಯಾತ್ಮಕ ಸಾಲಗಳೆಂದು ಮತ್ತು ರೂ.141.60 ಲಕ್ಷಗಳನ್ನು ಮುಳುಗುವ ಸಾಲಗಳೆಂದು ಗುರುತಿಸಿ ಕ್ರಮವಹಿಸಿರುವುದು ಕಂಡು ಬಂದಿದೆ.
18	ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೊ?	ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಬ್ಯಾಂಕಿನ ಒಟ್ಟು ಅನುತ್ಪಾದಕ ಸಾಲ ರೂ. 10418.93 ಗಳಿಗೆ ಸಂಬಂಧಿಸಿದಂತೆ ರೂ. 3652.23 ಲಕ್ಷಗಳ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ ಹೊಂದಿರಬೇಕಾದ ಅಗತ್ಯತೆ ಇದ್ದು, ವರ್ಷಾಂತ್ಯಕ್ಕೆ ರೂ. 24658.96 ಗಳ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ ಹೊಂದಿರುತ್ತದೆ.
19	ವರದಿ ಸಾಲಿನಲ್ಲಿ ವಿತರಿಸಿದ ಸಾಲದ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘ ಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಾಲಾತಿಗಳಲ್ಲಿರುವ ನ್ಯೂನ್ಯತೆಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಕ್ರಮ ಸಂಖ್ಯೆ 12 ರಲ್ಲಿ ವಿವರಿಸಿದೆ.
20	ಲೆಕ್ಕ ಪರಿಶೋಧನಾ ಸೂಚನೆ (Audit Instruction No.1) ಸಂಖ್ಯೆ ಸಿಎಡಿ/ಎಎಫ್ ಆರ್–1/ಎ.1,81–82, ದಿನಾಂಕ 04–07–1981 ರನ್ವಯ ಆಂಧ್ರ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ	ವರ್ಷಾಂತ್ಯಕ್ಕೆ ಕೆಲವು ಸಾಲಗಾರರಿಂದ ಬಾಕಿ ಪರಿಶೀಲನೆ ನಡೆಸಿದ್ದು ಪಟ್ಟಿಯನ್ನು ವರದಿಗೆ ಲಗತ್ತಿಸಿದೆ.

	ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರ ರಿಂದ ಖಚಿತಪಡಿಸಿಕೊಂಡಿರುವುದರ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು.	
25	**1**	**ಸುಸ್ತಿ ಸಾಲಗಳ ವಿವರ**	
		ಸುಸ್ತಿ ಸಾಲದ ಮೊತ್ತ	ದಿನಾಂಕ: 31.03.2025 ಕ್ಕೆ ಸದಸ್ಯರುಗಳಿಂದ ವಸೂಲಾಗಬೇಕಾಗಿರುವ ರೂ. 136096.80 ಲಕ್ಷಗಳಲ್ಲಿ 707 ಜನ ಸಾಲಗಾರ ಸದಸ್ಯರಿಂದ ಒಟ್ಟು ರೂ. 2237.59 ಲಕ್ಷ ವಿವಿಧ ಸಾಲಗಳು ಸುಸ್ತಿಯಾಗಿದ್ದು, ಸುಸ್ತಿ ಸಾಲಗಳ ಅವಧಿವಾರು ವರ್ಗೀಕರಣ ಪಟ್ಟಿಯನ್ನು ಮುಂದೆ ನೀಡಲಾಗಿದೆ. ಸುಸ್ತಿ ಸಾಲದ ಪ್ರಮಾಣ ಒಟ್ಟು ಸಾಲಕ್ಕೆ ಶೇಕಡ 1.62 ರಷ್ಟಿದೆ.

31.03.2025 ರ ಅಂತ್ಯಕ್ಕೆ ಸಂಸ್ಥೆಯಲ್ಲಿ ಈ ಕೆಳಗೆ ವಿವರಿಸುವಂತೆ ಒಟ್ಟು ರೂ.22,37,59,013.00 ಗಳ ಸಾಲದ ಮೊಬಲಗು ಸುಸ್ತಿಯಲ್ಲಿರುತ್ತದೆ.

ಕ್ರಮ ಸಂಖ್ಯೆ	ವಿವರಗಳು	ಸುಸ್ತಿದಾರರ ಸಂಖ್ಯೆ	ಬರಬೇಕಾಗಿರುವ ಬಾಕಿಯಲ್ಲಿ ಸುಸ್ತಿ ಮೊಬಲಗು
1	1 ವರ್ಷಕ್ಕೊಳಪಟ್ಟು	300	7,01,40,710.00
2	1 ರಿಂದ 2 ವರ್ಷಗಳು	94	1,99,78,759.00
3	2 ರಿಂದ 3 ವರ್ಷಗಳು	59	1,14,32,945.00
4	3 ರಿಂದ 5 ವರ್ಷಗಳು	81	1,79,61,294.00
5	5 ವರ್ಷಗಳಿಗೂ ಮೇಲ್ಪಟ್ಟು	173	10,42,42,305.00
	ಒಟ್ಟು	**707**	**22,37,59,013.00**

ವರ್ಷಾಂತ್ಯ 31.03.2025 ರಲ್ಲಿದ್ದಂತೆ ಸುಸ್ತಿಯಾಗಿರುವ ಸಾಲಗಳನ್ನು ಆಧಾರ ಸಹಿತ (ಭದ್ರತಾ ಸಾಲ) ಮತ್ತು ಆಧಾರ ರಹಿತ ಸಾಲ (ಅಭದ್ರತಾ ಸಾಲ) ವಾರು ವಿಂಗಡಣೆ ಈ ಕೆಳಕಂಡಂತಿರುತ್ತದೆ.

ಸುಸ್ತಿ ಸಾಲದ ಅವಧಿ	ಆಧಾರ ಸಹಿತ ಸಾಲ (ಭದ್ರತಾ ಸಾಲ) ಗಳು		ಆಧಾರ ರಹಿತ ಸಾಲ (ಅಭದ್ರತಾ ಸಾಲ) ಗಳು		ಒಟ್ಟು	
	ಪ್ರಕರಣಗಳು	ಮೊತ್ತ	ಪ್ರಕರಣಗಳು	ಮೊತ್ತ	ಪ್ರಕರಣಗಳು	ಮೊತ್ತ
1 ವರ್ಷಕ್ಕೊಳಪಟ್ಟು	266	6,93,94,839.00	34	7,45,871.00	300	7,01,40,710.00
1 ರಿಂದ 2 ವರ್ಷ	66	1,80,93,778.00	28	18,84,981.00	94	1,99,78,759.00
2 ರಿಂದ 3 ವರ್ಷ	30	84,29,855.00	29	30,03,090.00	59	1,14,32,945.00
3 ರಿಂದ 5 ವರ್ಷ	39	1,19,36,771.00	42	60,27,523.00	81	1,79,64,294.00
5 ವರ್ಷ ಮೇಲ್ಪಟ್ಟು	120	9,67,16,905.00	53	75,25,400.00	173	10,42,42,305.00
ಒಟ್ಟು	**521**	**20,45,72,148.00**	**186**	**1,91,86,865.00**	**707**	**22,37,59,013.00**

	2	**ಡಿ.ಸಿ.ಬಿ ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಶೇಕಡ**	ಸಂಸ್ಥೆಯು ಗಣಕೀಕರಣ ವ್ಯವಸ್ಥೆಯಡಿಯಲ್ಲಿ ಡಿಸಿಬಿ ರಿಜಿಸ್ಟರ್ ನಿರ್ವಹಿಸುತ್ತಿದ್ದು ವರದಿ ಸಾಲಾಂತ್ಯ 31.03.2025 ಕ್ಕೆ ಸುಸ್ತಿ ಸಾಲ ಒಟ್ಟು ಸಾಲಗಳಿಗೆ ಶೇಕಡ 1.62 ರಷ್ಟಿರುತ್ತವೆ. ಪ್ರಸಕ್ತ ಸಾಲಾರಂಭದಲ್ಲಿ ರೂ. 22,65,15,636.00 ಗಳ ಸುಸ್ತಿ ಸಾಲದ ಮೊಬಲಗು ವಸೂಲಾಗ ಬೇಕಾಗಿದ್ದು ವರದಿಯ ಸಾಲಿನಲ್ಲಿ ರೂ. 35,25,84,482.00 ಗಳ ಸುಸ್ತಿ ಸಾಲ ಖಾತೆಗಳ ಸಂಬಂಧ ತಗಾದೆ ಮಾಡಲಾದ ಮೊಬಲಗು ಸೇರಿಒಟ್ಟು ರೂ. 57,91,00,118.00 ಗಳ ಸಾಲದ ತಗಾದೆಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ರೂ. 35,53,41,105.00 ಗಳು ವಸೂಲಾಗಿರುತ್ತದೆ. ಈ ಸಾಲಿನ ಅಂತ್ಯಕ್ಕೆ ವಸೂಲಾಗಬೇಕಾಗಿದ್ದ ಮೊಬಲಗಿನಲ್ಲಿ ರೂ. 22,37,59,013.00 ಗಳು ವಸೂಲಾಗದೇ ಬಾಕಿ ಉಳಿದಿದ್ದು ಸದರಿ ಮೊಬಲಗು ಸುಸ್ತಿಯಾಗಿರುತ್ತದೆ. ಸಾಲಾಂತ್ಯಕ್ಕೆ ಬರಬೇಕಾಗಿರುವ ಒಟ್ಟು ಸಾಲಗಳ ಮೊತ್ತಕ್ಕೆ ಸುಸ್ತಿಯ ಮೊಬಲಗನ್ನು ಹೋಲಿಸಿದಲ್ಲಿ ಈ ಸುಸ್ತಿಯಾಗಿರುವ ಮೊಬಲಗು ಶೇಕಡ 1.62 ಆಗಿರುತ್ತದೆ. 2024–25ನೇ ಸಾಲಿನ ಸುಸ್ತಿ ಮೊಬಲಗನ್ನು ಹಿಂದಿನ ಸಾಲಿನ ಸುಸ್ತಿ ಮೊಬಲಗಿನೊಂದಿಗೆ ಹೋಲಿಸಿದರೆ ಅದು ಶೇಕಡ 0.10 ರಷ್ಟು ಕಡಿಮೆಯಾಗಿರುವುದು ಕಂಡು ಬರುತ್ತದೆ. ಸಂಸ್ಥೆಯವರು ಪರಿಶೀಲನೆಗೆ ಹಾಜರುಪಡಿಸಿದ ಪ್ರಸಕ್ತ ಸಾಲಿನ ತಗಾದೆ ವಸೂಲಿ ಮತ್ತು ಬಾಕಿ ತ:ಖ್ತೆಗಳನ್ನು (ಡಿಸಿಬಿ ಸ್ಟೇಟ್‌ಮೆಂಟ್) ಪರಿಶೀಲಿಸಿದಾಗ ಕಂಡು ಬಂದ ಅಂಶವೇನೆಂದರೆ ಸುಸ್ತಿಯಾಗಿರುವ ಅಸಲು ಮೊಬಲಗು ರೂ. 22,37,59,013.00 ಗಳಿಗೆ ಅನುಗುಣವಾಗಿ ರೂ. 54,09,67,376.86 ಗಳ ಬಡ್ಡಿಯ ಮೊಬಲಗು ಸಹ ಸಂಬಂಧಪಟ್ಟ ಸುಸ್ತಿ ಸಾಲಗಾರರಿಂದ ಸಂಸ್ಥೆಗೆ ಬಾಕಿ ಬರಬೇಕಾಗಿರುತ್ತದೆ. ಕಾರ್ಯಕಾರಿ ಸಮಿತಿಯವರು ಸುಸ್ತಿಯಾದ ಸಾಲದ ಮೊಬಲಗುಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಸುಸ್ತಿದಾರರಿಂದ ಬರಬೇಕಾಗಿರುವ ಅಸಲು ಮತ್ತು ಬಡ್ಡಿ ಮೊಬಲಗುಗಳ ವಸೂಲಾತಿಯ ಬಗ್ಗೆ ಹೆಚ್ಚಿನ ಗಮನವನ್ನು ನೀಡಲು ಸೂಚಿಸಿದೆ. ವರ್ಷಾವಾರು ವರ್ಗೀಕರಣ ಪಟ್ಟಿಯನ್ನು ಪರಿಶೀಲಿಸಿದಾಗ ಸುಸ್ತಿಯಾದ ಸಾಲದ ಮೊಬಲಗಿನ ಶೇಕಡ 54.62 ರಷ್ಟು ಮೂರು ವರ್ಷ ಮೇಲ್ಪಟ್ಟು ಅವಧಿಗೆ ಸಂಬಂಧಪಟ್ಟಿರುವುದು ಕಂಡು ಬರುತ್ತದೆ. ಸುಸ್ತಿ ಮೊಬಲಗಿನಲ್ಲಿ ಆಧಾರರಹಿತ ಸಾಲಗಳ ಪೈಕಿ ರೂ. 1,91,86,865.00 ಗಳು ಮತ್ತು ಆಧಾರ ಸಹಿತ ಸಾಲಗಳ ಪೈಕಿ ರೂ. 20,45,72,148.00 ಗಳು ಸಂಸ್ಥೆಗೆ ಬಾಕಿಯಾಗಿ ಉಳಿದಿರುತ್ತದೆ.

3. ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ

ಕ್ರ. ಸ.	ಸಾಲದ ವಿಧಗಳು	ಒಂದು ವರ್ಷದೊಳಗೆ		1 ರಿಂದ 2 ವರ್ಷದೊಳಗೆ		2 ರಿಂದ 3 ವರ್ಷದೊಳಗೆ	
		ಖಾತೆ ಸಂಖ್ಯೆ	ಮೊತ್ತ	ಖಾತೆ ಸಂಖ್ಯೆ	ಮೊತ್ತ	ಖಾತೆ ಸಂಖ್ಯೆ	ಮೊತ್ತ
1	ಒಡವೆ ಸಾಲ	14	54,93,515.00	2	28,50,000.00	–	–
2	ವಿಶೇಷ ಒಡವೆ ಸಾಲ	1	54,000.00	1	1,99,888.00	–	–
3	ಸ್ಥಿರಾಸ್ತಿ ಆಧಾರ ಸಾಲ	244	1,67,91,611.00	63	1,50,43,890.00	30	84,29,855.00
4	ವ್ಯಾಪಾರ ಸಾಲ	33	7,33,084.00	28	18,84,981.00	29	30,03,090.00
5	ಸರಕು ಸಾಗಾಣಿಕೆ ವಾಹನ ಸಾಲ	–	–	–	–	–	–
6	ಜಾಮೀನು ಸಾಲ	1	12,787.00	–	–	–	–
7	ಸ್ಥಿರಾಸ್ತಿ ಆಧಾರ ಓವರ್‌ಡ್ರಾಫ್ಟ್	7	4,70,55,713.00	–	–	–	–
8	ಒಡವೆ ಆಧಾರಿತ ಓವರ್ ಡ್ರಾಫ್ಟ್	–	–	–	–	–	–
	ಒಟ್ಟು	**300**	**7,01,40,710.00**	**94**	**1,99,78,759.00**	**59**	**1,14,32,945.00**

ಕ್ರ. ಸ.	ಸಾಲದ ವಿಧಗಳು	3 ರಿಂದ 5 ವರ್ಷದೊಳಗೆ		5 ವರ್ಷ ಮೇಲ್ಪಟ್ಟು		ಒಟ್ಟು	
		ಖಾತೆ ಸಂಖ್ಯೆ	ಮೊತ್ತ	ಖಾತೆ ಸಂಖ್ಯೆ	ಮೊತ್ತ	ಖಾತೆ ಸಂಖ್ಯೆ	ಮೊತ್ತ
1	ಒಡವೆ ಸಾಲ	–	–	–	–	16	83,43,515.00
2	ವಿಶೇಷ ಒಡವೆ ಸಾಲ	–	–	–	–	2	2,53,888.00
3	ಸ್ಥಿರಾಸ್ತಿ ಆಧಾರ ಸಾಲ	39	1,19,36,771.00	116	9,37,76,140.00	492	14,59,78,267.00
4	ವ್ಯಾಪಾರ ಸಾಲ	39	56,58,791.00	44	71,97,397.00	173	1,84,77,343.00
5	ಸರಕು ಸಾಗಾಣಿಕೆ ವಾಹನ ಸಾಲ	–	–	4	29,40,765.00	4	29,40,765.00
6	ಜಾಮೀನು ಸಾಲ	3	3,68,732.00	9	3,28,003.00	13	7,09,522.00
7	ಸ್ಥಿರಾಸ್ತಿ ಆಧಾರ ಓವರ್‌ಡ್ರಾಫ್ಟ್	–	–	–	–	7	4,70,55,713.00
8	ಒಡವೆ ಆಧಾರಿತ ಓವರ್ ಡ್ರಾಫ್ಟ್	–	–	–	–	–	–
	ಒಟ್ಟು	**81**	**1,79,64,294.00**	**173**	**10,42,42,305.00**	**707**	**22,37,59,013.00**

4. ಅನುತ್ಪಾದಕ ಸಾಲಗಳ ಪೈಕಿ ಕಾನೂನು ಕ್ರಮ ಅಳವಡಿಸಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ

ವರದಿ ಸಾಲಿನ ಅಂತ್ಯಕ್ಕೆ 830 ಸಾಲಗಾರರ ಖಾತೆಗಳಿಂದ ಒಟ್ಟು ರೂ. 10418.93 ಲಕ್ಷ ಸಾಲಗಳು ಅನುತ್ಪಾದಕ ಸಾಲಗಳಾಗಿದ್ದು ವಸೂಲಾತಿ ಸಂಬಂಧ ಕೆಳಕಂಡಂತೆ ಕಾನೂನು ಕ್ರಮ ಕೈಗೊಂಡಿರುವುದು ಕಂಡು ಬಂದಿದೆ.

ಕ್ರಮ ಸಂಖ್ಯೆ	ವಿವರ	ಸುಸ್ತಿದಾರರ ಸಂಖ್ಯೆ	ಅನುತ್ಪಾದಕ ಸಾಲದ ಮೊಬಲಗು
1	ನಿಬಂಧಕರ ಕಛೇರಿಯಲ್ಲಿ ದಾವೆಗಳು ವಿಚಾರಣೆ ಹಂತದಲ್ಲಿರುವುದು	45	1,48,49,308.00
2	ಡಿಕ್ರಿಗಳು ಬಂದಿದ್ದು ಅಮಲ್ದಾರಿ ದಾಖಲು ಮಾಡಬೇಕಾದ್ದು	4	20,86,593.00
3	ಅಮಲ್ದಾರಿ ಹಂತದಲ್ಲಿರುವುದು	27	1,51,79,984.00
4	ಸರ್ಫೇಸಿಯಾ (SARFAESIA) ದಾವೆಗಳು	743	94,32,83,683.00
	ಒಟ್ಟು	**819**	**97,53,95,568.00**

ಸಾಲಗಳ ವಸೂಲಾತಿಗೆ ಸಂಬಂಧಿಸಿದಂತೆ ಸಾಲಗಾರರ ಮನವೊಲಿಸಲು ಮತ್ತು ಕಾನೂನು ಕ್ರಮಗಳನ್ನು ಅನುಸರಿಸಲು ಶಾಖಾ ಮಟ್ಟದಲ್ಲಿ ಮತ್ತು ಆಡಳಿತ ಕಛೇರಿಯಲ್ಲಿ ಪ್ರತ್ಯೇಕವಾದ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ಸಾಲ ಪಡೆದು ಸುಸ್ತಿದಾರರಾದ ಸದಸ್ಯರಿಂದ ಬರಬೇಕಾದ ಮೊಬಲಗುಗಳಿಗೆ ಅವರ ವಿರುದ್ಧ ಕಾನೂನು ಕ್ರಮ ಅನುಸರಿಸಲು ಸೂಚಿಸಿದೆ. ಕಳೆದ ಮೂರು ಸಾಲುಗಳಲ್ಲಿನ ಅಂದರೆ 2022–23, 2023–24 ಮತ್ತು 2024–25 ನೇ ಸಾಲುಗಳ ಸುಸ್ತಿ ಸಾಲದ ಪ್ರಮಾಣವು ಕ್ರಮವಾಗಿ ಶೇಕಡ 1.82, 1.72 ಮತ್ತು 1.62 ಆಗಿರುತ್ತದೆ. ಈ ಮೇಲ್ಕಂಡ ಅಂಕಿ ಅಂಶಗಳನ್ನು ಗಮನಿಸಿದ್ದಲ್ಲಿ ಸುಸ್ತಿ ಸಾಲಗಳು ವರದಿ ಸಾಲಿನಲ್ಲಿ ಶೇಕಡ 0.10 ರಷ್ಟು ಕಡಿಮೆಯಾಗಿರುವುದು ಕಂಡು ಬಂದಿದೆ.

5	ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ (ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?	ಆಡಳಿತ ಮಂಡಳಿ ಸದಸ್ಯರು ತಮ್ಮ ಠೇವಣಿ ಆಧಾರ ಹೊರತುಪಡಿಸಿ ಇತರೆ ಯಾವುದೇ ಸಾಲ ಸೌಲಭ್ಯ ಹೊಂದಿಲ್ಲದ ಕಾರಣ ಈ ಕ್ರಮ ಅನುಸರಿಸಿರುವುದಿಲ್ಲ.
6	ಅಮಲ್ದಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು	ಅಮಲ್ದಾರಿ ಕ್ರಮಗಳಡಿಯಲ್ಲಿ ಯಾವುದೇ ಆಸ್ತಿ ಖರೀದಿಸಿರುವುದಿಲ್ಲ. 2022–23ನೇ ಸಾಲಿನಲ್ಲಿ SARFAESIA-2002 ಕಾಯ್ದೆಯಡಿಯಲ್ಲಿ ಸಾಲ ವಸೂಲಾತಿಗಾಗಿ ಬ್ಯಾಂಕಿಗೆ ಆಧಾರ ಮಾಡಿದ ಸ್ಥಿರಾಸ್ತಿಯ ಮಾರಾಟ ಕ್ರಮ ಅಳವಡಿಸಿದ ಒಂದು ಪ್ರಕರಣದಲ್ಲಿ ಹಲವು ಬಾರಿ ಹರಾಜು ಕ್ರಮ ಅನುಸರಿಸಿದಾಗ್ಯೂ ಬಿಡ್ದುದಾರರು ಸೂಕ್ತ ಬೆಲೆಗೆ ಬಿಡ್ದು ಮಾಡದ ಕಾರಣ ಬ್ಯಾಂಕು ಸ್ಥಿರಾಸ್ತಿ ಸಂಖ್ಯೆ ಹೊಸದು 20, ಹಳೆ ನಂಬರ್ 40, ನಿವೇಶನ ಸಂಖ್ಯೆ 2, 10ನೇ ಕ್ರಾಸ್, ಪೈಪ್‌ಲೈನ್ ರಸ್ತೆ, ಚೋಳೂರು ಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು (ಮೊದಲಿಗೆ 4ನೇ 'ಎ' ಕ್ರಾಸ್ ಹೊಸಹಳ್ಳಿ ಗ್ರಾಮ) ಹಾಲಿ ಬಿಬಿಎಂಪಿ ವಾರ್ಡ್ ನಂ. 33, ವಿಜಯನಗರ ಪಿ.ಐ.ಡಿ. ನಂ. 33–65–20, ಬೆಂಗಳೂರು ಅಳತೆ : ಪೂರ್ವ ದಿಂದ ಪಶ್ಚಿಮ 38+43 /2 ಅಡಿಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿಗಳು ಬ್ಯಾಂಕು ರೂ. 1,14,40,000/– ಗಳಿಗೆ ಬಿಡ್ದು ಮಾಡಿ ಖರೀದಿಸಿದ್ದು ವರದಿ ಸಾಲಾಂತ್ಯಕ್ಕೆ ಮುಂದುವರೆದಿದೆ. ಹಾಗೆಯೇ 2023–24ನೇ ಸಾಲಿನಲ್ಲಿ ವರ್ಷದಲ್ಲಿ ಬ್ಯಾಂಕಿಗೆ ಆಧಾರವಾಗಿದ್ದ ಸ್ಥಿರಾಸ್ತಿ ಸಂಖ್ಯೆ ಪ್ಲಾಟ್ (ಷೆಡ್) ನಂ.8, ಇಂಡಸ್ಟ್ರೀಲ್

		ಎಸ್ಟೇಟ್, ಪೀಣ್ಯ 3ನೇ ಹಂತ, ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ನೆಲಗೆದರನಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ, ಪೂರ್ವ – ಪಶ್ಚಿಮ 17 ಅಡಿಗಳು ಮತ್ತು ಉತ್ತರ – ದಕ್ಷಿಣ 128 ಅಡಿಗಳು ಅಳತೆಯ ಸ್ಥಿರಾಸ್ತಿಯನ್ನು ಸುಸ್ತಿ ಸಾಲ ವಸೂಲಾತಿಗೆ ಸಂಬಂಧಿಸಿದಂತೆ SARFAESIA-2002 ಕಾಯ್ದೆಯಡಿಯಲ್ಲಿ ಕಾನೂನು ಕ್ರಮ ಅನುಸರಿಸಿ ಹಲವು ಬಾರಿ ಹರಾಜು ಕ್ರಮ ಅನುಸರಿಸಿದಾಗ್ಯೂ ಬಿಡ್ದುದಾರರು ಬಿಡ್ದು ಮಾಡದ ಕಾರಣ ಬ್ಯಾಂಕು ರೂ. 1,09,80,000.00 ಗಳಿಗೆ ಬಿಡ್ದು ಮಾಡಿ ಸ್ಥಿರಾಸ್ತಿಯನ್ನು ತನ್ನ ಹೆಸರಿಗೆ ಖರೀದಿಸಿದ್ದು ವರದಿ ಸಾಲಾಂತ್ಯಕ್ಕೆ ಮುಂದುವರೆದಿದೆ.
7(1)	ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು)	ದಿನಾಂಕ: 31.03.2025 ರ ಅಂತ್ಯಕ್ಕೆ ಬ್ಯಾಂಕಿನ ಸದಸ್ಯರಿಂದ ರೂ. 1360,96,79,920.79 ಗಳು ಮತ್ತು ಸಿಬ್ಬಂದಿ ಸಾಲ ರೂ. 20,54,82,769.00 ಗಳ ಸಾಲವು ಬರಬೇಕಾಗಿದ್ದು ಈ ಮೊಬಲಗಿನಲ್ಲಿ ರೂ.10418.93 ಲಕ್ಷಗಳ ಸಾಲಗಳನ್ನು ಅನುತ್ಪಾದಕ ಸಾಲಗಳೆಂದು ಗುರುತಿಸಿದೆ. ಇದು ಒಟ್ಟು ಸಾಲಕ್ಕೆ ಶೇಕಡ 7.54 ರಷ್ಟಿದೆ. ಈ ಅನುತ್ಪಾದಕ ಸಾಲಗಳಿಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಮಾಡಬೇಕಾದ ಅವಕಾಶಗಳು ರೂ. 3652.23 ಲಕ್ಷಗಳಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಆದಾಯ ತೆರಿಗೆ ವಿನಾಯಿತಿ ಸೌಲಭ್ಯ ಪಡೆಯಲು ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (ಆದಾಯ ತೆರಿಗೆ) ಗಾಗಿ ರೂ.5,50,00,000/– ಗಳು, ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ (ಆದಾಯ ತೆರಿಗೆ–ಗೃಹ ನಿರ್ಮಾಣ) ರೂ.1,02,00,000.00 ಗಳ ಅವಕಾಶವನ್ನು ಕಲ್ಪಿಸಿರುತ್ತಾರೆ. ಹಾಗೆಯೇ ಸಂಸ್ಥೆಯು ನಿಧಿ ಕ್ರೋಢಿಕರಣ ದೃಷ್ಟಿಯಿರಿಸಿ ಪ್ರಸಕ್ತ ಸಾಲಿನಲ್ಲಿ ರೂ. 13,82,00,000.00 ಗಳನ್ನು ಕರಡು ಮತ್ತು ಸಂಶಯಾತ್ಮಕ ಸಾಲಗಳಿಗಾಗಿ ಅವಕಾಶ ಕಲ್ಪಿಸಿದೆ. ದಿನಾಂಕ: 31.03.2025 ರ ಅಂತ್ಯಕ್ಕೆ ಬ್ಯಾಂಕು ರೂ. 290,42,10,832.72 ಗಳ ವಿವಿಧ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿಯನ್ನು ಹೊಂದಿರುತ್ತದೆ. ಅನುತ್ಪಾದಕ ಸಾಲಗಳ ಸಂಬಂಧದಲ್ಲಿ ಬ್ಯಾಂಕು ಹೊಂದಿರುವ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿಯನ್ನು ಪರಿಗಣಿಸಿದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕಿನವರ ನಿರ್ದೇಶನಗಳನ್ವಯ ನಿವ್ವಳ ಅನುತ್ಪಾದಕ ಸಾಲಗಳು ಒಟ್ಟು ಸಾಲಕ್ಕೆ ಶೇಕಡ ಶೂನ್ಯ ಇರುತ್ತದೆ. NPA ತ:ಖ್ತೆ ದೃಢೀಕರಿಸಿ ಲಗತ್ತಿಸಲಾಗಿದೆ. ಸಂಸ್ಥೆಯವರು ದಿನಾಂಕ 31.03.2025 ಕ್ಕೆ ಹೊಂದಿರುವ NPA ತ:ಖ್ತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಸಲ್ಲಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಸಂಸ್ಥೆಯು ಅನುತ್ಪಾದಕ ಸಾಲಗಳನ್ನು ಕಡಿಮೆಗೊಳಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ಅಳವಡಿಸಲು ಕೋರಿದೆ.

ಸಮಾಧಾನ : ಅನುತ್ಪಾದಕ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

(2)	ದಿನಾಂಕ : 31–03–2025 ಕ್ಕೆ ಇರುವ ಎಲ್ಲ ಸಾಲಗಳ ರಿಸರ್ವ್ ಬ್ಯಾಂಕಿನ (IRAC) ಸುತ್ತೋಲೆಯಂತೆ ವರ್ಗೀಕರಿಸಲಾಗಿದೆಯೇ ?	ಹೌದು. ವರ್ಗೀಕರಿಸಲಾಗಿದೆ.
(3)	ಈ ಮೇಲಿನಂತೆ ವರ್ಗೀಕರಿಸಲಾಗಿರುವ ಅನುತ್ಪಾದಕ ಆಸ್ತಿಗಳಿಗೆ ರಿಝರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಶತಪ್ರತಿಶತ ರಷ್ಟು ಕಲ್ಪಿಸಲಾಗಿದೆಯೇ ?	ಕಲ್ಪಿಸಲಾಗಿದೆ.
(4)	ರಿಝರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಕಲ್ಪಿಸುವದಲ್ಲಿ ಏನಾದರು ಕೊರತೆ ಇದೇಯೇ? ಇದ್ದಲ್ಲಿ ರಕ್ಕಮುಗಳನ್ನು ಕಡ್ಡಾಯವಾಗಿ ನಮೂದಿಸುವುದು.	ಯಾವುದೇ ಕೊರತೆ ಇಲ್ಲ.
(5)	ಕೊರತೆ ಇರುವ ರಕ್ಕಮಿನ ಅವಕಾಶ ಕಲ್ಪಿಸಲು ಬ್ಯಾಂಕಿನ ಆಡಳಿತ ಮಂಡಳಿಯವರು ನಿರಾಕರಿಸಿದಲ್ಲಿ ಈ ಕುರಿತು ವರದಿ ಪುಟ (4) ರಲ್ಲಿ ಸೂಚಿಸಿದಂತೆ ಅರ್ಹತಾತ್ಮಕ ಅಭಿಪ್ರಾಯ ನೀಡಲಾಗಿದೆಯೇ ?	ಅನ್ವಯಿಸುವುದಿಲ್ಲ.
(6)	ಕಡಿಮೆ ಅವಕಾಶ ಕಲ್ಪಿಸಿರುವದರಿಂದ ಬ್ಯಾಂಕಿನ ಪ್ರಸಕ್ತ ಸಾಲಿನ ನಿವ್ವಳ ಲಾಭದ ಮೇಲೆ ಬೀರುವ ಪರಿಣಾಮ ಹಾಗೂ ಸದರಿ ನಿವ್ವಳ ಲಾಭ ಕ.ಸ.ಸಂಘಗಳ ನಿಯಮ (22) ರ ವ್ಯತಿರಿಕ್ತವಾಗಿದ್ದರಿಂದ ಪ್ರಮಾಣೀಕರಿಸದೇ ಈ ಕುರಿತು ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ.
8	ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು.	ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರು ಸಂಬಂಧಿಗಳು ಠೇವಣಿ ಆಧಾರ ಹೊರತುಪಡಿಸಿ ಇತರೆ ಯಾವುದೇ ಸಾಲ ಸೌಲಭ್ಯ ಹೊಂದಿರುವುದಿಲ್ಲ.

ಕ್ರಮ ಸಂಖ್ಯೆ	ನಿರ್ದೇಶಕರ ಹೆಸರು	ಬಾಕಿ ಸಾಲದ ಮೊತ್ತ (ಅಸಲು)	ಸುಸ್ತಿ ಸಾಲದ ಬಗ್ಗೆ	ಯಾವ ದಿನಾಂಕದಿಂದ ಸುಸ್ತಿಯಾಗಿದೆ	ಷರಾ
ಅನ್ವಯಿಸುವುದಿಲ್ಲ					

9	ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ	ದಿನಾಂಕ 31.03.2025 ಕ್ಕೆ ಬ್ಯಾಂಕಿಗೆ ಬರಬೇಕಾದ ಒಟ್ಟು ಸಾಲ ರೂ. 138151.65 ಲಕ್ಷಗಳು. ಇದರಲ್ಲಿ ಆದ್ಯತಾ ವಲಯಕ್ಕೆ ನೀಡಿರುವ ಸಾಲಗಳು ರೂ. 107167.86 ಲಕ್ಷಗಳು. ಹಿಂದಿನ ವರ್ಷಾಂತ್ಯಕ್ಕೆ ಇದ್ದ ಒಟ್ಟು ಸಾಲಕ್ಕೆ ಆದ್ಯತಾ ವಲಯದ ಸಾಲಗಳು ಶೇಕಡ 80.37 ರಷ್ಟಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಆದ್ಯತಾ ವಲಯಗಳ ಸಾಲಗಳು ಒಟ್ಟು ಸಾಲಗಳಿಗೆ ಕನಿಷ್ಠ ಶೇಕಡ 60 ರಷ್ಟು ಇರಬೇಕಿದೆ.

10	ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ	ದಿನಾಂಕ 31.03.2025 ಕ್ಕೆ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳು ರೂ.42338.84 ಲಕ್ಷಗಳು. ಹಿಂದಿನ ವರ್ಷಾಂತ್ಯಕ್ಕೆ ಇದ್ದ ಒಟ್ಟು ಸಾಲಕ್ಕೆ ಹೋಲಿಸಿದಾಗ ಶೇಕಡ 31.75 ರಷ್ಟಿದೆ.
11	ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವರು ಪ್ರಮಾಣ.	ದಿನಾಂಕ 31.03.2025 ಕ್ಕೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಪ್ರಮಾಣ ಶೇಕಡ 39.51 ರಷ್ಟಿದೆ.

ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು :

(ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನ್ಯತೆ, ಉಪನಿಯಮಕ್ಕೆ ವಿರುದ್ಧವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ, ಬಡ್ಡಿ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು)

ಬ್ಯಾಂಕಿಗೆ ವರದಿ ಸಾಲಿನಲ್ಲಿ ದಿನಾಂಕ 03.11.2024 ರವರೆಗೆ ಆಧಾರ ಸಹಿತ ಸಾಲಗಳಿಗೆ ಸಾಲದ ಶೇಕಡ 2.5 ರಷ್ಟು ಮತ್ತು ಆಧಾರ ರಹಿತ ಸಾಲಗಳಿಗೆ ಸಾಲದ ಶೇಕಡ 5 ರಷ್ಟು ಷೇರು ಜೋಡಣೆ ನಿಗದಿಪಡಿಸಿ ಅದರಂತೆ ಕಾರ್ಯವೆಸಗಿದೆ.

ಬ್ಯಾಂಕು ಕಳೆದ ಮೂರು ಸಾಲುಗಳಿಂದಲೂ ತನ್ನ CRAR ನ್ನು ಶೇಕಡ 12 ಕ್ಕಿಂತಲೂ ಮಿಗಿಲಾಗಿ ಇರಿಸಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ದಿನಾಂಕ 04.11.2024 ರಿಂದ ಅನ್ವಯವಾಗುವಂತೆ ಆಧಾರ ಸಹಿತ ಸಾಲಗಳಿಗೆ ಒಟ್ಟು ಸಾಲದ ಶೇಕಡ 0.5 ರಷ್ಟು ಮತ್ತು ಆಧಾರ ರಹಿತ ಸಾಲಿನ ಒಟ್ಟು ಸಾಲದ ಶೇಕಡ 5 ರಷ್ಟು ಷೇರು ಜೋಡಣೆ ನಿಗದಿಪಡಿಸಿದ್ದು, ಅದರಂತೆ ಕಾರ್ಯವೆಸಗಿರುವುದು ಕಂಡು ಬಂದಿದೆ. ಬ್ಯಾಂಕು ಚಿನ್ನಾಭರಣ ಆಧಾರ ಸಾಲಗಳನ್ನು ಉತ್ತೇಜಿಸುವ ಸಲುವಾಗಿ ಅವುಗಳಿಗೆ ಷೇರು ಜೋಡಣೆ ನೀತಿಯಿಂದ ವಿನಾಯ್ತಿ ನೀಡಿರುವುದು ಕಂಡು ಬಂದಿದೆ.

ಆಡಳಿತ ಮಂಡಳಿಯು ಆಗಿಂದಾಗ್ಗೆ ನಿಗದಿಪಡಿಸುವ ಬಡ್ಡಿ ದರಗಳ ಆಕರಣೆಯಲ್ಲಿ ವ್ಯತ್ಯಾಸಗಳಿರುವುದಿಲ್ಲ ಮತ್ತು ಉಪನಿಯಮಗಳಿಗೆ ವಿರುದ್ಧವಾಗಿ ಸಾಲ ನೀಡಿಕೆಯಾಗಿರುವುದಿಲ್ಲ.

ಅ) ಸಾಮಾನ್ಯ ಸಾಲ (ಠೇವಣಾತಿಗಳ ಆಧಾರದ ಮೇಲೆ) :

ಠೇವಣಾತಿಗಳ ಆಧಾರದ ಮೇಲೆ ನೀಡಿರುವ ಸಾಲದ ಬಾಬ್ತು ರೂ. 36,32,78,860.88 ಗಳು ಸಾಲಾಖೈರಿಗೆ ಬಾಕಿ ಬರಬೇಕಿದ್ದು ಈ ಬಗ್ಗೆ ದಿನಾಂಕ: 31.03.2025 ರ ಅಂತ್ಯಕ್ಕೆ ತಯಾರಿಸಿರುವ ಕುಳುವಾರು ಬಾಕಿ ಪಟ್ಟಿಯು ಶಾಖಾವಾರು ತಾಳೆ ಇರುತ್ತದೆ. ನಿಶ್ಚಿತ ಠೇವಣಿ, ಆವರ್ತಕ ಠೇವಣಿ (ರೆಕರಿಂಗ್ ಡಿಪಾಸಿಟ್), ರಜತ ಕ್ಯಾಷ್ ಸರ್ಟಿಫಿಕೇಟ್ ಇತ್ಯಾದಿ ಅವಧಿ ಠೇವಣಿಗಳ ಆಧಾರದ ಮೇಲೆ ಠೇವಣಿದಾರರಿಗೆ ಬ್ಯಾಂಕಿನವರು ಈ ಸಾಲಗಳನ್ನು ನೀಡಿರುತ್ತಾರೆ.

ಆ) ಚಿನ್ನದ ಆಭರಣಗಳ ಮೇಲೆ ವಿವಿಧ ಸಾಲಗಳು :

ಚಿನ್ನದ ಆಭರಣಗಳನ್ನು ಬ್ಯಾಂಕಿಗೆ ಆಧಾರ ಮಾಡಿಕೊಂಡು (ಅಡಮಾನ / ಒತ್ತೆ ಇಟ್ಟು) ಗರಿಷ್ಠ ರೂ.4.00 ಲಕ್ಷಗಳವರೆಗೆ ನೀಡುವ ವಿಶೇಷ ಒಡವೆ ಸಾಲ ಮೊಬಲಗು ರೂ. 65,51,41,833.00 ಗಳು 5038 ಸದಸ್ಯರುಗಳಿಂದ ದಿನಾಂಕ: 31.03.2025 ರ ಅಂತ್ಯಕ್ಕೆ ಸಂಸ್ಥೆಗೆ ಬರಬೇಕಾಗಿದ್ದು, ಈ ಬಗ್ಗೆ ಸಾಲಾಂತ್ಯಕ್ಕೆ ತಯಾರಿಸಲ್ಪಟ್ಟಿರುವ ಕುಳುವಾರು ಬಾಕಿ ಪಟ್ಟಿಯ ಮೊಬಲಗು ಆಸ್ತಿ ಜವಾಬ್ದಾರಿ ತಃಖ್ತೆಯ ಮೊಬಲಗಿನೊಂದಿಗೆ ತಾಳೆ ಇರುತ್ತದೆ. ಈ ಸಾಲಗಳು 12 ತಿಂಗಳ ಅವಧಿಯಾಗಿದ್ದು ಅಸಲು ಮತ್ತು ಬಡ್ಡಿಯನ್ನು ಒಂದೇ ಗಂಟಿನಲ್ಲಿ ಪಾವತಿಸಬಹುದಾಗಿದೆ. ಈ ಸಾಲಗಳ ಪೈಕಿ ರೂ.2,53,888.00 ಗಳು 2 ಪ್ರಕರಣಗಳಲ್ಲಿ ಸುಸ್ತಿಯಾಗಿದ್ದು, ಇದು ಶೇಕಡ 0.04 ರಷ್ಟಾಗಿದೆ. ಈ ಸುಸ್ತಿಯಾಗಿರುವ ಸಾಲಗಳ ವಸೂಲಾತಿಯ ಬಗ್ಗೆ ಕಾಲಕಾಲಕ್ಕೆ ಕಾನೂನು ರೀತ್ಯಾ ಕ್ರಮ ಅನುಸರಿಸಲು ಸೂಚಿಸಿದೆ.

ಚಿನ್ನದ ಆಭರಣಗಳನ್ನು ಬ್ಯಾಂಕಿಗೆ ಆಧಾರ ಮಾಡಿಕೊಂಡು ಗರಿಷ್ಠ 12 ತಿಂಗಳ ಮಾಸಿಕ ಕಂತುಗಳಲ್ಲಿ ಪಾವತಿಸುವಂತೆ ನೀಡುವ ಚಿನ್ನದ ಆಭರಣಗಳ ಸಾಲದ ಮೊಬಲಗು ರೂ. 12,38,10,109.00 ಗಳು 208 ಸದಸ್ಯರುಗಳಿಂದ ದಿನಾಂಕ: 31.03.2025 ರ ಅಂತ್ಯಕ್ಕೆ ಸಂಸ್ಥೆಗೆ ಬರಬೇಕಾಗಿದ್ದು ಈ ಬಗ್ಗೆ ಸಾಲಾಂತ್ಯಕ್ಕೆ ತಯಾರಿಸಲ್ಪಟ್ಟಿರುವ ಕುಳುವಾರು ಬಾಕಿ ಪಟ್ಟಿಯ ಮೊಬಲಗು ಆಸ್ತಿ ಜವಾಬ್ದಾರಿ ತಖ್ತೆ:ಯ ಮೊಬಲಗಿನೊಂದಿಗೆ ತಾಳೆ ಇರುತ್ತದೆ. ಈ

ಸಾಲಗಳ ಪೈಕಿ ರೂ. 83,43,515.00 ಗಳು 16 ಪ್ರಕರಣಗಳಲ್ಲಿ ಸುಸ್ತಿಯಾಗಿದ್ದು ಇದು ಶೇ. 6.74 ರಷ್ಟಿದೆ. ಈ ಸುಸ್ತಿಯಾಗಿರುವ ಸಾಲಗಳ ವಸೂಲಾತಿಯ ಬಗ್ಗೆ ಕಾನೂನು ರೀತ್ಯಾ ಕ್ರಮ ಅನುಸರಿಸಲು ಸೂಚಿಸಿದೆ.

ಸಂಸ್ಥೆಯ ಜಯನಗರ ಮತ್ತು ಪದ್ಮನಾಭನಗರ ಶಾಖೆಗಳಿಗೆ ಸಂಬಂಧಿಸಿದಂತೆ ಚಿನ್ನಾಭರಣ ಮೌಲ್ಯಮಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ. ಕೆ.ಎಸ್. ವೆಂಕಟೇಶ್ ಎಂಬುವವರು ತಮ್ಮ ಸ್ನೇಹಿತರು ಮತ್ತು ಸಂಬಂಧಿಗಳ ಹೆಸರಿನಲ್ಲಿ ನಕಲಿ ಚಿನ್ನಾಭರಣಗಳ ಆಧಾರ ಸಾಲ ಪಡೆಯಲು ಸಹಕಾರಿಯಾಗಿರುವುದು ಮತ್ತು ಸಂಬಂಧಿಸಿದ ವಿವರಗಳನ್ನು ಹಿಂದಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ವಿವರವಾಗಿ ನಮೂದಿಸಿದ್ದು, ಹಿಂದಿನ ಸಾಲಿನಲ್ಲಿ ಅಂತಹ 34 ಖಾತೆಗಳಿಗೆ ಸಂಬಂಧಿಸಿದಂತೆ ರೂ. 73,75,588.00 ಅಸಲು ಮೊಬಲಗುಗಳ ಚಿನ್ನಾಭರಣ ಸಾಲಗಳು ಯಾವುದೇ ಭದ್ರತೆ ಇಲ್ಲದ ಕಾರಣ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಅವುಗಳನ್ನು Technical Write Off ಮಾಡಲು ತೀರ್ಮಾನಿಸಿ, ಸಂಬಂಧಿಸಿದ ಸಾಲ ಮೊಬಲಗನ್ನು ಪುಸ್ತಕಗಳಿಂದ ತೆಗೆದುಹಾಕಲಾಗಿದೆ. ಸಂಸ್ಥೆಯು ಈ ಸಾಲಗಳನ್ನು Technical Write Off ಮಾಡಿರುವ ಕಾರಣ ಸಾಲಗಾರರು ಸಾಲ ಪಾವತಿಸಬೇಕಾದ ಜವಾಬ್ದಾರಿಯು ಮುಂದುವರೆದಿದ್ದು, ಈ ಸಾಲಗಳನ್ನು ವಸೂಲಿ ಮಾಡಲು ಕ್ರಮ ಕೋರಿದೆ. ಬ್ಯಾಂಕು ಸಾಲಗಾರರ ವಿರುದ್ಧ ದಾವಾ ಕ್ರಮ ಜರುಗಿಸಿ ಡಿಕ್ರಿ ಪಡೆದಿದ್ದು, ಅಮುಲ್ಜಾರಿ ಕ್ರಮ ಅನುಸರಿಸಿ ಸಾಲ ವಸೂಲಿ ಮಾಡಬೇಕಿದೆ. ಅಂತೆಯೇ ಸದರಿಯವರ ಮೇಲೆ ಹೂಡಿರುವ ಕ್ರಿಮಿನಲ್ ಮೊಕದ್ದಮೆಯು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ ಎಂದು ತಿಳಿಸಲಾಗಿದೆ.

ಪ್ರಧಾನ ಕಛೇರಿ ಮತ್ತು ಶಾಖೆಗಳಲ್ಲಿ ಪ್ರತಿ ಖಾತೆದಾರರಿಗೆ ಸಂಬಂಧಿಸಿದ ಆಭರಣಗಳ ವಿವರಗಳುಳ್ಳ ಸ್ಟಾಕ್ ಪುಸ್ತಕಗಳನ್ನು ಬರೆದಿಟ್ಟಿರುತ್ತಾರೆ. ಈ ಸಾಲಗಳನ್ನು ಮಂಜೂರು ಮಾಡುವಾಗ ಆಧಾರ / ಅಡಮಾನ ಮಾಡಿಕೊಳ್ಳಲಾಗುವ ಆಭರಣಗಳನ್ನು ಪ್ರತಿಯೊಬ್ಬ ಖಾತೆದಾರರಿಗೂ ಪ್ರತ್ಯೇಕವಾದ ಸೀಲ್ ಮಾಡಲಾದ ವಿಶೇಷ ಪ್ಲಾಸ್ಟಿಕ್ ಕವರ್‌ಗಳಲ್ಲಿಟ್ಟು ಸಂಸ್ಥೆಯ ವಶದಲ್ಲಿರುವ ಸುರಕ್ಷಿತವಾದ ತಿಜೋರಿಯಲ್ಲಿಡಲಾಗಿದೆ. ಸದರಿ ತಿಜೋರಿಯು ಬ್ಯಾಂಕಿನ ಶಾಖೆಯ ವ್ಯವಸ್ಥಾಪಕರು ಹಾಗೂ ಸಹಾಯಕ ಲೆಕ್ಕ ಲೇಖಕರು ಇವರುಗಳ ಜಂಟಿ ಜವಾಬ್ದಾರಿಯಲ್ಲಿರುತ್ತದೆ. ಪ್ರಧಾನ ಕಛೇರಿಯಲ್ಲಿ ಹಲವಾರು ವರುಷಗಳಿಂದ ಕ್ಲೇಮು ಮಾಡದಿರುವ ಐದು ಒಡವೆ ಪ್ಯಾಕೇಟ್ ಮತ್ತು ಒಂದು ಬೆಳ್ಳಿ ತಟ್ಟೆ ಇದ್ದು ಒಡವೆ ಸಾಲಗಾರರಿಗೆ ಅಥವಾ ಅವರ ವಾರಸುದಾರರಿಗೆ ಅಂತಹ ಒಡವೆಗಳನ್ನು ಹಿಂದಿರುಗಿಸಲು ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಪ್ರಸಕ್ತ ಸಾಲಿನ ವರ್ಷಾಂತ್ಯಕ್ಕೆ ಸಂಸ್ಥೆಯಿಂದ ಚಿನ್ನದ ಆಭರಣಗಳ ಮೇಲೆ ಸಾಲಕ್ಕೆ ಸಂಬಂಧಿಸಿದಂತೆ ಒತ್ತೆ ಇರಿಸಿಕೊಳ್ಳಲಾಗಿರುವ ಚಿನ್ನಾಭರಣಗಳನ್ನು ಸಂಬಂಧಪಟ್ಟ ಶಾಖೆಯ ಶಾಖಾ ವ್ಯವಸ್ಥಾಪಕರ ಸಮ್ಮುಖದಲ್ಲಿ ಆಂತರಿಕ ಲೆಕ್ಕ ಪರಿಶೋಧಕರು ಭೌತಿಕವಾಗಿ ಪರಿಶೀಲಿಸಿ ಸರಿ ಇರುವಿಕೆಯ ಬಗ್ಗೆ ದೃಢೀಕರಿಸಿರುವುದನ್ನು ಗಮನಿಸಿದೆ.

ಸಂಸ್ಥೆಯು ಚಿನ್ನಾಭರಣ ಆಧಾರ ಸಾಲಗಳಿಗೆ ಸಂಬಂಧಿಸಿದಂತೆ ಒತ್ತೆಯಿರುವ ಚಿನ್ನಾಭರಣಗಳನ್ನು ಎರಡನೇ ಒಡವೆ ಮೌಲ್ಯಮಾಪಕರಿಂದ ಆಗಿಂದಾಗ್ಗೆ ಮೌಲ್ಯಮಾಪನ ಪಡೆಯಲು ಕ್ರಮ ಸೂಚಿಸಿದೆ.

ಸಮಾಧಾನ : ಸುಸ್ತಿ ಸಾಲಗಳ ಮತ್ತು "Technical Write off" ಆದ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

ಇ) **ವಾಹನಗಳ ಆಧಾರಿತ ಸಾಲ :**

ವಾಹನ ಬೆಲೆಯ ಶೇಕಡ 70 ರಷ್ಟು ಮೊಬಲಗನ್ನು ಸಂಸ್ಥೆಯು ತನ್ನ ಸದಸ್ಯರುಗಳಿಗೆ ದ್ವಿಚಕ್ರ ವಾಹನಗಳನ್ನು ಕೊಳ್ಳುವ ಸಲುವಾಗಿ ಸಾಲವನ್ನು ನೀಡುತ್ತಿದ್ದು, ಈ ರೀತಿ ಸಾಲದ ಮುಖಾಂತರ ಪಡೆದುಕೊಂಡ ವಾಹನವನ್ನು ಬ್ಯಾಂಕಿಗೆ ಹೈಪಾಥಿಕೇಷನ್ (ಆಧಾರ) ಮಾಡಿಕೊಳ್ಳಲಾಗಿರುವುದು ಕಂಡು ಬರುತ್ತದೆ. ದಿನಾಂಕ: 31.03.2025 ರ ಅಂತ್ಯಕ್ಕೆ 9 ಸದಸ್ಯರುಗಳಿಂದ ವಾಹನ ಸಾಲದ ಬಾಬ್ತು ರೂ. 13.93,800.00 ಗಳು ಬಾಕಿ ಬರಬೇಕಾಗಿದ್ದು, ಈ ಬಗ್ಗೆ ಸಾಲಾಂತ್ಯಕ್ಕೆ ತಯಾರಿಸಿರುವ ಕುಳುವಾರು ಬಾಕಿ ಪಟ್ಟಿಯ ಮೊಬಲಗಿನೊಂದಿಗೆ ತಾಳೆಯಿರುತ್ತದೆ. ವರದಿ ಸಾಲಾಂತ್ಯದಲ್ಲಿ ವಾಹನ ಸಾಲಗಳಲ್ಲಿ ಸುಸ್ತಿ ಇರುವುದಿಲ್ಲ.

ವಾಹನ ಸಾಲಗಳ ಕಡತಗಳಲ್ಲಿ ವಾಹನದ ದಾಖಲೆಗಳು, ಡೂಪ್ಲಿಕೇಟ್ ಕೀ ಮತ್ತು ವಿಮೆ ಇತ್ಯಾದಿಗಳನ್ನು ಪಡೆದು ಕಡತದಲ್ಲಿರಿಸಲು ಮತ್ತು ಕನಿಷ್ಠ ವರ್ಷಕ್ಕೊಮ್ಮೆ ಆಧಾರವಾದ ವಾಹನವನ್ನು ಭೌತಿಕವಾಗಿ ಪರಿಶೀಲನೆ ದಾಖಲಿಸಲು ಕ್ರಮ ಕೋರಿದೆ.

ಸಮಾಧಾನ : ಕ್ರಮವಹಿಸಿದೆ.

ಈ) ಜಾಮೀನು ಸಾಲ:

19 ಸದಸ್ಯರುಗಳಿಂದ ಒಟ್ಟು ರೂ.15,28,576.00 ಗಳ ಜಾಮೀನು ಸಾಲ ಸಂಸ್ಥೆಗೆ ಪ್ರಸ್ತಕ ಸಾಲಿನ ಅಂತ್ಯಕ್ಕೆ ವಸೂಲಾಗಬೇಕಾಗಿದ್ದು, ಸಂಸ್ಥೆಯಲ್ಲಿ ಸಾಲಾಂತ್ಯಕ್ಕೆ ತಯಾರಿಸಿರುವ ಕುಳುವಾರು ಪಟ್ಟಿಯ ಮೊಬಲಗಿನೊಂದಿಗೆ ತಾಳೆಯಿರುತ್ತದೆ. ಈ ಸಾಲದ ಖಾತೆಗಳಲ್ಲಿ ಸುಮಾರು 13 ಖಾತೆಗಳಲ್ಲಿ ರೂ. 7,09,522.00 ಗಳು ಸುಸ್ತಿಯಾಗಿದ್ದು, ವರದಿಯ ಸಾಲಿನ ಅಂತ್ಯಕ್ಕೆ ಬಾಕಿಯಿರುವ ಮೊಬಲಗಿನೊಂದಿಗೆ ಹೋಲಿಸಿದಾಗ ಸುಸ್ತಿಯ ಪ್ರಮಾಣ ಶೇಕಡ 46.42 ರಷ್ಟಾಗುತ್ತದೆ. ಸದರಿ ಸಾಲಗಾರರು ತನ್ನ ಸಾಲದ ಕಂತುಗಳೇನಾದರೂ ಪಾವತಿಸದೇ ಬಾಕಿಯಾದಲ್ಲಿ ತಾನು ಕಾರ್ಯ ನಿರ್ವಹಿಸುವ ಸಂಸ್ಥೆಗೆ ಅಥವಾ ನೌಕರದಾತರಿಗೆ ಸಂಸ್ಥೆಯವರು ತಿಳಿಯಪಡಿಸಿದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 34 ರ ಮೇರೆಗೆ ನೌಕರರ ಮಾಸಿಕ ಸಂಬಳದಲ್ಲಿ ಬ್ಯಾಂಕಿಗೆ ಬಾಕಿ ಇರುವ ಮೊಬಲಗನ್ನು ಕಡಿತಗೊಳಿಸಿ ಸದರಿಯವರ ಸಾಲದ ಲೆಕ್ಕಕ್ಕೆ ಸಂಸ್ಥೆಗೆ ಜಮಾ ಮಾಡಲು ಒಪ್ಪಿರುತ್ತೇನೆಂದು ಒಪ್ಪಿಗೆ ಸೂಚಿಸುವ ಅಂಶವನ್ನು ನಮೂದಿಸಿ ಬರೆದ ಒಪ್ಪಂದ ಪತ್ರವನ್ನು ಸಾಲ ಮಂಜೂರು ಮಾಡುವ ಅರ್ಜಿಯೊಂದಿಗೆ ಪಡೆದುಕೊಳ್ಳಲಾಗುತ್ತಿದೆ. ಸದರೀ ನೌಕರರು ಸಂಬಳ ವಿತರಣಾಧಿಕಾರಿಯವರಿಂದ ಪಡೆದುಕೊಂಡಿರುವ ಒಪ್ಪಿಗೆ ಪತ್ರವನ್ನು ಸಾಲ ಮಂಜೂರು ಮಾಡುವ ಅರ್ಜಿಯೊಂದಿಗೆ ಸಂಸ್ಥೆಯವರು ಪಡೆದಿರುವುದು ಸಾಲ ಪತ್ರಗಳ ಕಡತಗಳಲ್ಲಿ ಕಂಡು ಬರುತ್ತದೆ.

ವರದಿ ಸಾಲಿನಲ್ಲಿ ಬಹು ವರ್ಷಗಳಿಂದ ಸುಸ್ತಿಯಾಗಿ ಮುಂದುವರೆದಿದ್ದ ವೇತನದಾರರಿಗೆ ನೀಡಿದ್ದ ಜಾಮೀನು ಸಾಲಗಳ ಪೈಕಿ ಸಾಲಗಾರರು / ಜಾಮೀನುದಾರರು ಪತ್ತೆಯಾಗದಿರುವುದು, ಸಾಲಗಾರರು / ಜಾಮೀನುದಾರರು ಕೆಲಸ ಮಾಡುತ್ತಿದ್ದ ಸಂಸ್ಥೆಯು ಮುಚ್ಚಿ ಹೋಗಿರುವುದು ಇತ್ಯಾದಿ ಕಾರಣಗಳಿಂದಾಗಿ 68 ಪ್ರಕರಣಗಳಲ್ಲಿ ರೂ. 19,40,245.00 ಜಾಮೀನು ಸಾಲದ ಅಸಲು ಮೊಬಲಗನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ Technical Writeoff ಮಾಡಲು ತೀರ್ಮಾನಿಸಿ ಪುಸ್ತಕದಿಂದ ತೆಗೆದುಹಾಕಿದೆ. ಸಂಸ್ಥೆಯು ಸದರಿ ಸಾಲಗಳನ್ನು Technical Writeoff ಮಾಡಿದ್ದು, ಸಾಲಗಾರರು ಸಾಲ ಪಾವತಿಸಬೇಕಾದ ಜವಾಬ್ದಾರಿ ಮುಂದುವರೆದಿರುತ್ತದೆ.

ಸಂಸ್ಥೆಯವರು ಸುಸ್ತಿಯಾಗಿರುವ ಜಾಮೀನು ಸಾಲಗಳ ಮತ್ತು Technical Writeoff ಆದ ಜಾಮೀನು ಸಾಲಗಳ ವಸೂಲಾತಿಗೆ ಅವಶ್ಯಕ ಕಾನೂನು ಕ್ರಮ ಜರುಗಿಸಲು ತಿಳಿಸಿದೆ.

ಸಮಾಧಾನ : ಸುಸ್ತಿ ಸಾಲಗಳ ಮತ್ತು "Technical Write off" ಆದ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

ಉ) ವ್ಯಾಪಾರಸ್ಥರಿಗೆ ಸಾಲ :

ಸಂಸ್ಥೆಯು ಸದಸ್ಯರುಗಳಿಗೆ ತಮ್ಮ ಆರ್ಥಿಕ ಮಟ್ಟವನ್ನು ವೃದ್ಧಿಪಡಿಸಿಕೊಳ್ಳುವ ಉದ್ದೇಶಕ್ಕಾಗಿ ವ್ಯಾಪಾರಸ್ಥರಿಗೆ ವ್ಯಾಪಾರಾಭಿವೃದ್ಧಿಯ ಅನುಕೂಲಕ್ಕಾಗಿ ಬ್ಯಾಂಕಿನವರು ಸ್ಥಿರಾಸ್ತಿ ಸಾಲ ಪಡೆದ ಸದಸ್ಯರೊಬ್ಬರ ಜಾಮೀನು ಪಡೆದು, ಗರಿಷ್ಠ ರೂ. 2.00 ಲಕ್ಷಗಳ ಸಾಲ ಮಂಜೂರು ಮಾಡುತ್ತಿದ್ದು ಸಾಲಾಂತ್ಯಕ್ಕೆ ಇಂತಹ 396 ಸದಸ್ಯರುಗಳಿಂದ ರೂ. 5,40,44,673.64 ಗಳು ಸಂಸ್ಥೆಗೆ ವಸೂಲಾಗಬೇಕಾಗಿರುತ್ತದೆ. ಈ ಸಾಲದ ಬಗ್ಗೆ ಕುಳುವಾರು ಬಾಕಿ ಪಟ್ಟಿಯನ್ನು ತಯಾರಿಸಿ ಪರಿಶೀಲನೆಗೆ ಹಾಜರುಪಡಿಸಿದ್ದು ಸದರಿ ಮೊಬಲಗು ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಯ ಮೊಬಲಗಿನೊಂದಿಗೆ ತಾಳೆಯಿರುತ್ತದೆ.

ಈ ಸಾಲಗಳ ಪೈಕಿ ಸುಮಾರು 173 ಜನ ಸದಸ್ಯರು ಸುಸ್ತಿದಾರರಾಗಿದ್ದು ಸದರಿಯವರಿಂದ ಒಟ್ಟು ರೂ. 1,84,77,343.00 ಗಳು ಸುಸ್ತಿಯಾಗಿದ್ದು, ವರದಿಯ ಸಾಲಿನ ಅಂತ್ಯಕ್ಕೆ ಬಾಕಿಯಿರುವ ಮೊಬಲಗಿನೊಂದಿಗೆ ಹೋಲಿಸಿದಾಗ ಸುಸ್ತಿಯ ಪ್ರಮಾಣ ಶೇಕಡ 34.19 ರಷ್ಟಾಗುತ್ತದೆ.

ವರದಿ ಸಾಲಿನಲ್ಲಿ ಬಹುವರ್ಷಗಳಿಂದ ಸುಸ್ತಿಯಾಗಿ ಮುಂದುವರೆದಿದ್ದ ವ್ಯಾಪಾರ ಸಾಲಗಳ ಪೈಕಿ ಒಂದು ಪ್ರಕರಣದಲ್ಲಿ ರೂ.47,906.00 ಗಳ ವ್ಯಾಪಾರ ಸಾಲವನ್ನು ಸಾಲಗಾರರು / ಜಾಮೀನುದಾರರು ಪತ್ತೆಯಾಗದಿರುವ ಕಾರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ Technical Writeoff ಮಾಡಲು ತೀರ್ಮಾನಿಸಿ ಪುಸ್ತಕದಿಂದ ತೆಗೆದುಹಾಕಿದೆ. ಸಂಸ್ಥೆಯು ಸದರಿ ಸಾಲವನ್ನು Technical Writeoff ಮಾಡಿದ್ದು, ಸಾಲಗಾರರು ಸಾಲ ಪಾವತಿಸಬೇಕಾದ ಜವಾಬ್ದಾರಿ ಮುಂದುವರೆದಿರುತ್ತದೆ.

ಪ್ರಧಾನ ವ್ಯವಸ್ಥಾಪಕರು ಹಾಗೂ ಕಾರ್ಯಕಾರಿ ಸಮಿತಿಯವರು ಇಂತಹ ಸುಸ್ತಿಯಾಗಿರುವ ಸಾಲಗಳ ಮತ್ತು

Technical Writeoff ಆದ ಸಾಲಗಳ ವಸೂಲಿ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಕುರಿತು ಅವಶ್ಯಕ ಕ್ರಮ ಅನುಸರಿಸುವುದು.

ಸಮಾಧಾನ : ಸುಸ್ತಿ ಸಾಲಗಳ ಮತ್ತು "Technical Write off" ಆದ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

ಖ) ಸ್ಥಿರಾಸ್ತಿಗಳ ಆಧಾರದ ಸಾಲ (ದೀರ್ಘಾವಧಿ) :

ದಿನಾಂಕ: 31.03.2025 ಕ್ಕೆ 7091 ಸದಸ್ಯರ ಖಾತೆಗಳಿಂದ ರೂ. 1191,06,79,142.08 ಗಳ ಸ್ಥಿರಾಸ್ತಿ ಸಾಲ ಬಾಕಿ ಇರುತ್ತದೆ. ಈ ಸಾಲದ ಬಗ್ಗೆ ಕುಳುವಾರು ಬಾಕಿ ಪಟ್ಟಿಯನ್ನು ತಯಾರಿಸಿ ಪರಿಶೀಲನೆಗೆ ಹಾಜರುಪಡಿಸಿದ್ದು, ಆಸ್ತಿ ಜವಾಬ್ದಾರಿ ತ:ಖ್ತೆಯ ಮೇಲ್ಕಾಣಿಸಿದ ಮೊತ್ತಕ್ಕೆ ತಾಳೆಯಿರುತ್ತದೆ. ಸ್ಥಿರಾಸ್ತಿಯ ಭದ್ರತೆಯ ಅಧಾರದ ಮೇಲೆ ಈ ಸಾಲಗಳನ್ನು ಬ್ಯಾಂಕಿನವರು ನೀಡುತ್ತಿದ್ದು, ಈ ಸಾಲಗಳ ಭದ್ರತೆಗೆ ಪಡೆಯುವ ಸ್ಥಿರ ಆಸ್ತಿಯ ಮೌಲ್ಯಮಾಪನಗಳನ್ನು ಮಾಡಲು ಸಂಸ್ಥೆಯವರು ಸಿವಿಲ್ ಇಂಜೀನಿಯರ್‌ಗಳನ್ನು ಮೌಲ್ಯಮಾಪಕರನ್ನಾಗಿ ನೇಮಿಸಿಕೊಂಡಿದ್ದು, ಸ್ಥಿರಾಸ್ತಿ ಮೌಲ್ಯಮಾಪನಗಳನ್ನು ಮೌಲ್ಯಮಾಪಕರು ಪರಿಶೀಲಿಸಿ ವರದಿ ಮಾಡುತ್ತಿದ್ದಾರೆ.

ಸ್ಥಿರಾಸ್ತಿಯ ಆಧಾರದ ಮೇಲೆ ಸಾಲ ನೀಡುವಾಗ ಸಾಲದ ಅರ್ಜಿಯೊಂದಿಗೆ ಆಸ್ತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ಸಂಬಂಧಿಸಿದ ಸದಸ್ಯರಿಂದ ಪಡೆದು ಬ್ಯಾಂಕಿನವರು ನೇಮಿಸಿಕೊಂಡಿರುವ ಕಾನೂನು ಸಲಹೆಗಾರರಿಂದ (Legal Advisor) ಸದರಿ ದಾಖಲೆಗಳ ಪರಿಶೀಲನೆಯ ನಂತರ ಸದರಿಯವರ ಅಭಿಪ್ರಾಯದ ಮೇರೆಗೆ ಸಾಲ ಮಂಜೂರಾತಿಯ ಬಗ್ಗೆ ಪರಿಗಣಿಸಲಾಗುತ್ತಿದೆ. ಸದರಿ ಆಸ್ತಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ.

ಬ್ಯಾಂಕಿನ ಉಪನಿಯಮ ಸಂಖ್ಯೆ: 84 ರ ಪ್ರಕಾರ ಬ್ಯಾಂಕಿಗೆ ಆಧಾರ ಮಾಡಿಕೊಟ್ಟ ಸ್ಥಿರಾಸ್ತಿಯ ಬಗ್ಗೆ ಎಲ್ಲಾ ಸಾಲಗಾರರಿಂದ ಸಾಲ ತೀರುವ ಅವಧಿಯವರೆಗೆ ವಿಮೆಯನ್ನು ಮಾಡಿಸಿರುವುದಿಲ್ಲ. ಬ್ಯಾಂಕಿನ ಆಡಳಿತವು ರೂ. 25.00 ಲಕ್ಷಗಳಿಗೂ ಮೀರಿದ ಸ್ಥಿರಾಸ್ತಿ ಸಾಲಗಳಿಗೆ ಸಂಬಂಧಿಸಿದಂತೆ ಕಟ್ಟಡ ವಿಮೆ ಕಡ್ಡಾಯಗೊಳಿಸಿದ್ದು ಅದರಂತೆ ಎಲ್ಲಾ ಪ್ರಕರಣಗಳಲ್ಲಿ ಸ್ಥಿರಾಸ್ತಿಯನ್ನು ವಿಮೆಗೆ ಒಳಪಡಿಸಲು ಸೂಚಿಸಿದೆ. ಹಾಗೆಯೇ ಸಾಲಕ್ಕೆ ಆಧಾರ ಮಾಡಿಕೊಟ್ಟಿರುವ ಆಸ್ತಿಗೆ ಸಂಬಂಧಿಸಿದ ತೆರಿಗೆ ಇತ್ಯಾದಿ ಪಾವತಿಯಾಗಿದೆಯೇ ಇಲ್ಲವೇ ಎಂಬುದನ್ನು ದೃಢೀಕರಿಸಿಕೊಳ್ಳಲು ಸದಸ್ಯರುಗಳಿಗೆ ಆಯಾ ವರ್ಷದ ಕಂದಾಯ ರಸೀತಿಗಳನ್ನು ಹಾಜರು ಪಡಿಸಲು ಕೋರಿದಾಗ್ಯೂ ಅದರಂತೆ ಕಾರ್ಯವಾಗಿರುವುದಿಲ್ಲ.

ವರದಿ ಸಾಲಿನಲ್ಲಿ ಸಂಸ್ಥೆಯ ಇಂದಿರಾನಗರ ಶಾಖೆಯಲ್ಲಿ ಮುಂದುವರೆದಿದ್ದ ಶ್ರೀ. ಎಸ್.ಕರುಣಾಕರ್ ರವರ ಸ್ಥಿರಾಸ್ತಿ ಆಧಾರ ಸಾಲವನ್ನು ಬ್ಯಾಂಕಿಗೆ ಆಧಾರವಾಗಿದ್ದ ಸ್ಥಿರಾಸ್ತಿಯು ಕೆರೆ ಅಂಗಳಕ್ಕೆ ಸೇರಿದೆ ಎಂದು ಬಿಡಿಎ ರವರು ವಶಕ್ಕೆ ಪಡೆದು ಅದರಲ್ಲಿದ್ದ ಕಟ್ಟಡವನ್ನು ನೆಲಸಮಗೊಳಿಸಿದ ಕಾರಣಕ್ಕೆ ಅನುತ್ಪಾದಕ ಸಾಲಗಳ ನಿರ್ವಹಣೆ ದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಒಟ್ಟು ಸಾಲ ರೂ.66,47,699.00 ಗಳನ್ನು Technical Writeoff ಮಾಡಲು ತೀರ್ಮಾನಿಸಿ ಪುಸ್ತಕಗಳಿಂದ ತೆಗೆದುಹಾಕಿದೆ. ಸಂಸ್ಥೆಯು ಸದರಿ ಸಾಲವನ್ನು Technical Writeoff ಮಾಡಲು ತೀರ್ಮಾನಿಸಿದ್ದು, ಸಾಲಗಾರರು ಸಾಲ ಪಾವತಿಸಬೇಕಾದ ಜವಾಬ್ದಾರಿ ಮುಂದುವರೆದಿರುತ್ತದೆ.

ಸ್ಥಿರಾಸ್ತಿ ಸಾಲ ಪಡೆದಿರುವ ಸದಸ್ಯರುಗಳಲ್ಲಿ 492 ಸದಸ್ಯರು ಸುಸ್ತಿದಾರರಾಗಿದ್ದು, ಸದರಿಯವರಿಂದ ಒಟ್ಟು ರೂ. 14,59,78,267.00 ಗಳು ಸುಸ್ತಿಯಲ್ಲಿರುತ್ತದೆ. ಬಾಕಿ ನಿಂತಿರುವ ಮೊಬಲಗಿನೊಂದಿಗೆ ಈ ಸುಸ್ತಿ ಮೊಬಲಗನ್ನು ಹೋಲಿಸಿದಾಗ ಸುಸ್ತಿ ಪ್ರಮಾಣ ಶೇಕಡ 1.23 ರಷ್ಟು ಆಗಿರುತ್ತದೆ. ಈ ಸುಸ್ತಿ ಸಾಲಗಳ ಮತ್ತು Technical Writeoff ಆದ ಸಾಲಗಳ ವಸೂಲಾತಿಗೆ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಹಾಗೂ ಕಾರ್ಯಕಾರಿ ಸಮಿತಿಯವರು ಹೆಚ್ಚಿನ ಆಸಕ್ತಿ ವಹಿಸಬೇಕಾಗಿರುತ್ತದೆ.

ಸಮಾಧಾನ : ಸುಸ್ತಿ ಸಾಲಗಳ ಮತ್ತು "Technical Write off" ಆದ ಸಾಲಗಳ ವಸೂಲಾತಿಗೆ ಕ್ರಮ ಮುಂದುವರೆಸಿದೆ.

ಹಿಂದಿನ ಸಾಲುಗಳಿಂದಲೂ ನ್ಯೂನತೆ ಇರುವ ಸ್ಥಿರಾಸ್ತಿ ಸಾಲದ ಪ್ರಕರಣಗಳು ಕೆಳಕಂಡಂತಿದ್ದು, ಈ ಸಾಲಗಳ ವಸೂಲಾತಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ :

ಅ) ಸಂಸ್ಥೆಯ ಇಂದಿರಾನಗರ ಶಾಖೆಯಲ್ಲಿ ದಿನಾಂಕ 05.07.2001 ರಂದು ಶ್ರೀ ಎಂ. ಆರ್. ಜರ್ನಾಧನ್ LTL-5450 (ಸದಸ್ಯತ್ವ ಸಂಖ್ಯೆ R-27589) ರವರಿಗೆ ಸ್ಥಿರಾಸ್ತಿ ಸಂಖ್ಯೆ 1ಬಿ. ನಾರಾಯಣಪುರ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು ಈ ಸ್ಥಿರಾಸ್ತಿಯ ಆಧಾರದ ಮೇಲೆ ರೂ. 5,00,000.00 ಗಳ ಸ್ಥಿರಾಸ್ತಿ ಸಾಲ ನೀಡಿದ್ದು ಪ್ರಸಕ್ತ ಸಾಲಿನ

ವರ್ಷಾಂತ್ಯಕ್ಕೆ ಅಸಲು ರೂ.1,19,180.00 ಬಾಕಿ ಇರುತ್ತದೆ. ವರದಿ ಸಾಲಿನಲ್ಲಿ ಸಾಲಗಾರರು ರೂ. 4,43,425.00 ಗಳನ್ನು ಪಾವತಿಸಿರುವುದು ಕಂಡು ಬಂದಿದೆ. ಸಂಸ್ಥೆಯವರು ಸದರಿ ಸಾಲಗಾರರಿಂದ ಸಾಲ ಪೂರ್ತಿ ವಸೂಲಿ ಮಾಡಲು ಅಥವಾ ಕಾನೂನು ಕ್ರಮ ಅನುಸರಿಸಿ ಸ್ಥಿರಾಸ್ತಿಯನ್ನು ಮಾರಾಟ ಮಾಡಿ ಬಾಕಿ ವಸೂಲಿ ಮಾಡಲು ಸೂಚಿಸಿದೆ. ಹಿಂದಿನ ವರದಿಯಲ್ಲಿ ತಿಳಿಸಿರುವಂತೆ ಸದರಿ ಸ್ಥಿರಾಸ್ತಿಯ ಆಧಾರದ ಮೇಲೆ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ರವರು ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕು ಸಹ ಸಾಲ ನೀಡಿದ್ದು ತದನಂತರದಲ್ಲಿ ಸದರಿ ಸಾಲಗಳು ತೀರುವಳಿಯಾಗಿರುವುದಾಗಿಯೂ ತಿಳಿದು ಬಂದಿದೆ. ಈ ಅಂಶಗಳನ್ನು ಗಮನಿಸಿ ಬಾಕಿ ಉಳಿದಿರುವ ಮೊಬಲಗನ್ನು ಸ್ವೀಕರಿಸಲು ತ್ವರಿತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಸಮಾಧಾನ : ಕ್ರಮವಹಿಸಿದೆ.

ಎ) ಸರಕು ಸಾಗಾಣಿಕೆ ವಾಹನಗಳ ಖರೀದಿಗಾಗಿ ಸಾಲ :

ವರದಿಯ ಸಾಲಾಖೈರಿಗೆ ಸಾಗಾಣಿಕೆ ವಾಹನಗಳನ್ನು ಖರೀದಿಸುವ ಸಲುವಾಗಿ ನೀಡಿದ ಸಾಲದ ಬಾಬ್ತು 11 ಸದಸ್ಯರುಗಳಿಂದ ರೂ. 60,14,804.00 ಗಳು ಸಂಸ್ಥೆಗೆ ಬರಬೇಕಾಗಿರುತ್ತದೆ.

ಸಾಗಾಣಿಕೆ ವಾಹನಗಳ ಖರೀದಿಗಾಗಿ ಸಾಲ ಪಡೆದಿರುವ ಸದಸ್ಯರುಗಳಲ್ಲಿ 4 ಸದಸ್ಯರು ಸುಸ್ತಿದಾರರಾಗಿದ್ದು ಸದರಿಯವರಿಂದ ಒಟ್ಟು ರೂ.29,40,765.00 ಗಳು ಸುಸ್ತಿಯಾಗಿರುತ್ತದೆ. ಸಾಲಾಂತ್ಯಕ್ಕೆ ಈ ಸಾಲದ ಖಾತೆಯಲ್ಲಿ ಬಾಕಿಯಾಗಿರುವ ಮೊಬಲಗಿನೊಂದಿಗೆ ಈ ಸುಸ್ತಿ ಮೊಬಲಗನ್ನು ಹೋಲಿಸಿದಾಗ ಸುಸ್ತಿ ಪ್ರಮಾಣ ಶೇಕಡ 48.89 ರಷ್ಟು ಆಗಿರುತ್ತದೆ. ಈ ಸುಸ್ತಿ ಸಾಲಗಳ ವಸೂಲಾತಿಗಾಗಿ ಸೂಕ್ತ ಕ್ರಮ ಕೈಗೊಳ್ಳುವ ಕುರಿತು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಹಾಗೂ ಆಡಳಿತ ಮಂಡಳಿಯವರು ಅವಶ್ಯಕ ಕ್ರಮ ಅನುಸರಿಸುವ ಬಗ್ಗೆ ಗಮನಹರಿಸುವುದು ಅವಶ್ಯಕವಾಗಿರುತ್ತದೆ.

ಈ ಸಾಲಗಳಿಗೆ ಆಧಾರವಾಗಿರುವ ವಾಹನಗಳ ವಾಹನ ದಾಖಲೆಗಳನ್ನು ವಿಮೆಯೊಂದಿಗೆ ಪಡೆದು ಕಡತದಲ್ಲಿರಿಸಲು ಮತ್ತು ಕನಿಷ್ಠ ಆರು ತಿಂಗಳಿಗೊಮ್ಮೆ ಆಧಾರ ಮಾಡಿದ ವಾಹನವನ್ನು ಭೌತಿಕವಾಗಿ ಪರಿಶೀಲಿಸಿ ದಾಖಲಿಸಲು ಕ್ರಮ ಸೂಚಿಸಿದೆ.

ಏ) ಓವರ್ ಡ್ರಾಫ್ಟ್ ಸಾಲಗಳು :

ದಿನಾಂಕ 31.03.2025 ರ ಅಂತ್ಯಕ್ಕೆ ಚಾಲ್ತಿ ಖಾತೆಯನ್ನು ಹೊಂದಿರುವ 140 ಜನ ಠೇವಣಿ ದಾರರಿಂದ ಠೇವಣಿ ಆಧಾರ ಓವರ್ ಡ್ರಾಫ್ಟ್ ಲೆಕ್ಕದ ಬಾಬ್ತು ರೂ.7,63,51,254.82 ಗಳು ಸಂಸ್ಥೆಗೆ ವಸೂಲಾಗ ಬೇಕಾಗಿರುತ್ತದೆ. ಈ ಸಾಲವನ್ನು ಠೇವಣಿದಾರರು ಹೊಂದಿರುವ ಅವಧಿ ಠೇವಣಿಗಳ ಆಧಾರದ ಮೇಲೆ ಮಂಜೂರು ಮಾಡಲಾಗಿದೆ.

ದಿನಾಂಕ : 31.03.2025 ರ ಅಂತ್ಯಕ್ಕೆ 109 ಜನ ಸದಸ್ಯರುಗಳಿಗೆ ವ್ಯಾಪಾರ ಉದ್ದೇಶ ರೂ. 41,74,09,867.37 ಗಳ ಸ್ಥಿರಾಸ್ತಿ ಆಧಾರ ಕ್ಯಾಷ್ ಕ್ರೆಡಿಟ್ ಮತ್ತು ಓವರ್ ಡ್ರಾಫ್ಟ್ ಸೌಲಭ್ಯವನ್ನು ನೀಡಿದೆ. ಈ ಸಾಲಗಳ ಪೈಕಿ 7 ಪ್ರಕರಣಗಳಲ್ಲಿ ರೂ. 4,70,55,713.00 ಗಳು ಸುಸ್ತಿಯಾಗಿರುವುದು ಕಂಡು ಬಂದಿದ್ದು ಇವುಗಳ ವಸೂಲಾತಿಗೆ ಕ್ರಮ ಸೂಚಿಸಿದೆ.

ಸಮಾಧಾನ : ಕ್ರಮವಹಿಸಿದೆ.

ಬ್ಯಾಂಕಿನ ಉಪನಿಯಮ ಸಂಖ್ಯೆ: 68 ರ ಪ್ರಕಾರ ಸಂಸ್ಥೆಯವರು ಸಂಬಂಧಿಸಿದ ಸದಸ್ಯರುಗಳಿಂದ ಸೂಕ್ತ ಆಧಾರವನ್ನು ಸಂಸ್ಥೆಗೆ ಪಡೆದುಕೊಂಡು ಕ್ಯಾಷ್ ಕ್ರೆಡಿಟ್ ಮತ್ತು ಓವರ್ ಡ್ರಾಫ್ಟ್ ಸೌಲಭ್ಯಗಳನ್ನು ಒದಗಿಸಲು ಅವಕಾಶವಿರುತ್ತದೆ.

ಐ) NSC/IVP/LIC ಆಧಾರ ಸಾಲ :

ಸಂಸ್ಥೆಯವರು NSC/IVP/LIC ಗಳನ್ನು ಬ್ಯಾಂಕಿನ ಪರವಾಗಿ Lien ಆಧಾರ ಪಡೆದು ಸಾಲ ನೀಡುವ ನೀತಿಯನ್ನು ಅಳವಡಿಸಿಕೊಂಡಿದ್ದು 2024–25 ರ ಸಾಲಾಂತ್ಯಕ್ಕೆ ಒಂದು ಪ್ರಕರಣದಲ್ಲಿ ರೂ. 27,000/– ಗಳ ಸಾಲ ಮುಂದುವರೆದಿದೆ.

ಒ) ಸಿಬ್ಬಂದಿಯವರ ಸಾಲಗಳು ಮತ್ತು ಮುಂಗಡಗಳು :

ಬ್ಯಾಂಕಿನ ಸಿಬ್ಬಂದಿ ವರ್ಗದವರಿಂದ ಈ ಕೆಳಗೆ ವಿವರಿಸಿರುವಂತೆ ವಿವಿಧ ರೀತಿಯ ಸಾಲ ಮತ್ತು ಮುಂಗಡಗಳ ಬಾಬ್ತು ಒಟ್ಟು ರೂ. 20,54,82,769.00 ಗಳು ಪ್ರಸಕ್ತ ಸಾಲಿನ ಅಂತ್ಯಕ್ಕೆ ಸಂಸ್ಥೆಗೆ ಬರಬೇಕಾಗಿರುತ್ತದೆ.

ಕ್ರ.ಸ.	ಸಾಲದ ವಿವರಗಳು	2024–25 ರಲ್ಲಿ ವಿಧಿಸಿದ ಬಡ್ಡಿ ದರ	ಸಾಲಗಳ ಸಂಖ್ಯೆ	31–03–2025 ಕ್ಕೆ ಬಾಕಿ ಇರುವ ಮೊಬಲಗು
1	ಹಬ್ಬದ ಮುಂಗಡ	–––	52	204000.00
2	ವಾಹನ ಸಾಲ	8.00%	20	5437589.00
3	ವಿಶೇಷ ವೇತನ ಸಾಲ	8.00% ರಿಂದ 10.00%	219	75628260.00
4	ಗೃಹ ನಿರ್ಮಾಣ ಸಾಲ	5.50%	111	121626856.00
5	ಗೃಹೋಪಯೋಗಿ ವಸ್ತು ಖರೀದಿ ಸಾಲ	8.00%	47	2586064.00
	ಒಟ್ಟು		**449**	**20,54,82,769.00**

ಮೇಲ್ಕಾಣಿಸಿದ ಸಿಬ್ಬಂದಿ ಸಾಲ ಮತ್ತು ಮುಂಗಡಗಳಿಗೆ ಸಂಬಂಧಿಸಿದ ಕುಳುವಾರು ಬಾಕಿ ಪಟ್ಟಿಯನ್ನು ತಯಾರಿಸಿ, ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ್ದು, ಸದರಿ ಪಟ್ಟಿಯನ್ನು ಪರಿಶೀಲಿಸಿ ವರದಿಗೆ ಲಗತ್ತಿಸಲಾಗಿದೆ. ಸಂಬಂಧಿಸಿದ ಕುಳುವಾರು ಬಾಕಿ ಪಟ್ಟಿಯ ಮೊಬಲಗುಗಳು ಆಸ್ತಿ ಜವಾಬ್ದಾರಿ ಪಟ್ಟಿಯಲ್ಲಿನ ಮೊಬಲಗುಗಳೊಂದಿಗೆ ತಾಳೆಯಿರುತ್ತದೆ.

ಈ ಸಾಲ ಮತ್ತು ಮುಂಗಡಗಳ ಮಂಜೂರಾತಿಗೆ ಸಿಬ್ಬಂದಿ ಸೇವಾ ಅಧೀನ ನಿಯಮಗಳಲ್ಲಿ (ಸ್ಟಾಫ್ ಸಬ್ಸಿಡಿಯರಿ ರೂಲ್ಸ್) ಉಪನಿಯಮಗಳನ್ನು ರಚಿಸಿಕೊಂಡಿರುತ್ತಾರೆ. ಹಾಲಿ ನಿಯಮಗಳ ಪ್ರಕಾರ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ರೂ. 10,000.00 ಗಳ ಗರಿಷ್ಠ ಅಥವಾ ಮೂಲ ವೇತನ ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತದ ಹಬ್ಬದ ಮುಂಗಡ ಮಂಜೂರು ಮಾಡಲು ಅವಕಾಶವಿರುತ್ತದೆ. ಸಿಬ್ಬಂದಿಯವರಿಗೆ ದ್ವಿ ಚಕ್ರ ವಾಹನ ಖರೀದಿಗಾಗಿ ಮತ್ತು ಮೋಟಾರು ಕಾರು / ಜೀಪುಗಳ ಖರೀದಿಗಾಗಿ ವಾಹನ ಮೌಲ್ಯದ ಶೇಕಡ 75 ರ ಮಿತಿಯೊಳಗೆ ಕ್ರಮವಾಗಿ ರೂ. 1,00,000.00 ಮತ್ತು ರೂ. 10,00,000.00 ಅಥವಾ ಮೂಲ ವೇತನದ 25 ಪಟ್ಟು ಇವುಗಳಲ್ಲಿ ಯಾವುದು ಕಡಿಮೆ ಇರುತ್ತದೋ ಅದನ್ನು, ವಿಶೇಷ ವೇತನ ಸಾಲವಾಗಿ ಗರಿಷ್ಠ ಮಿತಿ ರೂ. 10,00,000.00 ಗಳು ಅಥವಾ ಮೂಲ ವೇತನದ 30 ಪಟ್ಟು ಇದರಲ್ಲಿ ಯಾವುದು ಕಡಿಮೆಯೋ ಅದನ್ನು, ಗೃಹ ಬಳಕೆಯ ವಸ್ತುಗಳ ಖರೀದಿಗಾಗಿ ಗರಿಷ್ಠ ರೂ. 1,00,000–00 ಅಥವಾ ಸಾಮಗ್ರಿಯ ಮೂಲ ಬೆಲೆ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ನಿವೇಶನ / ಗೃಹ ನಿರ್ಮಾಣ / ರಿಪೇರಿ ಮತ್ತು ವಿಸ್ತರಣೆಗಾಗಿ ಸಾಲ ನೀಡಲಾಗುತ್ತಿದ್ದು, ನಿವೇಶನ ಖರೀದಿಗಾಗಿ ರೂ. 25,00,000.00 ಅಥವಾ ನಿವೇಶನದ ಬೆಲೆ ಅಥವಾ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ 48 ಪಾಲು ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು, ಗೃಹ ನಿರ್ಮಾಣ / ಕೊಂಡುಕೊಳ್ಳಲು ಗರಿಷ್ಠ ರೂ. 40,00,000.00 ಗಳು ಅಥವಾ ನಿರ್ಮಾಣದ / ಕೊಂಡುಕೊಳ್ಳುವ ವೆಚ್ಚ ಅಥವಾ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ 75 ಪಾಲು ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು, ಸೇವಾವಧಿಯಲ್ಲಿ ಎರಡು ಬಾರಿ ರಿಪೇರಿ / ಎರಡು ಬಾರಿ ವಿಸ್ತರಣೆಗಾಗಿ ರೂ. 5,00,000.00 ಗಳು ಅಥವಾ ಅಂದಾಜು ಪಟ್ಟಿಯ ವೆಚ್ಚ ಅಥವಾ ಮೂಲ ವೇತನ ಮತ್ತು ತುಟ್ಟಿ ಭತ್ಯೆಯ 48 ಪಾಲು ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಬಹುದಾಗಿದೆ.

ಬ್ಯಾಂಕಿನ ಖಾಯಂ ನೌಕರರು ಮಾತ್ರವೇ ಮೇಲ್ಕಂಡ ಸಾಲ / ಮುಂಗಡಗಳನ್ನು ಪಡೆಯಲು ಅರ್ಹರಾಗಿದ್ದು ಪ್ರತಿ ನೌಕರನು ತನ್ನ ಒಟ್ಟು ವೇತನದ (Gross Salary) ಶೇಕಡ 50 ರಷ್ಟನ್ನು ಪಾವತಿಸಲು ಅವಕಾಶವಿರುವಂತೆ ಮಾತ್ರವೇ ಸಾಲ / ಮುಂಗಡಗಳನ್ನು ಪಡೆಯಲು ಅವಕಾಶವಿರುತ್ತದೆ.

ಮೇಲ್ಕಂಡ ಸಾಲಗಳ ಮೇಲೆ ಕಂತು ಮತ್ತು ಬಡ್ಡಿಯನ್ನು ಆಯಾ ಸಿಬ್ಬಂದಿಯ ಸಂಬಳದಲ್ಲಿ ಕಡಿತಗೊಳಿಸಿ ಜಮಾ ತೆಗೆದುಕೊಳ್ಳಲಾಗುತ್ತಿದೆ. ಸಿಬ್ಬಂದಿ ಅನಧಿಕೃತ ಗೈರು ಹಾಜರಿರುವ ಸಂದರ್ಭದಲ್ಲಿ ಸಾಲ ವಸೂಲಾತಿ ಕ್ರಮ ಕೋರಿದೆ.

ಸಾಲಕ್ಕೆ ಸಂಬಂಧಿಸಿದಂತೆ ಇತರೆ ವಿಷಯಗಳು :

ಬ್ಯಾಂಕಿನ ಬೈಲಾ ಸಂಖ್ಯೆ 81 ರನ್ವಯ ಎಲ್ಲಾ ವಿಧವಾದ ಸಾಲ ಮತ್ತು ಮುಂಗಡಗಳಿಗೆ ಪ್ರತಿ ಮಾಸಿಕದ ಕೊನೆಯಲ್ಲಿ ಬಡ್ಡಿ ವಿಧಿಸಿ ಬಂಡವಾಳೀಕೃತ ಮಾಡಬೇಕಾಗಿದ್ದು, ಸಂಸ್ಥೆಯು ಇಂತಹ ಮೊಬಲಗನ್ನು ಗಣಕೀಕರಣ ವ್ಯವಸ್ಥೆಯಲ್ಲಿ ಬರಬೇಕಾದ ಬಡ್ಡಿ ಎಂದು ಗುರುತಿಸುವ ವ್ಯವಸ್ಥೆ ಅಳವಡಿಸಿಕೊಂಡಿದೆ. ಸಾಲಗಾರರಿಂದ ಹಣ ಸ್ವೀಕರಿಸಿದ ದಿನದಂದು

ಸಾಲದ ಖಾತೆಗೆ ಹಣ ಜಮಾ ಪಡೆದು ಮತ್ತು ಬಡ್ಡಿ ಮೊಬಲಗು ಖರ್ಚು ಹಾಕಿ, ಬಡ್ಡಿ ಜಮಾ ಪಡೆಯಲಾಗುತ್ತಿದೆ.

26) ಸಂಘದ ಸ್ಥಿರಾಸ್ತಿ– ಚರಾಸ್ತಿಗಳ ಪರಿಶೀಲನೆ :

ಸಂಸ್ಥೆಯು ಕೆಳಕಂಡ ನಿವೇಶನ ಹಾಗೂ ಕಟ್ಟಡಗಳನ್ನು ಹೊಂದಿದೆ.

ಎ. ಸ್ಥಿರಾಸ್ತಿ

ನಿವೇಶನ	ವಿವರ	ವಿಸ್ತೀರ್ಣ	ಮೊತ್ತ ರೂ.
1. ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018	ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ ಕಟ್ಟಡ	160'x134'	ರೂ. 57,10,76,436.00 (ಮರುಮೌಲ್ಯಮಾಪನ ಸಂಬಂಧ ರೂ. 56,75,23,125.00 ಒಳಗೊಂಡು)
2. ನಂ. 29, ಎನ್.ಜಿ.ಇ.ಎಫ್ ಕ್ವಾಟ್ರಸ್ ಬಿನ್ನಮಂಗಲ 1ನೇ ಹಂತ, ಇಂದಿರಾನಗರ, ಬೆಂಗಳೂರು–560038	ಇಂದಿರಾನಗರ ಶಾಖೆ ಕಟ್ಟಡ	38'4"x37'9 ½ "	ರೂ. 3,82,88,331.00 (ಮರುಮೌಲ್ಯಮಾಪನ ಸಂಬಂಧ ರೂ.3,57,43,500.00 ಒಳಗೊಂಡು)
3. ನಂ. 445, 14ನೇ ಬ್ಲಾಕ್, ನಾಗರಬಾವಿ ಎರಡನೇ ಘಟ್ಟ, ಬೆಂಗಳೂರು	ಜ್ಞಾನಜ್ಯೋತಿನಗರ ಶಾಖೆಗಾಗಿ ಉದ್ದೇಶಿತ ನಿವೇಶನ	222.30 ಚದರ ಮೀಟರ್	ರೂ. 1,07,99,740.00
4. ನಂ. 1804, ಜೆ.ಸಿ.ಎಸ್.ಟಿ. 'ಕೆ' ಬ್ಲಾಕ್, ಕುವೆಂಪುನಗರ ಬಡಾವಣೆ, ಮೈಸೂರು.	ಮೈಸೂರು ಶಾಖೆಗೆ ಉದ್ದೇಶಿತ ನಿವೇಶನ	323.76 ಚದರ ಮೀಟರ್	ರೂ. 1,12,14,500.00
5. ಪಿ.ಐ.ಡಿ. ನಂ. 40–119–08, ಹೊಸ ಪಿ.ಐ.ಡಿ. ನಂ. 158–W0405–47, 50 ಅಡಿ ರಸ್ತೆ, ಆವಲಹಳ್ಳಿ ಲೇಔಟ್, ಬೆಂಗಳೂರು.	ಆವಲಹಳ್ಳಿ ಶಾಖೆಗೆ ಉದ್ದೇಶಿತ ನಿವೇಶನ	40'x 56'6'+54.6/2	ರೂ. 3,20,05,590.00
		ಒಟ್ಟು	**ರೂ. 66,33,84,600.00**

ಸಂಸ್ಥೆಯು ಶಾಖಾ ವಿಸ್ತರಣೆ ಸಂಬಂಧ ಬಿಡಿಎ ರವರು ಬ್ಯಾಂಕಿಂಗ್ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿರಿಸಿದ್ದ ನಿವೇಶನ ಸಂಖ್ಯೆ ನಂ. 1, ಸರ್ವೆ ನಂ. 73ಪಿ, 74/2, 76/1, 2, 78/1 ಮತ್ತು 2, ಹರಳೂರು ಗ್ರಾಮ ರಿಲೈಯಬಲ್ ಡೆವಲಪರ್ಸ್ 2ನೇ ಫೇಸ್, ಬೆಂಗಳೂರು. ಹರಳೂರು ಶಾಖೆ ತೆರೆಯುವ ಉದ್ದೇಶಕ್ಕಾಗಿ 136.04 ಚದರ ಮೀಟರ್ ನಿವೇಶನವನ್ನು ಬಿಡಿಎ ರವರಿಂದ 30 ವರ್ಷಗಳಿಗೆ Lease ಆಧಾರ ಪಡೆಯಲಾಗಿತ್ತು. ಬ್ಯಾಂಕಿನ ಆಡಳಿತ ಮಂಡಳಿಯು ಸದರಿ ಹರಳೂರು ನಿವೇಶನವು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕಿನ ಕೋರಮಂಗಲ ಶಾಖೆ ಮತ್ತು ಎಲೆಕ್ಟ್ರಾನಿಕ್ ಸಿಟಿ ಶಾಖೆಗಳ ನಡುವೆ ಇರುವ ಕಾರಣಕ್ಕೆ ಅಲ್ಲಿ ಕಟ್ಟಡ ನಿರ್ಮಾಣ ಮಾಡಿ ಶಾಖೆ ತೆರೆಯುವುದು ಸಾಧುವಲ್ಲವೆಂದು ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಶಾಖೆಗಳ ಬೆಳವಣಿಗೆಗೆ ಪೂರಕವಲ್ಲವೆಂದು ಗಮನಿಸಿ ಬಿಡಿಎ ರವರಿಂದ Lease ಆಧಾರ ಪಡೆದಿದ್ದ ನಿವೇಶನವನ್ನು ಬಿಡಿಎ ರವರಿಗೆ ಹಿಂದಿರುಗಿಸಲು ತೀರ್ಮಾನಿಸಿ ಕಾರ್ಯಗತ ಮಾಡಿರುವುದು ಕಂಡು ಬಂದಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅನುಸರಿಸಿ ಸಂಸ್ಥೆಯು ತಾನು ಹೊಂದಿರುವ ಸ್ಥಿರಾಸ್ತಿಗಳ ಪೈಕಿ ಪ್ರಧಾನ ಕಛೇರಿ / ಇಂದಿರಾನಗರ ಶಾಖೆ ಕಟ್ಟಡಗಳನ್ನು ಮಾರುಕಟ್ಟೆ ದರದಲ್ಲಿ ಮರುಮೌಲ್ಯಮಾಪನಗೊಳಿಸಿ ಅವುಗಳ ಪುಸ್ತಕ ಬೆಲೆಯನ್ನು ಕೆಳಕಂಡಂತೆ ಹೆಚ್ಚಿಸುವ ಮೂಲಕ ರೂ. 63.46 ಲಕ್ಷಗಳ ಮರುಮೌಲ್ಯಮಾಪನ ನಿಧಿಯನ್ನು 2022–23ರ ಸಾಲಿನಲ್ಲಿ ಸೃಷ್ಟಿಸಲಾಗಿತ್ತು.

1. ಪ್ರಧಾನ ಕಛೇರಿ ಕಟ್ಟಡ ರೂ. 60,09,00,000.00
2. ಇಂದಿರಾನಗರ ಕಟ್ಟಡ ರೂ. 4,02,79,365.00

ಸಂಸ್ಥೆಯು ವರದಿ ಸಾಲಿನಲ್ಲಿ ಕಟ್ಟಡ ಮರುಮೌಲ್ಯಮಾಪನ ಸಂಬಂಧ ಹೆಚ್ಚಿಸಿದ ಮೌಲ್ಯದ ಉಳಿದ ಮೊಬಲಗಿನ ಮೇಲೆ ಶೇಕಡ 2.5 ದರದಲ್ಲಿ ಸವಕಳಿ ತೆಗೆದು ಕಟ್ಟಡ ಮೌಲ್ಯ ಇಳಿಸಿ ಅದಕ್ಕೆ ಸಮವಾಗಿ ಆಸ್ತಿ ಮರುಮೌಲ್ಯಮಾಪನ ನಿಧಿಯನ್ನು ಇಳಿಸಿರುತ್ತಾರೆ.

ಸಂಸ್ಥೆಯು ಈ ಕ್ರಮದಿಂದಾಗಿ ತನ್ನ Tier-1 ಬಂಡವಾಳಗಳನ್ನು ಹೆಚ್ಚಿಸಿಕೊಂಡಿರುತ್ತಾರೆ.

	1	ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಪರಿಶೀಲಿಸಿದ ಬಗ್ಗೆ ವಿಮರ್ಷೆ	ಸದರಿ ನಿವೇಶನಗಳ ಕಡತಗಳನ್ನು ಪರಿಶೀಲಿಸಿದ್ದು ಕ್ರಯ ಪತ್ರಗಳು ಬ್ಯಾಂಕಿನ ಪರವಾಗಿ ನೋಂದಣಿಯಾಗಿರುವುದನ್ನು ದೃಢೀಕರಿಸಿಕೊಂಡಿದೆ.
	2	ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?	ಸ್ಥಿರಾಸ್ತಿ ರಿಜಿಸ್ಟರ್‌ನಲ್ಲಿ ವಿವರ ಬರೆದಿಡಲಾಗಿದೆ.
	3	ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ?	ಕ್ರಯ ಪತ್ರಗಳು ಬ್ಯಾಂಕಿನ ಪರವಾಗಿ ನೋಂದಣಿಯಾಗಿವೆ. ಬ್ಯಾಂಕು ಹೊಂದಿರುವ ಪ್ರಧಾನ ಕಛೇರಿ ನಿವೇಶನ, ಇಂದಿರಾನಗರ ನಿವೇಶನ, ನಾಗರಬಾವಿ ನಿವೇಶನ, ಆವಲಹಳ್ಳಿ ನಿವೇಶನ, ಮತ್ತು ಮೈಸೂರು ನಿವೇಶನ ಸಂಬಂಧಿಸಿದಂತೆ ಬ್ಯಾಂಕಿನ ಪರವಾಗಿ ಖಾತಾ ನೊಂದಣಿ ಪಡೆದು ಕಂದಾಯ ಪಾವತಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.
	4	ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?	ಬ್ಯಾಂಕು ಹೊಂದಿರುವ ಆಡಳಿತ ಕಛೇರಿ ಕಟ್ಟಡ ಮತ್ತು ಇಂದಿರಾನಗರ ಶಾಖೆ ಕಟ್ಟಡಗಳಿಗೆ ಸಂಬಂಧಿಸಿದಂತೆ ಪೀಠೋಪಕರಣಗಳು, ಗಣಕೀಕರಣ ಯಂತ್ರಗಳು ಸೇರಿದಂತೆ ಒಟ್ಟು ರೂ. 3.75 ಕೋಟಿ ರೂ. ಗಳ ಕಟ್ಟಡ ವಿಮೆಯನ್ನು ಇಫ್ಕೋ ಸಂಸ್ಥೆಯವರಿಂದ ಪಡೆದುಕೊಂಡಿದ್ದು ಕಟ್ಟಡ ವಿಮೆ ಚಾಲ್ತಿಯಲ್ಲಿರುತ್ತದೆ.
	5	ಸ್ಥಿರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ	ಸಂಸ್ಥೆಯು ತನ್ನ ಆಡಳಿತ ಕಛೇರಿ ಮತ್ತು ಇಂದಿರಾನಗರ ಶಾಖೆಗಳ ಕಟ್ಟಡದ ಪುಸ್ತಕ ಮೌಲ್ಯದ ಮೇಲೆ ಶೇಕಡ 2.50 ರಂತೆ ಸವಕಳಿ ಕಳೆದು ಕಟ್ಟಡ ಮೌಲ್ಯ ಇರಿಸಿರುವುದು ಕಂಡು ಬಂದಿದೆ.
	6	ಗೋಡಾನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ	ಸಂಸ್ಥೆಯು ಗೋಡಾನು ಹೊಂದಿರುವುದಿಲ್ಲ.

	7	ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ?	ವರದಿ ಸಾಲಾಂತ್ಯಕ್ಕೆ ಸಂಸ್ಥೆಯು ತನ್ನ ಕಟ್ಟಡದ ಯಾವುದೇ ಭಾಗವನ್ನು ಬಾಡಿಗೆ ನೀಡಿರುವುದಿಲ್ಲ.
	8	ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು.	ವರದಿ ಸಾಲಿನಲ್ಲಿ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ.
	9	ವರದಿ ಸಾಲಿನಲ್ಲಿ ವಿಲೇಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಷೆ	ವರದಿ ಸಾಲಿನಲ್ಲಿ ಸ್ಥಿರಾಸ್ತಿ ವಿಲೇವಾರಿ ಇರುವುದಿಲ್ಲ.
	10	ಸ್ಥಿರಾಸ್ತಿಯ ತೆರಿಗೆಯನ್ನು ತಹಲ್ ದವರೆಗೂ ಪಾವತಿಸಲಾಗಿದೆಯೇ?	ಆಡಳಿತ ಕಛೇರಿ ಕಟ್ಟಡ, ಇಂದಿರಾನಗರ ಕಟ್ಟಡ, ನಾಗರಬಾವಿ, ಆವಲಹಳ್ಳಿ ಮತ್ತು ಮೈಸೂರು ನಿವೇಶನಗಳಿಗೆ ಸಂಬಂಧಿಸಿದಂತೆ ಸ್ಥಿರಾಸ್ತಿ ತೆರಿಗೆಯನ್ನು 2024–25 ರ ಸಾಲಿಗೆ ಪಾವತಿಸಲಾಗಿದೆ.
	ಬಿ	**ಚರಾಸ್ತಿ**	
	1	**ಸಂಘವು ಹೊಂದಿರುವ ಚರಾಸ್ತಿ ವಿವರಗಳು**	

ಸಂಸ್ಥೆಯು ಕೆಳಕಂಡಂತೆ ಚರಾಸ್ತಿಗಳನ್ನು ಹೊಂದಿದೆ.

ಅ) ಪೀಠೋಪಕರಣ ಮತ್ತು ಮರಮುಟ್ಟುಗಳು :

ಪ್ರಸಕ್ತ ಸಾಲಿನ ಪ್ರಾರಂಭದಲ್ಲಿ ರೂ. 12,39,59,081.56 ಗಳ ಮೂಲ ಬೆಲೆಯ ಪೀಠೋಪಕರಣಗಳು ದಾಸ್ತಾನು ಇದ್ದು ವರದಿಯ ಸಾಲಿನಲ್ಲಿ ರೂ. 57,94,927.98 ಗಳ ಪೀಠೋಪಕರಣಗಳನ್ನು ಕೊಂಡಿದ್ದು ಮತ್ತು ಅನುಪಯುಕ್ತ ಪೀಠೋಪಕರಣಗಳನ್ನು ರೂ. 1,271/– ಗಳಿಗೆ ವಿಲೇವಾರಿ ಮಾಡಿದ್ದು ಸಾಲಾಖ್ಯೆರಿಗೆ ರೂ. 12,97,52,738.54 ಗಳ ಮೂಲ ಬೆಲೆಯ ಪೀಠೋಪಕರಣಗಳು ಮತ್ತು ಮರಮುಟ್ಟುಗಳು ಸಂಸ್ಥೆಯಲ್ಲಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಪೀಠೋಪಕರಣ ಮತ್ತು ಮರಮುಟ್ಟುಗಳ ಮೇಲೆ ಶೇಕಡ 10 ರಂತೆ ಸವಕಳಿ ಬಾಬ್ತು ರೂ.50,18,709.20 ಗಳನ್ನು ತೆಗೆದಿರಿಸಿದ್ದು, ವರದಿಯ ಸಾಲಾಖ್ಯೆರಿನವರೆಗಿನ ಒಟ್ಟು ಸವಕಳಿ ಮೊಬಲಗು ರೂ.10,77,39,500.29 ಗಳು ಆಗಿದ್ದು, ಸವಕಳಿ ಜಾತಾ ರೂ.220,13,238.25 ಗಳ ಪುಸ್ತಕ ಮೌಲ್ಯದ ಪೀಠೋಪಕರಣಗಳು ಮತ್ತು ಮರಮುಟ್ಟುಗಳು ಸಂಸ್ಥೆಯಲ್ಲಿ ಸಾಲಾಖ್ಯೆರಿಗೆ ಇರುತ್ತದೆ.

ಪ್ರಧಾನ ಕಛೇರಿ ಮತ್ತು ಶಾಖೆಗಳಲ್ಲಿ ಪೀಠೋಪಕರಣ ಮತ್ತು ಮರಮುಟ್ಟುಗಳ ಮೇಲೆ ಬೆಂಕಿ, ದೊಂಬಿ ಮತ್ತು ದರೋಡೆಯ ಕಾರಣಗಳಿಗಾಗಿ ವಿಮೆ ಮಾಡಲ್ಪಟ್ಟಿದ್ದು ವಿಮೆಯು ಚಾಲ್ತಿಯಲ್ಲಿರುತ್ತದೆ.

ಆ) ಗಣಕ ಯಂತ್ರಗಳ ಮೌಲ್ಯ :

ದಿನಾಂಕ: 31.03.2025 ರ ಅಂತ್ಯಕ್ಕೆ ಗಣಕ ಯಂತ್ರಗಳ ಹಾರ್ಡ್‌ವೇರ್ ನಿವ್ವಳ ಮೌಲ್ಯ ಅಂದರೆ ಸವಕಳಿ ಕಳೆದ ನಂತರದ ಮೌಲ್ಯ ರೂ. 86,93,986.27 ಗಳು ಮುಂದುವರೆದಿದೆ. ಪ್ರಸಕ್ತ ಸಾಲಿನಲ್ಲಿ ಸಂಸ್ಥೆಯ ತನ್ನ ಅವಶ್ಯಕತೆಗಳಿಗಾಗಿ ರೂ. 99,51,280.50 ಗಳನ್ನು ಹಾರ್ಡ್‌ವೇರ್ ಖರೀದಿಸಿದೆ ವರದಿ ಸಾಲಿನಲ್ಲಿ ಗಣಕಯಂತ್ರಗಳ ಬಗ್ಗೆ ರೂ. 40,94,492.00 ಗಳ ಸವಕಳಿ ಅವಕಾಶ ಮಾಡಲಾಗಿದೆ.

ಇ) ಸಂಸ್ಥೆಯ ವಾಹನಗಳು :

ಪ್ರಸಕ್ತ ವರದಿ ಸಾಲಾಂತ್ಯಕ್ಕೆ ಸಂಸ್ಥೆಯು ಎರಡು ಮಹೀಂದ್ರ ಜೀಪುಗಳನ್ನು, ಒಂದು ಟೊಯೋಟಾ ಇನೋವಾ ಕಾರು ಮತ್ತು ಒಂದು ಟೊಯೋಟಾ ಇನೋವಾ ಕ್ರಿಸ್ಟ ಕಾರು ಹೊಂದಿದ್ದು ಕ್ರಮವಾಗಿ ಅವುಗಳ ನೋಂದಣಿ ಸಂಖ್ಯೆ: KA-01 MJ 3298, KA-01 MG 6566, KA-01 MJ 2338 ಮತ್ತು KA-05 NJ 3842 ಗಳಾಗಿರುತ್ತದೆ. ಬ್ಯಾಂಕು ಹೊಂದಿರುವ ನಾಲ್ಕು ವಾಹನಗಳ ಮೂಲ ಬೆಲೆಯು ರೂ.66,61,431.00 ಗಳಾಗಿದ್ದು ಪ್ರಸಕ್ತ ಸಾಲಿನಲ್ಲಿ ವಾಹನ ಸಂಬಂಧ ರೂ.6,86,635.00 ಗಳ ಸವಕಳಿ ಅವಕಾಶ ಮಾಡಿದ್ದು ಒಟ್ಟು ಸವಕಳಿ ಅವಕಾಶಗಳ ನಂತರ ವಾಹನಗಳ ಪುಸ್ತಕ ಬೆಲೆಯು ಸಾಲಾಂತ್ಯಕ್ಕೆ ರೂ.24,03,226.00 ಗಳಾಗಿರುತ್ತದೆ.

ವಾಹನವು ಕ್ರಮಿಸಿದ ದೂರ ಮತ್ತು ಉಪಯೋಗಿಸಿದ ಉದ್ದೇಶ ಇತ್ಯಾದಿ ವಿವರಗಳನ್ನು ಲಾಗ್ ಪುಸ್ತಕದಲ್ಲಿ ಸಹಿಯೊಂದಿಗೆ ಬರೆದಿರುತ್ತಾರೆ.

ಈ) ಗ್ರಂಥಾಲಯ :

ದಿನಾಂಕ: 31.03.2025 ರ ಅಂತ್ಯಕ್ಕೆ ರೂ. 50,967.00 ಗಳ ಮೂಲ ಬೆಲೆಯ ಬ್ಯಾಂಕಿನ ವ್ಯವಹಾರಗಳಿಗೆ ಸಂಬಂಧಿಸಿದ ಪುಸ್ತಕಗಳು ಸಂಸ್ಥೆಯಲ್ಲಿ ಇರುತ್ತದೆ. ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಒಟ್ಟು ಸವಕಳಿ ರೂ. 50,966.00 ಗಳು ಮುಂದುವರೆದ ಕಾರಣ ವರದಿ ಸಾಲಿನಲ್ಲಿ ಸವಕಳಿ ಮೊಬಲಗು ತೆಗೆದಿರಿಸಿರುವುದಿಲ್ಲ ಮತ್ತು ಸದರಿ ಸವಕಳಿ ಕಳೆದ ನಂತರ ರೂ. 1–00 ಗಳ ಪುಸ್ತಕ ಮೌಲ್ಯದ ಪುಸ್ತಕಗಳು ವರ್ಷಾಂತ್ಯಕ್ಕೆ ಸಂಸ್ಥೆಯ ಲೆಕ್ಕಗಳಲ್ಲಿ ಮುಂದುವರೆದಿದೆ.

ಉ) ಮುದ್ರಣ ಮತ್ತು ಲೇಖನ ಸಾಮಗ್ರಿಗಳು :

ಸಂಸ್ಥೆಯು ಪ್ರಸಕ್ತ ಸಾಲಿನಲ್ಲಿ ರೂ. 15,01,420.16 ಗಳನ್ನು ಮುದ್ರಣ ಮತ್ತು ಲೇಖನ ಸಾಮಗ್ರಿಗಳಿಗಾಗಿ ಖರ್ಚು ಮಾಡಿ, ಪೂರ್ತಿ ಮೊಬಲಗನ್ನು ಖರ್ಚು ಲೆಕ್ಕಕ್ಕೆ ತೆಗೆದುಕೊಂಡಿದೆ. ವರ್ಷಾಂತ್ಯದಲ್ಲಿ ಉಳಿದಿರುವ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಮೌಲ್ಯ ರೂ. 4,50,022.63 ಗಳನ್ನು ಪುಸ್ತಕಕ್ಕೆ ತೆಗೆದುಕೊಂಡಿರುವುದಿಲ್ಲ. ಬ್ಯಾಂಕು ಮುದ್ರಣ ಮತ್ತು ಲೇಖನ ಸಾಮಗ್ರಿಗಳು ಖರೀದಿಸಿರುವುದಕ್ಕೆ ಮತ್ತು ಶಾಖೆಗಳಿಗೆ ನೀಡಿರುವುದಕ್ಕೆ ವಿವರಗಳನ್ನು ದಾಖಲಿಸಿದ್ದು ಉಳಿಕೆಯಾಗಿರುವುದಕ್ಕೆ ಸಂಬಂಧಿಸಿದಂತೆ ರಿಜಿಸ್ಟರ್‌ನ್ನು ನಿರ್ವಹಿಸಿರುತ್ತಾರೆ.

ಊ) ಜನರೇಟರ್ :

ಸಂಸ್ಥೆಯು ಪ್ರಸಕ್ತ ವರದಿ ಸಾಲಿನ ಪ್ರಾರಂಭದಲ್ಲಿ ಆಡಳಿತ ಕಛೇರಿ ಮತ್ತು ಶಾಖೆಗಳಲ್ಲಿ ಅಳವಡಿಸಿರುವ ರೂ.35,48,653.50 ಗಳ ಮೂಲ ಬೆಲೆಯ ಜನರೇಟರ್‌ಗಳನ್ನು ಹೊಂದಿದ್ದು, ಪ್ರಸಕ್ತ ಸಾಲಿನ ಸವಕಳಿ ರೂ. 23,000.00 ಗಳು ಸೇರಿ ಒಟ್ಟು ಸವಕಳಿ ರೂ. 35,25,653.30 ಗಳನ್ನು ಕಳೆದ ನಂತರ ರೂ. 23000.20 ಗಳ ಪುಸ್ತಕ ಮೌಲ್ಯದ ಜನರೇಟರ್‌ಗಳು ಸಂಸ್ಥೆಯ ಲೆಕ್ಕದಲ್ಲಿ ಮುಂದುವರೆದಿದೆ.

	2	ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?	ಸಂಸ್ಥೆಯು ಚರಾಸ್ತಿಗಳಿಗೆ ಸಂಬಂಧಿಸಿದಂತೆ ವಿವರ ಪಟ್ಟಿಯನ್ನು ಇರಿಸಿದೆ.
	3	ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ?	ಹೌದು
	4	ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೆ?	ಸಂಸ್ಥೆಯು ಕಟ್ಟಡ ವಿಮೆಯೊಂದಿಗೆ ಪೀಠೋಪಕರಣಗಳು / ಗಣಕೀಕರಣ ಯಂತ್ರಗಳು ಸೇರಿದಂತೆ ಒಟ್ಟು ವಿಮೆ ರೂ. 3.75 ಕೋಟಿ ಹೊಂದಿದ್ದು ವಿಮೆಯು ಚಾಲ್ತಿಯಲ್ಲಿರುತ್ತದೆ.
	5	ಚರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ	ಸಂಸ್ಥೆಯು 2024–25 ರ ಸಾಲಿಗೆ ಗಣಕೀಕರಣ ಯಂತ್ರಗಳ ಮೇಲೆ ಶೇಕಡ 33 1/3 ರಂತೆ, ಕಟ್ಟಡ ಮೇಲೆ ಶೇಕಡ 2.5 ರಂತೆ, ವಾಹನ ಮೇಲೆ ಶೇಕಡ 20 ರಂತೆ ಹಾಗೂ ಪೀಠೋಪಕರಣಗಳು ಮತ್ತು ಜನರೇಟರ್‌ಗಳ ಮೇಲೆ ಶೇಕಡ 10 ರಂತೆ ಸವಕಳಿ ತೆಗೆದಿರಿಸಿದೆ.

		ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ.	
		ವರದಿ ಸಾಲಿನಲ್ಲಿ ವಿಲೇಮಾಡಿರುವ ಚರಾಸ್ತಿಗಳ ಕುರಿತು ವಿಮರ್ಷೆ. ಅನುಪಯುಕ್ತ, ಚರಾಸ್ತಿಗಳ ಬಗ್ಗೆ ಸಂಘವು ಕೈಕೊಂಡಿರುವ ಕ್ರಮಗಳ ಕುರಿತು ವಿಮರ್ಷೆ	ಮೇಲೆ ವಿವರಿಸಿದಂತೆ ವರದಿ ಸಾಲಿನಲ್ಲಿ ಅನುಪಯುಕ್ತ ಪಿಠೋಪಕರಣ ವಿಲೇವಾರಿ ಮಾಡಿರುತ್ತಾರೆ.
	6	ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಷೆ, ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ?	ಸಂಸ್ಥೆಯು ಎರಡು ಮಹೀಂದ್ರ ಜೀಪುಗಳನ್ನು ಒಂದು ಟೊಯೋಟಾ ಇನೋವಾ ಕಾರು ಮತ್ತು ಒಂದು ಟೊಯೋಟಾ ಇನೋವಾ ಕ್ರಿಸ್ಟ ಕಾರು ಹೊಂದಿದೆ. ಇವುಗಳಲ್ಲಿ ಜೀಪುಗಳನ್ನು ಸುಸ್ತಿ ಸಾಲ ವಸೂಲಾತಿ ಕಾರ್ಯಗಳಿಗೆ, ಇನೋವಾ ಕಾರನ್ನು ಪ್ರಧಾನ ವ್ಯವಸ್ಥಾಪಕರ ಕಛೇರಿ ಕರ್ತವ್ಯಗಳಿಗೆ ಮತ್ತು ಇನೋವಾ ಕ್ರಿಸ್ಟ ಕಾರನ್ನು ಅಧ್ಯಕ್ಷ ರವರ ಕಛೇರಿ ಕಾರ್ಯಗಳಿಗೆ ಬಳಸುತ್ತಿರುವುದು ಕಂಡು ಬಂದಿದೆ. ಈ ವಾಹನಗಳ ಬಳಕೆಗೆ ಸಂಬಂಧಿಸಿದಂತೆ ಲಾಗ್ ಪುಸ್ತಕ ನಿರ್ವಹಿಸಿರುವುದು ಕಂಡು ಬಂದಿದೆ. ಈ ವಾಹನಗಳು ಪ್ರತಿ ಲೀಟರ್ ಇಂಧನಕ್ಕೆ ಸರಾಸರಿ 8 ರಿಂದ 9 ಕಿಲೋ ಮೀಟರ್ ಕ್ರಮಿಸಿರುವುದು ಕಂಡು ಬಂದಿದೆ.
	7	ವರದಿ ಸಾಲಿನಲ್ಲಿ ವಿಲೇಮಾಡಿರುವ ವಾಹನದ ಕುರಿತು ವಿಮರ್ಷೆ.	ವರದಿ ಸಾಲಿನಲ್ಲಿ ಯಾವುದೇ ವಾಹನವನ್ನು ವಿಲೇವಾರಿ ಮಾಡಿರುವುದಿಲ್ಲ.
	8	ಬ್ಯಾಂಕೇತರ ಆಸ್ತಿಗಳು : (Non Banking Assets) ವರದಿ ಸಾಲಾಂತ್ಯಕ್ಕೆ ಸಂಸ್ಥೆಯು ಕೆಳಕಂಡ ಬ್ಯಾಂಕೇತರ ಆಸ್ತಿಗಳನ್ನು ಹೋದಿದೆ. ಸಂಸ್ಥೆಯು ಅನುತ್ಪಾದಕ ಸಾಲ ವಸೂಲಾತಿ ಸಂಬಂಧದಲ್ಲಿ SARFAESIA-2002 ರ ರೀತ್ಯಾ ಕ್ರಮ ಅಳವಡಿಸಲಾಗಿ ಬ್ಯಾಂಕು ನೀಡಿದ್ದ ಸಾಲಕ್ಕೆ ಆಧಾರವಾಗಿದ್ದ ಸ್ಥಿರಾಸ್ತಿ ಸಂಖ್ಯೆ ಹೊಸದು 20, ಹಳೆ ನಂಬರ್ 40, ನಿವೇಶನ ಸಂಖ್ಯೆ 2, 10ನೇ ಕ್ರಾಸ್, ಪೈಪ್‌ಲೈನ್ ರಸ್ತೆ, ಚೋಳೂರು ಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು (ಮೊದಲಿಗೆ 4ನೇ 'ಎ' ಕ್ರಾಸ್ ಹೊಸಹಳ್ಳಿ ಗ್ರಾಮ) ಹಾಲಿ ಬಿಬಿಎಂಪಿ ವಾರ್ಡ್ ನಂ. 33, ವಿಜಯನಗರ ಪಿ.ಐ.ಡಿ. ನಂ. 33–65–20, ಬೆಂಗಳೂರು ಅಳತೆ : ಪೂರ್ವ ದಿಂದ ಪಶ್ಚಿಮ 38+43 /2 ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಯನ್ನು ಹಲವು ಬಾರಿ ಹರಾಜು ಮಾರಾಟ ಕ್ರಮ ಅನುಸರಿಸಿದಾಗ್ಯೂ ಬಿಡ್ದುದಾರರಿಂದ ಸೂಕ್ತ ಬಿಡ್ದು ಬಾರದ ಕಾರಣ ಸದರಿ ಆಸ್ತಿಯನ್ನು ರೂ. 1,14,40,000/– ಗಳಿಗೆ ಬಿಡ್ದು ಮಾಡಿ 2022–23 ರ ಸಾಲಿನಲ್ಲಿ ಖರೀದಿಸಿದ್ದು ಸಂಬಂಧಿಸಿದಂತೆ ರಿಜಿಸ್ಟರೇಷನ್ ವೆಚ್ಚ ಸೇರಿದಂತೆ ಒಟ್ಟು ರೂ. 1,21,95,680.00 ರೂಗಳ ಬ್ಯಾಂಕೇತರ ಆಸ್ತಿ. ಸಂಸ್ಥೆಯು 2023–2024 ರ ಸಾಲಿನಲ್ಲಿ ಅನುತ್ಪಾದಕ ಸಾಲ ವಸೂಲಾತಿ ಸಂಬಂಧದಲ್ಲಿ SARFAESIA-2002 ಕಾಯ್ದೆ ರೀತ್ಯಾ ಕ್ರಮ ಅಳವಡಿಸಲಾಗಿ ಬ್ಯಾಂಕು ನೀಡಿದ್ದ ಸಾಲಕ್ಕೆ ಆಧಾರವಾಗಿದ್ದ ಸ್ಥಿರಾಸ್ತಿ ಸಂಖ್ಯೆ ಪ್ಲಾಟ್ (ಷೆಡ್) ನಂ. 8, ಇಂಡಸ್ಟ್ರೀಲ್ ಎಸ್ಟೇಟ್, ಪೀಣ್ಯ 3ನೇ ಹಂತ, ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ನೆಲಗೆದರನಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ, ಪೂರ್ವ ದಿಂದ ಪಶ್ಚಿಮ 17 ಅಡಿಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 128 ಅಡಿಗಳು ಅಳತೆಯ ಸ್ಥಿರಾಸ್ತಿಯನ್ನು ಹಲವು ಬಾರಿ ಹರಾಜು ಕ್ರಮ ಅನುಸರಿಸಿದಾಗ್ಯೂ ಬಿಡ್ದುದಾರರು ಭಾಗವಹಿಸಲಿಲ್ಲದ ಕಾರಣ ಬ್ಯಾಂಕು ಸದರಿ ಆಸ್ತಿಯನ್ನು ರೂ. 1,09,80,000.00 ಗಳಿಗೆ ಬಿಡ್ದು ಮಾಡಿ ತನ್ನ ಹೆಸರಿಗೆ ಖರೀದಿಸಿ ಸಂಬಂಧಿಸಿದಂತೆ	

		ರಿಜಿಸ್ಟ್ರೇಷನ್ ವೆಚ್ಚ ರೂ. 8,34,830.00 ವರದಿ ವರ್ಷದಲ್ಲಿ ಭರಿಸಲಾಗಿ ಬ್ಯಾಂಕೇತರ ಆಸ್ತಿ ರೂ. 118,14,830.00. ವರದಿ ಸಾಲಾಂತ್ಯಕ್ಕೆ ಒಟ್ಟು ರೂ. 2,40,10,510.00 ಗಳ ಬ್ಯಾಂಕೇತರ ಆಸ್ತಿಗಳು (Non Banking Assets) ಮುಂದುವರೆದಿವೆ. ಸಂಸ್ಥೆಯು ತಾನು ಹೊಂದಿರುವ ಬ್ಯಾಂಕೇತರ ಆಸ್ತಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನವರು ನಿಗದಿಪಡಿಸಿರುವ ಕಾಲ ಮಿತಿಯೊಳಗೆ ಮಾರಾಟ ಮಾಡಲು ಕ್ರಮವಹಿಸಲು ಸೂಚಿಸಿದೆ.

(27) ಇತರೆ ಬರತಕ್ಕವುಗಳು :

ಇತರೆ ಆಸ್ತಿಗಳು :

ಪ್ರಸಕ್ತ ಸಾಲಾಂತ್ಯಕ್ಕೆ ರೂ. 72,80,12,472.98 ಗಳ ಇತರೆ ಆಸ್ತಿಗಳು ಸಂಸ್ಥೆಯಲ್ಲಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

1.	ಕೋರ್ಟು ಶುಲ್ಕ	1,69,09,180.90
2.	ಬಾಡಿಗೆ ಮುಂಗಡ	1,44,13,000.00
3.	ಆದಾಯ ತೆರಿಗೆ ಮುಂಗಡ	31,74,79,076.09
4.	ಸರ್ಕಾರಿ ಸಾಲ ಪತ್ರಗಳ ಮೇಲೆ ಬಡ್ಡಿ ಬರಬೇಕಾಗಿರುವುದು	16,89,34,407.00
5.	"ಇ" ಸ್ಟಾಪಿಂಗ್ ಭದ್ರತಾ ಠೇವಣಿ	50,000.00
6.	"ಇ" ಸ್ಟಾಪಿಂಗ್ ಲೆಕ್ಕ	7,94,621.00
7.	ಡೆಫರ್ಡ್ ಟ್ಯಾಕ್ಸ್ – ಆಸ್ತಿ ಲೆಕ್ಕ	71,70,042.17
8.	ಉತ್ಪಾದಕ ಸಾಲ ಆಸ್ತಿಗಳ ಮೇಲೆ ಸ್ವೀಕರಿಸಬೇಕಾದ ಬಡ್ಡಿ	17,76,58,801.00
9.	DEA Fund ಸ್ವೀಕರಿಸಬೇಕಾದ್ದು	63,769.00
10.	ಮೂಲದಲ್ಲೆ ಆದಾಯ ತೆರಿಗೆ ಕಡಿತ ಲೆಕ್ಕ ಸ್ವೀಕರಿಸಬೇಕಾದ್ದು	24,929.00
11.	ಇತರೆ ಮುಂಗಡಗಳು	4,24,660.00
12.	ಜಿ.ಎಸ್.ಟಿ ಕ್ಲೇಮು ಮಾಡಬೇಕಾಗಿರುವುದು	79,476.82
13.	ಬ್ಯಾಂಕೇತರ ಆಸ್ತಿಗಳು	2,40,10,510.00
	ಒಟ್ಟು	**72,80,12,472.98**

1 ದಾವಾ ಮತ್ತು ಅಮಲ್ದಾರಿ ಫೀ : (ಕೋರ್ಟು ಶುಲ್ಕ) :

ದಿನಾಂಕ: 31.03.2025 ರ ಅಂತ್ಯಕ್ಕೆ ಸಂಸ್ಥೆಯಿಂದ ಸಾಲ ಪಡೆದಿರುವ ಸದಸ್ಯರುಗಳಿಂದ ರೂ. 1,69,09,180.90 ಗಳ ದಾವಾ ಮತ್ತು ಅಮಲ್ದಾರಿ ಫೀ ಬಾಬ್ತು ಬ್ಯಾಂಕಿಗೆ ಬರಬೇಕಾಗಿರುತ್ತದೆ. ಎಲ್ಲಾ ಶಾಖೆಗಳಲ್ಲಿ ಸಾಲಾಂತ್ಯಕ್ಕೆ ಕುಳುವಾರು ಬಾಕಿ ಪಟ್ಟಿಯನ್ನು ತಯಾರು ಮಾಡಿ ಪರಿಶೀಲನೆಗೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಹಾಜರುಪಡಿಸಿದ್ದು, ಕುಳುವಾರು ಪಟ್ಟಿಯ ಮೊಬಲಗಿಗೂ ಆಸ್ತಿ ಜವಾಬ್ದಾರಿ ತ:ಖ್ತೆಯ ಮೊಬಲಗಿಗೂ ತಾಳೆಯಿರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನಗಳನ್ವಯ ಇಂತಹ ಪಾವತಿಗಳನ್ನು ವೆಚ್ಚಗಳೆಂದು ಪರಿಗಣಿಸಿ ಸ್ವೀಕರಿಸಿದ ಸಂದರ್ಭದಲ್ಲಿ ಲಾಭ ಎಂದು ಪರಿಗಣಿಸಬೇಕಾಗಿರುವುದರಿಂದ ಮತ್ತು ಆಸ್ತಿ ಲೆಕ್ಕಗಳಲ್ಲಿ ಮುಂದುವರೆಸಲು ಅವಕಾಶವಿರದ ನಿಮಿತ್ತ ಸದರಿ ಮೊಬಲಗುಗಳಿಗೆ ವರ್ಷಾಂತ್ಯದಲ್ಲಿ ಅವಕಾಶ ಕಲ್ಪಿಸಿ, ಇತರೆ ಜವಾಬ್ದಾರಿ ಲೆಕ್ಕಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

2 ಬಾಡಿಗೆ ಮುಂಗಡ :

ವರ್ಷಾಂತ್ಯದಲ್ಲಿ ಬ್ಯಾಂಕಿನ ಇಪ್ಪತ್ತು ಶಾಖೆಗಳು ಬಾಡಿಗೆಗೆ ಪಡೆಯಲಾಗಿರುವ ಖಾಸಗಿ ಕಟ್ಟಡಗಳಲ್ಲಿದ್ದು ಕಟ್ಟಡದ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡು ಬಾಡಿಗೆ ಮುಂಗಡ ನೀಡಲಾಗಿದೆ.

ಪ್ರಸಕ್ತ ವರದಿ ಸಾಲಾಂತ್ಯಕ್ಕೆ ರೂ. 1,44,13,000.00 ಗಳ ಬಾಡಿಗೆ ಮುಂಗಡಗಳು ಮುಂದುವರೆದಿದೆ.

ಕ್ರ. ಸ.	ಶಾಖೆಯ ಹೆಸರು	ಕಟ್ಟಡ ಮಾಲೀಕರ ಹೆಸರು	ಮೊಬಲಗು
1	ವಿಜಯನಗರ ಶಾಖೆ	ಹೆಚ್.ಎಸ್. ಶಾಂತರಾಮು	6,50,000.00
2	ಜಯನಗರ ಶಾಖೆ	ಕೆ. ಜಯಮ್ಮ	6,20,000.00
3	ಶಾಂತಿ ನಗರ ಶಾಖೆ	ಎಲ್. ಶ್ರೀನಿವಾಸರೆಡ್ಡಿ	7,00,000.00
4	ಮಹಾಲಕ್ಷ್ಮೀಪುರಂ ಶಾಖೆ	ಕಾಂತರಾಜ್ .ಎಸ್.ಎಂ	5,00,000.00
5	ಸಂಜಯನಗರ ಶಾಖೆ	ಪೂರ್ಣಿಮ ಎಸ್ ಬಾಬು	10,50,000.00
6	ಪದ್ಮನಾಭನಗರ ಶಾಖೆ	ಲಕ್ಷ್ಮಿ ರಾಜ್‌ಗೋಪಾಲ್	10,00,000.00
7	ಚಾಮರಾಜಪೇಟೆ ಪಶ್ಚಿಮ ಶಾಖೆ	ಬಿ.ಕೆ. ಮೂರ್ತಿ	5,00,000.00
8	ಕೋರಮಂಗಲ ಶಾಖೆ	ಎಸ್. ಸುರೇಶ್	11,50,000.00
9	ಆವಲಹಳ್ಳಿ ಶಾಖೆ	ಲಕ್ಷ್ಮಿಲಾಲ್ .ಎಸ್, ಖೈಲಿದೇವಿ ಮತ್ತು ವಿಜಯ್.ಎಲ್	4,00,000.00
10	ಆರ್.ಟಿ.ನಗರ ಶಾಖೆ	ಸುರೇಂದ್ರ .ಕೆ.ಪಿ.ಎಸ್	10,00,000.00
11	ಜ್ಞಾನಜ್ಯೋತಿ ನಗರ ಶಾಖೆ	ರಾಮದಾಸ್, ಸುರೇಶ್ ಡಿ.ಆರ್., ಬಿಂದುಜಾ	3,23,000.00
12	ಹೆಚ್.ಆರ್.ಬಿ.ಆರ್. ಶಾಖೆ	ನೆಕರಾಮ್	8,00,000.00
13	ಕೆ.ಆರ್. ಪುರಂ ಶಾಖೆ	ಹನುಮಂತಸಿಂಗ್ ಮತ್ತು ರಾಧ ಪುರೋಹಿತ್	4,00,000.00
14	ರಾಮನಗರ ಶಾಖೆ	ಮಗಾರಾಜ ಸಿ. ರಮೇಶ್ ಡಿ. ಸೊವನ್‌ಲಾಲ್, ವೆನ್‌ರಾಮ್ ಡಿ. ಮೊಹನ್ ಲಾಲ್	4,00,000.00
15	ಟಿ. ದಾಸರಹಳ್ಳಿ	ಮಂಜಪ್ಪ .ಎಂ,	8,80,000.00
16	ಕುವೆಂಪುನಗರ ಶಾಖೆ–ಮೈಸೂರು	ಅನಂತರಾಮು, ಅನನ್ಯ ಸಿ.	5,40,000.00
17	ಹೊಸೂರು ರಸ್ತೆ– ಎಲೆಕ್ಟ್ರಾನಿಕ್ ಸಿಟಿ ಶಾಖೆ	ಲಲಿತಾ ಕೆ.ಎನ್	6,00,000.00
18	ಯಲಹಂಕ ಶಾಖೆ	ಪವನ್ ಚಂದರ್ ಎಮ್.	6,00,000.00
19	ಅಂಜನಾನಗರ ಶಾಖೆ	ಕೆ.ಪಿ. ಕುಮಾರಸ್ವಾಮಿ	6,00,000.00
20	ಕೋಣನಕುಂಟೆ ಶಾಖೆ	ವಿ. ಮುತ್ತುಬಾಯಿ ಮತ್ತು ಎ. ರಘು	17,00,000.00
		ಒಟ್ಟು	**1,44,13,000.00**

3 ಆದಾಯ ತೆರಿಗೆ ಮುಂಗಡ :

ಕೇಂದ್ರ ಸರ್ಕಾರದವರು ಪಟ್ಟಣ ಸಹಕಾರ ಬ್ಯಾಂಕುಗಳಿಗೂ ನಿವ್ವಳ ಆದಾಯಗಳ ಮೇಲೆ 2006–07 ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೆ ಬರುವಂತೆ ಆದಾಯ ತೆರಿಗೆ ವಿಧಿಸಿದೆ. ಈ ಸಂಬಂಧದಲ್ಲಿ 2023–24 ಮತ್ತು 2024–25 ರ ಸಾಲುಗಳಿಗೆ ಆದಾಯ ತೆರಿಗೆ ಇಲಾಖೆಗೆ ಪಾವತಿಸಿದ ತೆರಿಗೆ ಮೊತ್ತ ರೂ. 31,74,79,076.09 ಗಳು ಅಸೆಸ್‌ಮೆಂಟ್ ಮುಕ್ತಾಯವಾಗಿರದ ಕಾರಣ ಆದಾಯ ತೆರಿಗೆ ಮುಂಗಡ ಲೆಕ್ಕಗಳಡಿಯಲ್ಲಿ ಇತರೆ ಆಸ್ತಿ ಲೆಕ್ಕಗಳಲ್ಲಿ ಮುಂದುವರೆಸಿದೆ.

4 ಸರ್ಕಾರಿ ಸಾಲ ಪತ್ರಗಳ ಮೇಲೆ ಬಡ್ಡಿ ಬರಬೇಕಾಗಿರುವುದು :

ದಿನಾಂಕ: 31.03.2025 ಕ್ಕೆ ಕೇಂದ್ರ / ರಾಜ್ಯ ಸರ್ಕಾರ ಸಾಲ ಪತ್ರಗಳ ಮೇಲೆ ಬಾಕಿಯಿರುವ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ರೂ.16,89,34,407.00 ಗಳನ್ನು ಆದಾಯವೆಂದು ಪರಿಗಣಿಸಿ, ಸದರಿ ಮೊಬಲಗನ್ನು ಬರಬೇಕಾದ ಬಡ್ಡಿಯೆಂದು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಇತರೆ ಆಸ್ತಿ ಲೆಕ್ಕಗಳಡಿಯಲ್ಲಿ ತೋರಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳನ್ವಯ ಇಂತಹ ಬಡ್ಡಿ ಮೊಬಲಗನ್ನು ಆದಾಯಗಳಾಗಿ ಪರಿಗಣಿಸಲು ಅವಕಾಶವಿರುತ್ತದೆ.

5 "ಇ" ಸ್ಟಾಪಿಂಗ್ ಭದ್ರತಾ ಠೇವಣಿ ಮತ್ತು "ಇ" ಸ್ಟಾಪಿಂಗ್ ಲೆಕ್ಕ :

ಸಂಸ್ಥೆಯು ಗ್ರಾಹಕರ ಅನುಕೂಲಕ್ಕಾಗಿ "ಇ" ಸ್ಟಾಪಿಂಗ್ ಸೌಲಭ್ಯ ಒದಗಿಸುತ್ತಿದೆ. ಈ ಸಂಬಂಧ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ಮತ್ತು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ರವರುಗಳೊಂದಿಗೆ ಕರಾರು ಏರ್ಪಡಿಸಿ ಕೊಂಡಿರುತ್ತಾರೆ. ಈ ವ್ಯವಹಾರ ನಡೆಸುವ ಸಂಬಂಧದಲ್ಲಿ ರೂ. 50,000.00 ಗಳ ಭದ್ರತಾ ಠೇವಣಿಯನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ರವರಲ್ಲಿ ಇರಿಸಲಾಗಿದ್ದು ವರ್ಷಾಂತ್ಯಕ್ಕೆ ಲೆಕ್ಕಗಳಲ್ಲಿ ಮುಂದುವರೆದಿದೆ.

ಹಾಗೆಯೇ "ಇ" ಸ್ಟಾಪಿಂಗ್ ಮಾರಾಟದ ಉದ್ದೇಶ ನೀಡಲಾಗುವ "ಇ" ಸ್ಟಾಪಿಂಗ್ ಮೊತ್ತವನ್ನು ಮುಂಗಡವಾಗಿ ಪಾವತಿಸುವ ಅಗತ್ಯವಿದ್ದು ಪಾವತಿಸಿದ ಮೊತ್ತಗಳಲ್ಲಿ ರೂ.7,94,621.00 ಗಳು ವರ್ಷಾಂತ್ಯಕ್ಕೆ ಮುಂದುವರೆದಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

6 ಡೆಫರ್ಡ್ ಟ್ಯಾಕ್ಸ್–ಆಸ್ತಿ ಲೆಕ್ಕ :

ಸಂಸ್ಥೆಯು ಹೊಂದಿರುವ ಆಸ್ತಿಗಳ ಮೇಲೆ ತೆಗೆದಿರಿಸಿರುವ ಸವಕಳಿ ಬಾಬ್ತು ವೆಚ್ಚಗಳು ಆದಾಯ ತೆರಿಗೆ ನಿಯಮಗಳ ಅನ್ವಯ ಸವಕಳಿ ಬಾಬ್ತು ವ್ಯತ್ಯಾಸ ಸಂಬಂಧ ರೂ.71,70,042.17 ಗಳು ಡೆಫರ್ಡ್ ಟ್ಯಾಕ್ಸ್ ಆಸ್ತಿ ಲೆಕ್ಕಗಳಲ್ಲಿ ಸಾಲಾಂತ್ಯಕ್ಕೆ ಮುಂದುವರೆದಿವೆ.

7 ಉತ್ಪಾದಕ ಸಾಲಗಳ ಮೇಲೆ ಸ್ವೀಕರಿಸಬೇಕಾದ ಬಡ್ಡಿ :

ವರದಿ ಸಾಲಿನ ಪ್ರಾರಂಭದಲ್ಲಿ ಉತ್ಪಾದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿ ಮೊಬಲಗು ರೂ.16,13,82,791.00 ಗಳಿದ್ದು ವರದಿ ಸಾಲಾಂತ್ಯಕ್ಕೆ ಅಂತಹ ಬಡ್ಡಿಗಳು ರೂ. 17,76,58,801.00 ಗಳಿಗೆ ಏರಿಕೆಯಾದ ಕಾರಣ ವ್ಯತ್ಯಾಸ ರೂ. 1,62,76,010.00 ಗಳನ್ನು ವರದಿ ಸಾಲಿನಲ್ಲಿ ಸಾಲಗಳ ಮೇಲೆ ಬಡ್ಡಿ ಆದಾಯವೆಂದು ಪರಿಗಣಿಸಿ ಲೆಕ್ಕಗಳಲ್ಲಿ ಅಳವಡಿಸಿದೆ. ವರದಿ ಸಾಲಾಂತ್ಯಕ್ಕೆ ರೂ. 17,76,58,801.00 ಗಳು ಆಸ್ತಿ–ಜವಾಬ್ದಾರಿ ಲೆಕ್ಕಗಳಲ್ಲಿ ಇತರೆ ಆಸ್ತಿ ಲೆಕ್ಕಗಳಲ್ಲಿ ಮುಂದುವರೆಸಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಉತ್ಪಾದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿಯನ್ನು ಆದಾಯವಾಗಿ ಪರಿಗಣಿಸಬಹುದಾಗಿದೆ.

8 DEA Fund ಸ್ವೀಕರಿಸಬೇಕಾದ್ದು :

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಸಂಸ್ಥೆಯಲ್ಲಿ 10 ವರ್ಷಗಳಿಗೂ ಮೀರಿ ಕ್ಲೇಮು ಮಾಡದಿರುವ ಠೇವಣಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನವರು ನಿರ್ವಹಿಸುವ DEA Fund ಗೆ ಪಾವತಿಸಬೇಕಾಗಿದ್ದು ನಿಯಮ ಪಾಲಿಸಿದೆ. ಈ ರೀತಿ ಪಾವತಿಸಿದ ಠೇವಣಿಯನ್ನು ಠೇವಣಿದಾರನು ಕ್ಲೇಮು ಮಾಡಿದ್ದಲ್ಲಿ ಬ್ಯಾಂಕು ಅಂತಹ ಠೇವಣಿ ಮೊಬಲಗನ್ನು ತನ್ನ ಸ್ವಂತ ನಿಧಿಯಿಂದ ಠೇವಣೀದಾರರಿಗೆ ಪಾವತಿಸಿ ನಂತರ DEA Fund ನಿಂದ ಕ್ಲೇಮು ಮಾಡಬೇಕಿದ್ದು, ಈ ನಿಯಮಸಾರ ಠೇವಣಿದಾರರಿಗೆ ಪಾವತಿಸಿರುವ ಮೊಬಲಗು ರೂ. 63,769–00 ಗಳು ಸಾಲಾಂತ್ಯಕ್ಕೆ ಆಸ್ತಿ–ಜವಾಬ್ದಾರಿ ತಃಖ್ತೆಗಳಲ್ಲಿ ಇತರೆ ಆಸ್ತಿ ಲೆಕ್ಕಗಳಡಿಯಲ್ಲಿ ತೋರಿಸಲಾಗಿದೆ. ಈ ಬಾಬ್ತು ಮೊಬಲಗನ್ನು 2025–26 ರ ಸಾಲಿನಲ್ಲಿ DEA Fund ರವರಿಂದ ಸ್ವೀಕರಿಸಿರುವುದು ಕಂಡು ಬಂದಿದೆ.

9 ಮೂಲದಲ್ಲೆ ಆದಾಯ ತೆರಿಗೆ ಕಡಿತ ಲೆಕ್ಕ ಸ್ವೀಕರಿಸಬೇಕಾದ್ದು :

ಸಂಸ್ಥೆಯು ಠೇವಣಿದಾರರಿಗೆ ಠೇವಣಿ ಬಡ್ಡಿ ಪಾವತಿಸುವಾಗ್ಗೆ ಮೂಲದಲ್ಲೆ ಆದಾಯ ತೆರಿಗೆ ಕಡಿತ ಮಾಡಬೇಕಾಗಿದ್ದು ವರ್ಷಾಂತ್ಯಕ್ಕೆ ಠೇವಣಿ ಬಡ್ಡಿ ಪಾವತಿಗೆ ಅರ್ಹವಾದ ಕೆಲವು ಖಾತೆಗಳಿಗೆ ಸಂಬಂಧಿಸಿದಂತೆ ಅಂತಹ ಆದಾಯ

ತೆರಿಗೆಯನ್ನು ಪಾವತಿಸಿದ್ದು ಇಂತಹ ಮೊಬಲಗು ರೂ. 24,929.00 ಗಳು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಆಸ್ತಿ ಕಡೆ ಮುಂದುವರೆದಿದ್ದು ಠೇವಣಿದಾರರಿಗೆ ಠೇವಣಿ ಬಡ್ಡಿ ಪಾವತಿಸುವಾಗ್ಗೆ ಹೊಂದಾಣಿಕೆ ಮಾಡಿಕೊಳ್ಳಬೇಕಿದೆ.

10. ಇತರೆ ಮುಂಗಡಗಳು :

ಸಂಸ್ಥೆಯು ಬ್ಯಾಂಕಿನ ಗ್ರಾಹಕರಿಗೆ HDFC ಬ್ಯಾಂಕಿನ ಸಹಯೋಗದೊಂದಿಗೆ Rupay ATM Card ಸೌಲಭ್ಯ ಒದಗಿಸಿದ್ದು, Rupay ATM Card ಗಳ ಖರೀದಿಗಾಗಿ M/s. Sarvartha Technologies Pvt Ltd., Pune ರವರಿಗೆ ಮುಂಗಡವಾಗಿ ಪಾವತಿಸಿದ ಮೊಬಲಗು ಪ್ರತಿ ರೂ. 424660.00 ಗಳು ಸಾಲಾಂತ್ಯದಲ್ಲಿ ಸಂಸ್ಥೆಯ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಇತರೆ ಆಸ್ತಿಗಳ ಲೆಕ್ಕಗಳಡಿಯಲ್ಲಿ ಮುಂದುವರೆದಿದೆ.

11. ಜಿ.ಎಸ್.ಟಿ ಕ್ಲೇಮು ಮಾಡಬೇಕಾಗಿರುವುದು :

ವರ್ಷಾಂತ್ಯ 31.03.2025ಕ್ಕೆ ಬ್ಯಾಂಕು ರೂ.79,476.82 ಮೊಬಲಗು ಜಿ.ಎಸ್.ಟಿ Input claim ಮಾಡಬೇಕಿದ್ದು ಆಸ್ತಿ–ಜವಾಬ್ದಾರಿ ತಃಖ್ತೆಗಳಡಿಯಲ್ಲಿ ಮುಂದುವರೆದಿದ್ದು ನಂತರದ ಮಾಹೆಯಲ್ಲಿ ಕ್ಲೇಮು ಮಾಡಿರುವುದು ಕಂಡು ಬಂದಿದೆ.

12. ಬ್ಯಾಂಕೇತರ ಆಸ್ತಿಗಳು :

ಸಂಸ್ಥೆಯು 2024–25 ಸಾಲಾಂತ್ಯ ರೂ. 2,40,10,510.00 ಗಳ ಬ್ಯಾಂಕೇತರ ಆಸ್ತಿಗಳನ್ನು ಇತರೆ ಆಸ್ತಿಗಳ ಲೆಕ್ಕದಡಿಯಲ್ಲಿ ಹೊಂದಿದ್ದು ಸಂಬಂಧಿಸಿದಂತೆ ವಿವರಗಳನ್ನು ಕಂಡಿಕೆ 26(8) ರಲ್ಲಿ ನೀಡಿದೆ.

	ಚೆಕ್ಕು, ಬಿಲ್ಲು, ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವರೋ ವಿವರಿಸಿ.	ವರದಿ ಸಾಲಿನಲ್ಲಿ ಸಂಸ್ಥೆಯು ಚೆಕ್ಕು, ಬಿಲ್ಲು ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವುದಿಲ್ಲ.
	ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು	ಸಂಸ್ಥೆಯು ಹೊರಗಿನ ಯಾವುದೇ ಸಾಲವನ್ನು ಪಡೆಯದೇ ಇರುವುದರಿಂದ ಯಾವುದೇ ಬಡ್ಡಿ ಪಾವತಿಗೆ ಬಾಕಿ ಇರುವುದಿಲ್ಲ. ಬ್ಯಾಂಕ್ ತಾನು ಹೊಂದಿರುವ ಠೇವಣಾತಿಗಳಿಗೆ ಬಡ್ಡಿಯನ್ನು ಆಡಳಿತ ಮಂಡಳಿಯವರು ಕಾಲಕಾಲಕ್ಕೆ ಹೊರಡಿಸುವ ಆದೇಶಗಳ ಮೂಲಕ ನಿಗದಿಪಡಿಸುವ ದರಗಳಲ್ಲಿ ಸಂಬಂಧಪಟ್ಟ ಠೇವಣಾತಿದಾರರಿಗೆ ಪಾವತಿಸುತ್ತಿದೆ. ಸಂಸ್ಥೆಯು ನೀಡಿರುವ ಸಾಲಗಳ ಮೇಲೆ ಬಡ್ಡಿಯನ್ನು ಆಡಳಿತ ಮಂಡಳಿಯವರ ನಿರ್ದೇಶನಗಳಿಗೆ ಅನುಗುಣವಾಗಿ ಆಕರಣೆ ಮಾಡಿ ವಸೂಲಿ ಮಾಡಲಾಗುತ್ತಿದೆ.
	ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ	ಸಂಸ್ಥೆಯಲ್ಲಿ ಎಲ್ಲಾ ವಿಧವಾದ ಹೊಂದಾಣಿಕೆಗಳು ಮತ್ತು ಕ್ಲಿಯರಿಂಗ್ ಲೆಕ್ಕಗಳು ಹಾಗೂ ಇತರೆ ಲೆಕ್ಕಗಳನ್ನು ಪ್ರತಿ ಮಾಹೆಯ ಅಂತ್ಯಕ್ಕೆ ಪರಿಶೀಲನೆ ನಡೆಸಿ ಶಾಖೆಗಳ ಲೆಕ್ಕಗಳಿಗೂ ಮತ್ತು ಪ್ರಧಾನ ಕಛೇರಿಯ ಲೆಕ್ಕ ಪತ್ರಗಳಿಗೂ ಇರುವ ವ್ಯತ್ಯಾಸಕ್ಕೆ ಕಾರಣಗಳನ್ನು ಪರಿಶೀಲಿಸಿ ಸಮನ್ವಯ ಪಟ್ಟಿಯನ್ನು ತಯಾರಿಸುವ ಮುಖಾಂತರ ತಾಳೆ ಮಾಡಿಕೊಳ್ಳಲಾಗುತ್ತದೆ.

28) ಮೋಸ, ವಂಚನೆ, ಹಣ ದುರುಪಯೋಗದ ವರದಿ

ಹಣ ದುರುಪಯೋಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕ ಪರಿಶೋಧನಾ ಇಲಾಖಾ ಮೇಲಾಧಿಕಾರಿಗಳ ಅಂತರಿಕ ವರದಿ ಸಲ್ಲಿಸಲಾಗಿದೆಯೇ?	ವರದಿ ಸಾಲಿನಲ್ಲಿ ಹಣ ದುರಪಯೋಗ ಪ್ರಕರಣಗಳು ಇರುವುದಿಲ್ಲ.

ಪ್ರತಿಯೊಂದು ಹಣದುರುಪಯೋಗದ ಅಂಶದ ಸ್ವರೂಪದ ಬಗ್ಗೆ ದಿನಾಂಕವಾರು, ಹಣ ದುರುಪಯೋಗ ಮಾಡಿದ ರೀತಿ, ಉದ್ದೇಶ, ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸಿ ಆಪಾದಿತರಿಗೆ ವಿವರಣೆ ನೀಡಲು ನೊಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ ನೀಡಲಾಗಿದೆಯೇ?	ಅನ್ವಯಿಸುವುದಿಲ್ಲ
ಹಣದುರುಪಯೋಗ ಸಾಬಿತವಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸಿ, ಫೌಜದಾರಿ ಮತ್ತು ದಿವಾಣಿ (Criminal & Civil) ಕ್ರಮಕ್ಕೆ ಏಕೆ ಕ್ರಮ ಕೈಕೊಳ್ಳಬಾರದೆಂಬ ಬಗ್ಗೆ ಸಂಬಂಧಪಟ್ಟವರಿಗೆ ಜಾರಿ ಮಾಡಿರುವ ನೋಟಿಸು ಹಾಗೂ ಸಮನ್ಸ್‌ಗಳ ಕುರಿತು ಹಾಗೂ ಅದಕ್ಕೆ ಅವರು ನೀಡಿರುವ ವಿವರಣೆಯನ್ನು ಪರಿಗಣಿಸಿದ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ
ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ
ಹಣದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತ:ಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ರಕ್ಕಮುಗಳಿಗೆ ಸೂಕ್ತ ಅವಕಾಶ ಕಲ್ಪಿಸಿರುವದರ ಬಗ್ಗೆ ಹಾಗೂ ಹಣದುರುಪಯೋಗದ ರಕ್ಕಮನ್ನು ವಸೂಲಿಸುವ ಕುರಿತು ಕೈಕೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ
ಹಣದುರುಪಯೋಗದ ರಕ್ಕಮನ್ನು ವಸೂಲಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಷಿಸುವುದು.	ಅನ್ವಯಿಸುವುದಿಲ್ಲ
ಕೇಂದ್ರ ಕಛೇರಿ ಸುತ್ತೋಲೆ ಸಂಖ್ಯೆ.ಲೆಪಶಾ–1/ಇತರೆ/ಲೆಪನೆ/16/2016–17 ದಿನಾಂಕ 23.02.2017 ರ ಹಾಗೂ ನಿರ್ದೇಶನಗಳಂತೆ ಹಣದುರುಪಯೋಗವುಳ್ಳ ವರದಿಗಳನ್ನು ಲೆಕ್ಕ ಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಕೊಂಡು, ಅವರು ಸೂಚಿಸಿರುವ ಎಲ್ಲಾ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಷಿಸುವುದು.	ಅನ್ವಯಿಸುವುದಿಲ್ಲ

29) ನಿಬಂಧಕರ ಆದೇಶಗಳ ಅನುಪಾಲನೆ

ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ?	ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಸ್ಥೆಯ ಮೇಲೆ ಕಲಂ 64 ರ ಅನ್ವಯ ವಿಚಾರಣೆ ನಡೆದಿರುವುದಿಲ್ಲ.

ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65 ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ?	ಸಹಕಾರ ಸಂಘಗಳ ಕಾಯ್ದೆ ಕಲಂ 65 ರ ಪರಿವೀಕ್ಷಣೆ ನಡೆದಿರುವುದಿಲ್ಲ.
ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ನಿವಾರಿಸಲು ನಿಭಂದಕರಿಂದ ಕಲಂ 68 ರ ಅಡಿ ಆದೇಶ ಜಾರಿಯಾಗಿದೆಯೇ?	ಅನ್ವಯಿಸುವುದಿಲ್ಲ
ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತ:ಖ್ತೆಗಳಲ್ಲಿ ನಿಭಂದಕರ ಕಲಂ 68 ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ?	ಅನ್ವಯಿಸುವುದಿಲ್ಲ

ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು
(ಶೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ)

ಸಂಘದ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ	ಸಂಸ್ಥೆಯ ಉಪನಿಯಮ ಸಂಖ್ಯೆ 46 (1) ರ ರೀತ್ಯಾ ಬ್ಯಾಂಕಿನ ವ್ಯವಸ್ಥಾಪನೆಯ ಅಧಿಕಾರವು ಕಾಯ್ದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ರ ಚಿ ಸ ಲಾ ದ 15 (ಹ ದಿ ನೈ ದು) ಜನ ನಿರ್ದೇಶಕರನ್ನೊಳಗೊಂಡ ಮಂಡಳಿಗೆ ಇರುತ್ತದೆ.
ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ	ಆಡಳಿತ ಮಂಡಳಿ ನಿರ್ದೇಶಕರುಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಸದಸ್ಯರಿಗೆ, ಒಂದು ಸ್ಥಾನವನ್ನು ಪರಿಶಿಷ್ಟ ವರ್ಗಗಳಿಗೆ ಸೇರಿದ ಸದಸ್ಯರಿಗೆ, ಎರಡು ಸ್ಥಾನಗಳನ್ನು ಮಹಿಳಾ ವರ್ಗದ ಸದಸ್ಯರಿಗೆ ಮತ್ತು ಎರಡು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರಿಸಿದೆ.
	ದಿನಾಂಕ 05.01.2025 ರಂದು ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿಗೆ ಚುನಾವಣೆ ನಡೆದಿದ್ದು ಮೀಸಲಾತಿಗನುಗುಣವಾಗಿ ಕೆಳಕಂಡ ನಿರ್ದೇಶಕರು ಚುನಾಯಿತರಾಗಿರುತ್ತಾರೆ.

ಸಾಮಾನ್ಯ ಸ್ಥಾನ
ಶ್ರೀ. ಆವಲಹಳ್ಳಿ ಚಂದ್ರಪ್ಪ.ಆರ್
ಡಾ॥ ದೇವರಾಜ್.ಟಿ.ಎಂ
ಶ್ರೀ. ಆಂಜನಪ್ಪ
ಶ್ರೀ. ಕೃಷ್ಣಪ್ಪ.ಕೆ
ಶ್ರೀ. ಚಿಕ್ಕಣ್ಣಯ್ಯ ಕೆ.ಸಿ.
ಶ್ರೀಮತಿ. ಪಂಕಜ ಹನುಮಂತಯ್ಯ
ಶ್ರೀ. ರಾಧಕೃಷ್ಣ ಎನ್
ಶ್ರೀ. ರಘುನಾಥ್.ಸಿ

	ಶ್ರೀ. ಸುರೇಶ್ .ಕೆ.ಪಿ ಹಿಂದುಳಿದ ಪ್ರವರ್ಗ 'ಎ' ಮೀಸಲು ಸ್ಥಾನ ಶ್ರೀ. ಬಸವರಾಜು (ಅವಿರೋಧ ಆಯ್ಕೆ) ಹಿಂದುಳಿದ ಪ್ರವರ್ಗ 'ಬಿ' ಮೀಸಲು ಸ್ಥಾನ ಶ್ರೀ. ನಾರಾಯಣಪ್ಪ ಬಿ.ಆರ್. (ಅವಿರೋಧ ಆಯ್ಕೆ) ಮಹಿಳಾ ಮೀಸಲು ಸ್ಥಾನ ಶ್ರೀಮತಿ. ಅಶ್ವಿನಿ ಸತೀಶ್ ಕುಮಾರಿ. ಮೀನಾಕುಮಾರಿ .ಕೆ.ಪಿ ಪರಿಶಿಷ್ಟ ಜಾತಿ ಮೀಸಲು ಸ್ಥಾನ ಶ್ರೀ. ವೆಂಕಟೇಶ್ ಪರಿಶಿಷ್ಟ ಪಂಗಡ ಮೀಸಲು ಸ್ಥಾನ ಶ್ರೀ. ಹನುಮಂತಪ್ಪ .ಟಿ.ವಿ ವರದಿ ಸಾಲಿನಲ್ಲಿ ವೃತ್ತಿಪರ ನಿರ್ದೇಶಕರುಗಳಾಗಿ ಶ್ರೀ ಕೆ.ಶಿವಣ್ಣ, B.com., L.L.B., C.A.I.I.B, ನಿವೃತ್ತ ಚೀಫ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ರವರು ಮತ್ತು ಶ್ರೀ. ಯತೀಶ್, LLB., ವಕೀಲರುಗಳು ಕಾರ್ಯವೆಸಗಿರುತ್ತಾರೆ.
ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ	ಪ್ರಸ್ತುತ ಆಡಳಿತ ಮಂಡಳಿಯು ದಿನಾಂಕ 05.01.2025 ರಿಂದ ಕಾರ್ಯನಿರ್ವಹಿಸುತ್ತಿದೆ.
ಮಂಡಳಿಯ ಅವಧಿ	ಬ್ಯಾಂಕಿನ ಉಪನಿಯಮ ಸಂಖ್ಯೆ 47 ರ ಪ್ರಕಾರ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಪದಾವಧಿಯ ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರುತ್ತದೆ.
ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ	ಖಾಲಿ ಇರುವುದಿಲ್ಲ

ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (BOM)

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ.DOR(PCB) BPD.CIR.No.8/12.05.002.2021-22 ದಿನಾಂಕ.31.12.2019 ರಂತೆ ರೂ.100 ಕೋಟಿ ಮುಂಗಡ ಠೇವಣಿಗಳನ್ನು ಹೊಂದಿರುವ ಬ್ಯಾಂಕುಗಳು, ತಮ್ಮ ಬ್ಯಾಂಕಿನಲ್ಲಿ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಎಂಬ ಸಮಿತಿಯನ್ನು ರಚಿಸಿ ಕಾರ್ಯಗತಗೊಳಿಸುವುದನ್ನು ಕಡ್ಡಾಯ ಮಾಡಿದ ಹಿನ್ನಲೆಯಲ್ಲಿ ದಿನಾಂಕ 20.12.2020 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಅವಶ್ಯ ಬೈಲಾ ತಿದ್ದುಪಡಿಗಳನ್ನು ಮಂಡಿಸಿ ಅನುಮೋದನೆ ಪಡೆದು, ನಂತರದಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ರವರಿಂದ ಬೈಲಾ ತಿದ್ದುಪಡಿಗೆ ಅಂಗೀಕಾರ ಪಡೆದಿದೆ.

ಬೈಲಾ ತಿದ್ದುಪಡಿಗಳನ್ವಯ ಭಾರತೀಯ ರಿಸರ್ವ್ ಬ್ಯಾಂಕಿನವರು ಸೂಚಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಹಾಗೂ ನುರಿತ ಅನುಭವ ಹೊಂದಿರುವ ಆರು ಸದಸ್ಯರನ್ನು ಒಳಗೊಂಡ (ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯನ್ನು ಹೊರತು ಪಡಿಸಿ) ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (BOM) ಹೊಂದಿರಬೇಕಿದ್ದು 2024–25 ರ ಸಾಲಿನಲ್ಲಿ ಕೆಳಕಂಡ ಸದಸ್ಯರುಗಳುಳ್ಳ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (BOM) ಕಾರ್ಯ ನಿರ್ವಹಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಆಡಳಿತ / ವ್ಯವಸ್ಥಾಪನಾ ಮಂಡಳಿ ಸದಸ್ಯರು

1. **Sri. Raghunath C,** BAL LLB, Chairman
   Director of this bank since 23.05.2011 and Practicing Advocate
2. **Sri. Shivanna K,** B.Com., LLB., C.A.I.I.B, Member
   Retd. Chief Manager (SBM) SBI.
   Co-opted Professional Director of this bank since 21.11.2014.
3. **Sri. Muniraju R,** BSc., LLB, Member
   Director in Sri Vayutanaya Co-operative Society Ltd., Bangalore
4. **Smt. Hampana C,** B.E., in Information Science Member
   Intern in BARICODE Company. (ದಿನಾಂಕ 04.01.2025 ರವರೆಗೆ)
   Asst. Professor & Academic Coordinator at "Trisha PU College".
   Lecturer at BES Institute of Technology.
5. **Smt. Chaitra .M.T** Member
   BE in Information Sceince (ದಿನಾಂಕ 20.01.2025 ರಿಂದ)
   MBA
   Sr. Customer Success Manager
   Sprinter India Pvt., Ltd., Bangalore
6. **Sri. Yathish B.,** LLB,
   Practicing Advocate Member
7. **Sri. Arunkumar .R,** B.Com.,
   MBA in Finance Member
8. **Sri. Manjunatha .P,** B.Com., ADCB
   General Manager (I/c)
   Non-Voting Member

ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ :

ಬಿ) ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕರ ಮಂಡಳಿ ನಡೆಸಿದ ಸಭೆಗಳ ಸಂಖ್ಯೆ :

ಪ್ರಸಕ್ತ ವರದಿ ಸಾಲಿನಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ 27 ಸಭೆಗಳು ಮತ್ತು ಈ ಕೆಳಗೆ ವಿವರಿಸಿರುವಂತೆ ಆಡಳಿತ ಮಂಡಳಿಯು ನೇಮಿಸಲ್ಪಟ್ಟಿರುವ ವಿವಿಧ ಉಪಸಮಿತಿಯ 54 ಸಭೆಗಳು ನಡೆದಿದೆ.

ಕ್ರ. ಸ.	ಉಪಸಮಿತಿಯ ಹೆಸರು	ನಡೆಸಿದ ಸಭೆಗಳು
1	ಕಂಪ್ಯೂಟರೀಕರಣ ಅಳವಡಿಕೆಗಾಗಿ ಉಪಸಮಿತಿ	5
2	ಪೀಠೋಪಕರಣ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಉಪಸಮಿತಿ	4
3	ಸುಸ್ತಿ ಸಾಲಗಳ ವಸೂಲಾತಿಗಾಗಿ ಉಪಸಮಿತಿ	11
4	ಲೆಕ್ಕ ಪರಿಶೋಧನಾ ಉಪಸಮಿತಿ	9
5	ಉದ್ದೇಶ ಪೂರ್ವ ಸಾಲ ಸುಸ್ತಿದಾರರ ಗುರುತಿಸುವುದಕ್ಕೆ ಉಪಸಮಿತಿ	1
6	ವ್ಯವಸ್ಥಾಪನಾ ಉಪಸಮಿತಿ	23
7	OTS ಗೆ ಸಂಬಂಧಿಸಿದಂತೆ ಸಲಹಾ ಸಮಿತಿ	1
	ಒಟ್ಟು	**54**

ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ	ಮಂಡಳಿಗಳ ಸಭೆ ಮತ್ತು ಉಪಸಮಿತಿ ಸಭೆಗಳ ಸಂಬಂಧದಲ್ಲಿ ನಿರ್ದೇಶಕರುಗಳ ಮತ್ತು ವ್ಯವಸ್ಥಾಪನಾ ಸಮಿತಿ ಸದಸ್ಯರುಗಳ ಸಭಾ ಭತ್ಯೆ ಹಾಗೂ ತಿರುಗಾಟ ಭತ್ಯೆಗಳಿಗೆ ರೂ. 22,17,600.00 ಗಳು ಮತ್ತು ಸಭೆಯ ವೆಚ್ಚಗಳಿಗೆ ರೂ. 2,94,931.00 ಗಳು ಖರ್ಚಾಗಿರುತ್ತದೆ.
ನಿರ್ದೇಶಕರ ತರಬೇತಿ ಕಾರ್ಯಕ್ರಮಗಳ ವಿವರ	ಸಂಸ್ಥೆಯ ಅಧ್ಯಕ್ಷರು ಮತ್ತು ನಿರ್ದೇಶಕರುಗಳು ಕರ್ನಾಟಕ ರಾಜ್ಯ ಸಹಕಾರ ಮಂಡಳ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನವರು ನಡೆಸಿರುವ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗಿರುತ್ತಾರೆ.
ನಿರ್ದೇಶಕರ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ	ಈ ಸಂಬಂಧದಲ್ಲಿ ತರಬೇತಿ ವೆಚ್ಚಗಳನ್ನು ಸಂಸ್ಥೆಯು ಭರಿಸಿರುವುದಿಲ್ಲ.
ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ	ಆಡಳಿತ ಮಂಡಳಿ ಸಭೆಗಳಲ್ಲಿ ಸದಸ್ಯತ್ವ ನೊಂದಾವಣೆ, ಸಾಲ ಮಂಜೂರಾತಿ, ಶಾಖಾಧಿಕಾರಿಗಳು/ ಪ್ರಧಾನ ವ್ಯವಸ್ಥಾಪಕರುಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಮಂಜೂರು ಮಾಡಿದ ಸಾಲಗಳ ಖಾಯಂಗೊಳಿಸುವಿಕೆ, ಆರ್ಥಿಕ ತ:ಖ್ತೆಗಳು, ಸುಸ್ತಿ ಸಾಲ / ಅನುತ್ಪಾದಕ ಸಾಲ ವಸೂಲಾತಿ ವಿವರಗಳು, ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳು, ಠೇವಣಿ / ಸಾಲಗಳ ಬಡ್ಡಿ ನಿಗದಿ, ನಗದು ಅನುಪಾತ ಮತ್ತು ವಿನಿಯೋಗಗಳ ಖಾಯಂಗೊಳಿಸುವಿಕೆ ಇತ್ಯಾದಿ ವಿಷಯಗಳನ್ನು ಚರ್ಚಿಸುವ ಸಂಪ್ರದಾಯವಿರುತ್ತದೆ.

(30) ಸಂಘದ ಆಡಳಿತ ನಿರ್ದೇಶಕರು ಮತ್ತು ವ್ಯವಸ್ಥಾಪನಾ ಸಮಿತಿ ಸಭಾ ಹಾಜರಾತಿ

ನಿರ್ದೇಶಕರ ಹೆಸರು	ಹುದ್ದೆ	ಹಾಜರಾದ ಸಭೆಗಳ ಸಂಖ್ಯೆ	ಸಂಭಾವನೆ (ಸಭಾ ಭತ್ಯೆ ಮತ್ತು ತಿರುಗಾಟ ಭತ್ಯೆ)
ಆವಲಹಳ್ಳಿ ಚಂದ್ರಪ್ಪ .ಆರ್	ಅಧ್ಯಕ್ಷರು	57	1.82.400.00
ಡಾ॥ ದೇವರಾಜ್. ಟಿ ಎಂ	ಉಪಾಧ್ಯಕ್ಷರು	37	1.18.400.00
ಆಂಜನಪ್ಪ	ನಿರ್ದೇಶಕರು	23	73.600.00
ಕೃಷ್ಣಪ್ಪ ಕೆ.	ನಿರ್ದೇಶಕರು	31	99.200.00
ನಾರಾಯಣಪ್ಪ ಬಿ.ಆರ್.	ನಿರ್ದೇಶಕರು	35	1,12,000.00
ಚಿಕ್ಕಣ್ಣಯ್ಯ ಕೆ.ಸಿ.	ನಿರ್ದೇಶಕರು	28	89,600.00
ರಾಧಾಕೃಷ್ಣ ಎನ್.	ನಿರ್ದೇಶಕರು	36	1,15,200.00
ರಘುನಾಥ್ ಸಿ.	ನಿರ್ದೇಶಕರು	54	1,72,800.00

ಸುರೇಶ್ ಕೆ.ಪಿ	ನಿರ್ದೇಶಕರು	31	99,200.00
ಬಸವರಾಜು	ನಿರ್ದೇಶಕರು	31	99,200.00
ಮೀನಾಕುಮಾರಿ ಕೆ.ಪಿ.	ನಿರ್ದೇಶಕರು	38	1,21,600.00
ವಿಜಯ ಜಿ.ಎಸ್	ನಿರ್ದೇಶಕರು	27	86,400.00
ಹನುಮದಾಸಯ್ಯ	ನಿರ್ದೇಶಕರು	14	44,800.00
ಶಿವಣ್ಣ .ಕೆ	ನಿರ್ದೇಶಕರು	59	1,88,800.00
ಪಂಕಜ ಹನುಮಂತಯ್ಯ	ನಿರ್ದೇಶಕರು	26	83,200.00
ಹನುಮಂತಪ್ಪ ಟಿ ವಿ	ನಿರ್ದೇಶಕರು	35	1,12,000.00
ಯತೀಶ್.ಬಿ	ನಿರ್ದೇಶಕರು	53	1,69,800.00
ಶ್ರೀ.ಆಂಜನಪ್ಪ (ದಿನಾಂಕ 05.01.2025 ರಿಂದ)	ನಿರ್ದೇಶಕರು	9	28,800.00
ಶ್ರೀಮತಿ.ಅಶ್ವಿನಿ ಸತೀಶ್ (ದಿನಾಂಕ 05.01.2025 ರಿಂದ)	ನಿರ್ದೇಶಕರು	10	32,000.00
ಶ್ರೀ.ವೆಂಕಟೇಶ್ (ದಿನಾಂಕ 05.01.2025 ರಿಂದ)	ನಿರ್ದೇಶಕರು	10	32,000.00
ಹಂಪನ.ಸಿ	ವ್ಯವಸ್ಥಾಪನಾ ಸಮಿತಿ ಸದಸ್ಯರು	17	54,400.00
ಅರುಣ್‌ಕುಮಾರ್.ಆರ್	ವ್ಯವಸ್ಥಾಪನಾ ಸಮಿತಿ ಸದಸ್ಯರು	18	57,600.00
ಶ್ರೀ.ಮುನಿರಾಜ್	ವ್ಯವಸ್ಥಾಪನಾ ಸಮಿತಿ ಸದಸ್ಯರು	9	28,800.00
ಶ್ರೀಮತಿ. ಚೈತ್ರ.ಎಂ.ಟಿ (ದಿನಾಂಕ 20.01.2025 ರಿಂದ)	ವ್ಯವಸ್ಥಾಪನಾ ಸಮಿತಿ ಸದಸ್ಯರು	5	16,000.00
		ಒಟ್ಟು	**22,17,600.00**

ಮಂಡಳಿ, ಸಮಿತಿಗಳು ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ

ಮಂಡಳಿಯು/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆಯೇ?	ಸಂಸ್ಥೆಯು ಆಡಳಿತ ಮಂಡಳಿ ಮತ್ತು ಉಪಸಮಿತಿ ಸಭೆಗಳನ್ನು ಅವಶ್ಯಕತೆ ಮತ್ತು ಕಾಲಗಳಿಗನುಸಾರವಾಗಿ ನಡೆಸುತ್ತಿರುವುದು ಕಂಡು ಬಂದಿದೆ.
ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ?	ಹೌದು
ಮಂಡಳಿಯ/ಸಮಿತಿಗಳ ಸಭೆಗಳ ನಡವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ	ಸಭೆಗಳ ನಡವಳಿಗಳನ್ನು ದಾಖಲಿಸಿ ಪ್ರಧಾನ ವ್ಯವಸ್ಥಾಪಕರು ಮತ್ತು ಸಭಾಧ್ಯಕ್ಷರ ಸಹಿಯನ್ನು ಪಡೆಯಲಾಗುತ್ತಿದೆ.

ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ

ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೇ?	ಸಂಸ್ಥೆಯ ನಿರ್ದೇಶಕರುಗಳು ಠೇವಣಿ ಆಧಾರ ಸಾಲ ಹೊರತುಪಡಿಸಿ ಇತರೆ ಯಾವುದೇ ಸಾಲ ಸೌಲಭ್ಯ ಪಡೆದಿರುವುದಿಲ್ಲ.
ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೆ?	ಸಂಸ್ಥೆಯ ಎಲ್ಲಾ ನಿರ್ದೇಶಕರುಗಳು ಬೈಲಾ ನಿಯಮಗಳನ್ವಯ ಕನಿಷ್ಟ ವ್ಯವಹಾರ ನಡೆಸಿರುತ್ತಾರೆ.
ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ	ನಿರ್ದೇಶಕರು ಅಥವಾ ಅವರ ಕುಟುಂಬದವರು ತಮ್ಮ ವೈಯಕ್ತಿಕ ಠೇವಣಿ ಆಧಾರ ಸಾಲ ಹೊರತುಪಡಿಸಿ ಇತರೆ ಯಾವುದೇ ಸಾಲ ಪಡೆದಿರುವುದಿಲ್ಲ.
ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ	ಜಾಮೀನು ನೀಡಿರುವುದಿಲ್ಲ.
ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ	ಅನ್ವಯಿಸುವುದಿಲ್ಲ.

31) ವಾರ್ಷಿಕ ಸಾಮಾನ್ಯ ಸಭೆ

ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ	2023–2024 ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 2024 ನೇ ಸೆಪ್ಟಂಬರ್ 15ನೇ ತಾರೀಖಿನಂದು ನಡೆಸಿರುತ್ತಾರೆ. ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರುಗಳ ಸ್ಥಾನಕ್ಕೆ ದಿನಾಂಕ 05.01.2025 ರಂದು ಚುನಾವಣೆ ನಡೆದಿರುತ್ತದೆ.
ಸಂಘದ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ	ಸಂಸ್ಥೆಯ ಬೈಲಾ ಸಂಖ್ಯೆ 41 ರನ್ವಯ ಸಾಮಾನ್ಯ ಸಭೆಯ ಅವಶ್ಯಕ ಸಂಖ್ಯೆ (ಕೋರಂ) ಮತ ನೀಡಲು ಅರ್ಹತೆ ಇರುವ ಒಟ್ಟು ಸದಸ್ಯರ ಪೈಕಿ ಒಂದು ಸಾವಿರ ಸದಸ್ಯರು ಅಥವಾ ಶೇಕಡ ಹತ್ತರಷ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರ ಹಾಜರಾತಿಯು ಸಾಮಾನ್ಯ ಸಭೆಯ ಸಭಾವಶ್ಯಕ ಸಂಖ್ಯೆ (ಕೋರಂ) ಆಗಿರುತ್ತದೆ.
ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ	13807 ಸದಸ್ಯರು
ಸಭಾ ನಡಾವಳಿಗಳ ಪರಿಶೀಲನೆ ಬಗ್ಗೆ ಟಿಪ್ಪಣಿ	ಸಭೆಯ ನಡವಳಿಕೆಗಳನ್ನು ಪರಿಶೀಲಿಸಲಾಗಿದ್ದು, ಸಭೆಯು 2023–24 ರ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅನುಮೋದಿಸುವುದರೊಂದಿಗೆ 2024–25 ರ ಸಾಲಿನ ಆಯವ್ಯಯ ಅನುಮೋದನೆ, 2023–24 ರ ಸಾಲಿನ ನಿವ್ವಳ ಲಾಭ ವಿಲೇವಾರಿ, ಶಾಸನಬದ್ಧ

	ಲೆಕ್ಕ ಪರಿಶೋಧಕರ ನೇಮಕ ಖಾಯಂಗೊಳಿಸುವಿಕೆ, ಇತ್ಯಾದಿ ವಿಷಯಗಳನ್ನು ಚರ್ಚಿಸಿ ತೀರ್ಮಾನಗಳನ್ನು ದಾಖಲಿಸಿರುವುದನ್ನು ಗಮನಿಸಿದೆ.
ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯವ್ಯಯ ಪತ್ರದ ಮಿತಿಗಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆಯೇ? ವಿವರಿಸಿ	2023–24 ರ ಸಾಲಿನಲ್ಲಿ ಅಂದಾಜು ಆಯವ್ಯಯ ಪತ್ರದ ಮಿತಿಗಿಂತ ಯಾವುದೇ ವೆಚ್ಚ ಬಾಬ್ತುನಲ್ಲಿ ಹೆಚ್ಚು ಖರ್ಚು ಮಾಡಿರುವುದಿಲ್ಲ.
ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ?	2024–25 ಮತ್ತು 2025–26 ನೇ ಸಾಲುಗಳಿಗೆ ಸಂಬಂಧಿಸಿದಂತೆ ಅಂದಾಜು ಆಯವ್ಯಯ ಮಂಡಿಸಿ ಅನುಮೋದನೆ ಪಡೆಯಲಾಗಿದೆ.
ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ?	ಅನುಮೋದನೆ ಪಡೆಯಲಾಗಿದೆ.

ಸದರಿ ಸಭೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆಯೇ? ನೇಮಕ ಮಾಡಿದಲ್ಲಿ ಲೆಕ್ಕ ಪರಿಶೋಧಕರ ಹೆಸರು/ಪದನಾಮ ಹಾಗೂ ಠರಾವಿನ ಕ್ರಮಾಂಕ ಹಾಗೂ ವಾರ್ಷಿಕ ಮಹಾಸಭೆಯ ದಿನಾಂಕ ಹಾಗೂ ಜಿಲ್ಲಾ ಉಪನಿರ್ದೇಶಕರಿಗೆ ವರದಿಸಿದ ದಿನಾಂಕ	2024–25 ರ ಸಾಲುಗಳಿಗೆ ಶಾಸನಬದ್ಧ ಲೆಕ್ಕ ಪರಿಶೋಧನೆ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯೊಂದಿಗೆ M/s. BPSSY & Co., Bangalore, Chartered Accountant ನೇಮಕ ಮಾಡಲು ತೀರ್ಮಾನಿಸಿರುವುದನ್ನು ಖಾಯಂಗೊಳಿಸುವಿಕೆಯನ್ನು ಸರ್ವಸದಸ್ಯರ ಸಭೆ ಮುಂದೆ ಮಂಡಿಸಲು ಮಹಾಸಭೆಯು ಬಹುಮತದಿಂದ ಅನುಮೋದನೆ ನೀಡಿದೆ.
ವಾರ್ಷಿಕ ಸಭೆಯ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ	ವಾರ್ಷಿಕ ಸಭೆಯ ನಡವಳಿಗಳನ್ನು ದಾಖಲಿಸಿ ಪ್ರಧಾನ ವ್ಯವಸ್ಥಾಪಕರು ಮತ್ತು ಅಧ್ಯಕ್ಷರು ಸಹಿ ಮಾಡಿರುತ್ತಾರೆ.

32	**1**	**ಸಿಬ್ಬಂದಿ ವರ್ಗ** **ಸಂಘದಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ**

ಕರ್ನಾಟಕ ರಾಜ್ಯ ಸರ್ಕಾರದಿಂದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಪಟ್ಟಣ ಬ್ಯಾಂಕುಗಳ ವಿಭಾಗ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಮತ್ತು ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ವಿಭಾಗ, ಬೆಂಗಳೂರು ಈ ಕಛೇರಿಗಳಿಂದ ವಿವಿಧ ಆದೇಶಗಳ ಮೂಲಕ ಆಗಾಗ್ಗೆ ಹೊರಡಿಸಿದ ಆದೇಶಗಳಂತೆ ಸಂಸ್ಥೆಯು 225 ಹುದ್ದೆಗಳನ್ನು ಮಂಜೂರಾತಿ ಪಡೆದುಕೊಂಡಿದೆ. ಸಂಸ್ಥೆಯು ನಂತರದ ದಿನಗಳಲ್ಲಿ ತೆರೆಯಲಾಗಿರುವ ಬೆಂಗಳೂರು ನಗರದ ಜ್ಞಾನಜ್ಯೋತಿನಗರ, ಹೆಚ್.ಆರ್.ಬಿ.ಆರ್. ಲೇಔಟ್, ಕೃಷ್ಣರಾಜಪುರಂ ಮತ್ತು ರಾಮನಗರ ಜಿಲ್ಲಾ ಕೇಂದ್ರ ಶಾಖೆಗಳಿಗೆ ಸಂಬಂಧಿಸಿದಂತೆ ಅವಶ್ಯಕ ಸಿಬ್ಬಂದಿ ಒದಗಿಸುವ ಸಲುವಾಗಿ ಕರ್ನಾಟಕ ಸಹಕಾರ ಸಂಘಗಳ ನಿಯಮ, 1960 ನಿಯಮ ಸಂಖ್ಯೆ 17 ರನ್ವಯ ಸರ್ವಸದಸ್ಯರ ಸಭೆಯ ಅಯವ್ಯಯ ಮಂಜೂರಾತಿಯ ಮಿತಿಗೊಳಪಟ್ಟು ಅಧಿಕ 31 ಹುದ್ದೆಗಳನ್ನು ಸೃಷ್ಟಿಸಲು ದಿನಾಂಕ 22.09.2013 ರ ಸರ್ವಸದಸ್ಯರ ಸಭೆ ಮತ್ತು ಆಡಳಿತ ಮಂಡಳಿಯು ಕರ್ನಾಟಕ ಸರ್ಕಾರ ಅಧಿಸೂಚನೆಗಳನ್ವಯ ಹೊಂದಿರುವ ಅಧಿಕಾರ ಉಪಯೋಗಿಸಿ ತೀರ್ಮಾನಿಸಿರುತ್ತದೆ. ಹಾಗೆಯೇ ನೂತನ ಶಾಖೆಗಳಾದ ಟಿ.ದಾಸರಹಳ್ಳಿ ಶಾಖೆ, ಹೊಸೂರು ರಸ್ತೆ–ಎಲೆಕ್ಟ್ರಾನಿಕ್ ಸಿಟಿ ಶಾಖೆ, ಯಲಹಂಕ ಶಾಖೆ, ಕುವೆಂಪುನಗರ–ಮೈಸೂರು ಶಾಖೆ ಮತ್ತು ಅಂಜನಾನಗರ ಶಾಖೆಗಳಿಗೆ ಸಂಬಂಧಿಸಿದಂತೆ ಒಟ್ಟು 30 ಹುದ್ದೆಗಳನ್ನು ಸೃಷ್ಟಿಸಲು ಆಡಳಿತ ಮಂಡಳಿ ಮತ್ತು ಸರ್ವಸದಸ್ಯರ ಸಭೆಯು ದಿನಾಂಕ: 25–09–2016 ರ ಸಭೆಯಲ್ಲಿ ತೀರ್ಮಾನಿಸಿದೆ. ಬ್ಯಾಂಕಿನ 22ನೇ

ಶಾಖೆಯನ್ನು ಕೋಣನಕುಂಟೆಯಲ್ಲಿ ಪ್ರಾರಂಭಿಸುವ ಹಿನ್ನಲೆಯಲ್ಲಿ ಸದರಿ ಶಾಖೆಗೆ 5 ಹುದ್ದೆಗಳ ಅವಶ್ಯಕತೆ ಇರುವುದನ್ನು ಪ್ರಸ್ತಾಪಿಸಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಸಲ್ಲಿಸಿದ ಮನವಿಯನ್ನು ಪರಿಗಣಿಸಿದ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಸಿಬಿ.116.ಸಿಸಿಬಿ.2017, ದಿನಾಂಕ 31.08.2017 ರಲ್ಲಿ ಕೋಣನಕುಂಟೆ ಶಾಖೆಗೆ ಸಂಬಂಧಿಸಿದಂತೆ 5 ಹುದ್ದೆಗಳನ್ನು ಮಂಜೂರು ಮಾಡಿದೆ.

ಈ ಆದೇಶಗಳ ಮೂಲಕ ಮಂಜೂರಾದ ವಿವಿಧ ಹುದ್ದೆಗಳ ಒಟ್ಟು ಸಂಖ್ಯೆಯು 291 ಆಗಿರುತ್ತದೆ. ಸಂಸ್ಥೆಯಲ್ಲಿ ಸಾಲಾಂತ್ಯ ದಿನಾಂಕ 31.03.2025ಕ್ಕೆ ಹಾಲಿ 225 ಜನ ಖಾಯಂ ಸಿಬ್ಬಂದಿ ವರ್ಗದವರು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬ್ಯಾಂಕಿನಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವಿವಿಧ ಹುದ್ದೆಗಳ ವಿವರ ಅವರ ಹುದ್ದೆಗನುಸಾರವಾಗಿ ಮಂಜೂರಾಗಿರುವ ವೇತನ ಶ್ರೇಣಿ ಹಾಗೂ ಪಡೆಯುತ್ತಿರುವ ಮೂಲ ವೇತನ ಇತ್ಯಾದಿ ಎಲ್ಲಾ ಮಾಹಿತಿಗಳುಳ್ಳ ವಿವರವಾದ ತ:ಖ್ತೆಯನ್ನು ಲಗತ್ತಿಸಿದೆ. ಬ್ಯಾಂಕು ಹೊಂದಿರುವ ಹುದ್ದೆಗಳ ಸಂಖ್ಯೆ ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆಯ ವಿವರಗಳು ಈ ರೀತಿಯಾಗಿರುತ್ತದೆ.

ಕ್ರಮ ಸಂಖ್ಯೆ	ಹುದ್ದೆಗಳ ಹೆಸರು	ಮಂಜೂರಾತಿ ಪಡೆದಿರುವ ಹುದ್ದೆಗಳ ಸಂಖ್ಯೆ	ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ		ಖಾಲಿ ಇರುವ ಹುದ್ದೆಗಳ ಸಂಖ್ಯೆ
			ರೆಗ್ಯೂಲರ್	ಇನ್‌ಚಾರ್ಜ್ ವ್ಯವಸ್ಥೆ	
1	ಪ್ರಧಾನ ವ್ಯವಸ್ಥಾಪಕರು	1	–	1	–
2	ಉಪಪ್ರಧಾನ ವ್ಯವಸ್ಥಾಪಕರು	2	2	–	–
3	ಸಹಾಯಕ ಪ್ರಧಾನ ವ್ಯವಸ್ಥಾಪಕರು	4	4	–	–
4	ಶಾಖಾ ವ್ಯವಸ್ಥಾಪಕರು/ಲೆಕ್ಕ ಲೇಖಕರು / ಆಂತರಿಕ ಲೆಕ್ಕ ಪರಿಶೋಧಕರು	30	21	7	2
5	ಸಹಾಯಕ ಲೆಕ್ಕ ಲೇಖಕರು	35	16	11	8
6	ಹಿರಿಯ ಸಹಾಯಕರು	69	69	–	–
7	ಕಿರಿಯ ಸಹಾಯಕರು	101	57	–	44
8	ದಫೆದಾರ್	4	3	–	1
9	ಜವಾನರು / ವಾಹನ ಚಾಲಕರು	45	34	–	11
	ಒಟ್ಟು	**291**	**206**	**19**	**66**

ಸಂಸ್ಥೆಯ ಆಡಳಿತವು ಅವಶ್ಯಕತೆಗನುಗುಣವಾಗಿ ಪ್ರಧಾನ ವ್ಯವಸ್ಥಾಪಕರ ಹುದ್ದೆಯನ್ನು ಇಂಡಿಪೆಂಡೆಂಟ್ ಚಾರ್ಜ್ ವ್ಯವಸ್ಥೆಯಲ್ಲಿ ಏಳು ಸಹಾಯಕ ಲೆಕ್ಕ ಲೇಖಕರುಗಳನ್ನು ಶಾಖಾ ವ್ಯವಸ್ಥಾಪಕರು ಹುದ್ದೆಯಲ್ಲಿ ಮತ್ತು ಹನ್ನೊಂದು ಹಿರಿಯ ಸಹಾಯಕರನ್ನು ಸಹಾಯಕ ಲೆಕ್ಕ ಲೇಖಕರು ಹುದ್ದೆಯಲ್ಲಿ ಇನ್‌ಚಾರ್ಜ್ ವ್ಯವಸ್ಥೆಯಲ್ಲಿ ಆಯಾ ಹುದ್ದೆಯ ಜವಾಬ್ದಾರಿಗಳನ್ನು ನಿರ್ವಹಿಸಲು ನಿಯೋಜಿಸಿರುವುದು ಕಂಡು ಬಂದಿದೆ.

ಸಂಸ್ಥೆಯ ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿಯ ಗೃಹ ನಿರ್ವಹಣೆಗೆ ಸಂಬಂಧಿಸಿದಂತೆ ಐದು ಮಂದಿ ಕೆಲಸಗಾರರನ್ನು ಕ್ರಾಂಟ್ರಾಕ್ಟ್ ಆಧಾರದ ಮೇಲೆ ಮೆ॥ ವಿ ಅಂಡ್ ವಿ ಅಸೋಸಿಯೇಟ್ಸ್, ಬೆಂಗಳೂರು ರವರ ಮೂಲಕ ನೇಮಕಮಾಡಿಕೊಂಡಿದ್ದು, ಒಬ್ಬರಿಗೆ ಮಾಹೆಯಾನ ರೂ.19,172.30 ಗಳಂತೆ ವೆಚ್ಚ ಭರಿಸಲಾಗುತ್ತಿದೆ.

ಸಂಸ್ಥೆಯು ಸಿಬ್ಬಂದಿ ವರ್ಗಕ್ಕೆ ಬ್ಯಾಂಕಿನಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಹಂಚಿಕೆ ಮಾಡಿದ್ದು ಸದರಿ ಆದೇಶಗಳನ್ನು ಸಂಬಂಧಿಸಿದ ಸಿಬ್ಬಂದಿಯವರುಗಳಿಗೆ ಆಡಳಿತ ಕಛೇರಿ ಮತ್ತು ಶಾಖೆಗಳಲ್ಲಿ ನೀಡಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

	2	ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವ ಬಗ್ಗೆ	ಸಂಸ್ಥೆಯು ಆಡಳಿತ ಮಂಡಳಿಯು ತನ್ನ ಸಿಬ್ಬಂದಿಗಳಿಗೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ನೌಕರರ 9ನೇ ವೇತನ ಸಮಿತಿ ವರದಿ ಶಿಫಾರಸ್ಸಿನ ರೀತ್ಯಾ ಪರಿಷ್ಕೃತ ವೇತನ ಶ್ರೇಣಿಗಳ ಆರ್ಥಿಕ ಸೌಲಭ್ಯಗಳನ್ನು ದಿನಾಂಕ 01.07.2024 ರಿಂದ ಅನ್ವಯವಾಗುವಂತೆ ಮಂಜೂರು ಮಾಡಿದೆ. ಸಂಸ್ಥೆಯು ಸಿಬ್ಬಂದಿ ನೇಮಕಾತಿ ಹಾಗೂ ಸೇವಾ ನಿಯಮಾವಳಿಗಳನ್ನು ರಚಿಸಿಕೊಂಡಿದ್ದು ಸಹಕಾರ ಸಂಘಗಳ ನಿಬಂಧಕರುಗಳಿಂದ ಅನುಮೋದನೆ ಗೊಂಡಿದೆ ಮತ್ತು ಅಗತ್ಯ ಬದಲಾವಣೆಗಳನ್ನು ಆಡಳಿತ ಮಂಡಳಿಯು ತೀರ್ಮಾನದೊಂದಿಗೆ ಜಾರಿ ಮಾಡಿದೆ. ಸಂಸ್ಥೆಯು ಪ್ರತಿ ಸಿಬ್ಬಂದಿಗೆ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವುದು ಮತ್ತು ಸಿಬ್ಬಂದಿಯ ಸೇವಾ ವಿವರಗಳನ್ನು ದಾಖಲಿಸಿರುವುದು ಕಂಡು ಬಂದಿದೆ.
	3	ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ.	ಸಂಸ್ಥೆಯು ಪ್ರತಿ ಸಿಬ್ಬಂದಿಯ ಸೇವಾ ಪುಸ್ತಕ ನಿರ್ವಹಿಸಿರುವುದರೊಂದಿಗೆ ಅವರ ವೈಯಕ್ತಿಕ ಕಡತಗಳನ್ನು ನಿರ್ವಹಿಸಿರುವುದು ಮತ್ತು ಅದರಲ್ಲಿ ನೇಮಕಾತಿ ಆದೇಶ ಇತ್ಯಾದಿ ಇರಿಸಿರುವುದು ಕಂಡು ಬಂದಿದೆ.
	4	ಕಾರ್ಯನಿರ್ವಹಿಸುತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು	ವಿವರಗಳುಳ್ಳ ಪಟ್ಟಿಯನ್ನು ಲಗತ್ತಿಸಿದೆ.
	5	ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ	ಸಿಬ್ಬಂದಿ ಸೇವಾ ಒಳನಿಯಮಗಳ ಪ್ರಕಾರ ಹುದ್ದೆಗಳ ಜವಾಬ್ದಾರಿಗನುಸಾರವಾಗಿ ನಗದು ಭದ್ರತೆಯನ್ನು (ಸೆಕ್ಯೂರಿಟಿ ಡಿಪಾಸಿಟ್) ಸಂಸ್ಥೆಯವರು ನಿಗದಿಪಡಿಸಿ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಂದ ಪಡೆಯಲಾಗಿದೆ.
	6	ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು	ಸಿಬ್ಬಂದಿ ವರ್ಗದವರಿಗಾಗಿ ಭದ್ರತಾ ಸಿಬ್ಬಂದಿ ಒಳಗೊಂಡಂತೆ ಪ್ರಸಕ್ತ ಸಾಲಿನಲ್ಲಿ ಖರ್ಚಾಗಿರುವ ವೆಚ್ಚ ರೂ.39,37,46,198.90 ಗಳಾಗಿವೆ.
	7	ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡ ವೆಚ್ಚ	ವರದಿ ಸಾಲಿನಲ್ಲಿ ಭರಿಸಿರುವ ಸಿಬ್ಬಂದಿ ವೆಚ್ಚಗಳು ಒಟ್ಟು ಸರಾಸರಿ ದುಡಿಯುವ ಬಂಡವಾಳಗಳಿಗೆ ಶೇಕಡ 1.42 ರಷ್ಟಾಗುತ್ತದೆ.
	8	ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ	ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿಗಳು ನಡೆದಿರುವುದಿಲ್ಲ. ಪ್ರಧಾನ ವ್ಯವಸ್ಥಾಪಕರು ಹುದ್ದೆಯಿಂದ ನಿವೃತ್ತರಾದ ಒಬ್ಬರನ್ನು ದಿನಾಂಕ

		ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ/ ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು	01.02.2020 ರಿಂದ ಮುಖ್ಯ ಸಲಹೆಗಾರರಾಗಿ ಹನ್ನೊಂದು ತಿಂಗಳ ಅವಧಿಗೆ ನೇಮಿಸಿಕೊಂಡಿದ್ದು, ಅವಧಿ ಪೂರ್ಣಗೊಂಡ ನಂತರದಲ್ಲಿ ಪ್ರತಿ ಹನ್ನೊಂದು ತಿಂಗಳ ಅವಧಿಗೆ ಮರು ನೇಮಕ ವಾಗುವ ಮೂಲಕ ಮುಂದುವರೆದಿರುತ್ತಾರೆ.
	9	ಸಿಬ್ಬಂದಿ ಬೋನಸ್ ಪಾವತಿಯನ್ನು ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು.	ಬ್ಯಾಂಕು ಪ್ರಸಕ್ತ ವರದಿ ಸಾಲಿನ ಲೆಕ್ಕ ಪತ್ರಗಳಲ್ಲಿ ರೂ.1,97,37,701.00 ಗಳನ್ನು ಸಂಸ್ಥೆಯ ಸಿಬ್ಬಂದಿಯವರುಗಳಿಗೆ 2024–25 ರ ಸಾಲಿಗೆ ಎಕ್ಸ್‌ಗ್ರೇಷಿಯಾ ಪಾವತಿಸಲು ಅವಕಾಶ ಕಲ್ಪಿಸಿದೆ. ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮಗಳನ್ವಯ ಆಯಾ ಸಿಬ್ಬಂದಿಯ ಮೂಲ ವೇತನ ಮತ್ತು ತುಟ್ಟಿ ಭತ್ಯೆ ಮೊಬಲಗಿನ ಗರಿಷ್ಠ ಎರಡು ತಿಂಗಳ ಎಕ್ಸ್‌ಗ್ರೇಷಿಯಾವನ್ನು ಸಿಬ್ಬಂದಿಯವರಿಗೆ ಪಾವತಿಸಲು ಅವಕಾಶವಿದ್ದು 2024–25 ರ ಪ್ರಸಕ್ತ ಸಾಲಿಗೆ 30 ದಿನಗಳ ಮೊಬಲಗನ್ನು ಆಡಳಿತ ಮಂಡಳಿಯು ಮಂಜೂರಾತಿ ನೀಡಿದ್ದು ವರದಿ ಸಾಲಿನ ಲೆಕ್ಕ ಪತ್ರಗಳಲ್ಲಿ ಅವಕಾಶ ಮಾಡಿರುವುದು ಕಂಡು ಬಂದಿದೆ.
	10	ಷೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ?	ಲಗತ್ತಿಸಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತಿವೆ.
	11	ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ?	ದುಡಿಯುವ ಬಂಡವಾಳಕ್ಕೆ ಶೇಕಡವಾರು ಸಿಬ್ಬಂದಿ ವೆಚ್ಚಗಳು ನಿಬಂಧಕರು ವಿಧಿಸಿದ ಮಿತಿಯೊಳಗಿರುತ್ತವೆ.

ಸಿಬ್ಬಂದಿಗಳಿಗೆ ಮತ್ತು ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ :

ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ	ಸಂಸ್ಥೆಯು ಕರ್ನಾಟಕ ರಾಜ್ಯ ಸಹಕಾರ ಮಂಡಳ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಭಾರತೀಯ ರಿಸರ್ವ್ ಬ್ಯಾಂಕ್, ನ್ಯಾಫ್‌ಕಬ್ ಸಹಕಾರ ತರಬೇತಿ ಕೇಂದ್ರಗಳು ಇತ್ಯಾದಿಯವರುಗಳು ನಡೆಸುವ ಸಿಬ್ಬಂದಿ ತರಬೇತಿ ಶಿಬಿರಗಳಿಗೆ ಸಿಬ್ಬಂದಿಗಳನ್ನು ಕಳುಹಿಸುವ ಪದ್ಧತಿ ಇರಿಸಿಕೊಂಡಿದೆ. ಹಾಗೆಯೇ ತರಬೇತಿ ಪಡೆದ ವಿಷಯಗಳ ಬಗ್ಗೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಶಾಖಾ ವ್ಯವಸ್ಥಾಪಕರು ಮತ್ತು ಅಧಿಕಾರಿಗಳ ಸಭೆಯಲ್ಲಿ ಚರ್ಚಿಸುವ ಮೂಲಕ ಶಾಖಾಧಿಕಾರಿಗಳಿಗೆ ತಿಳಿಸುವುದು ನಂತರ ಶಾಖಾ ಮಟ್ಟದಲ್ಲಿ ಸಿಬ್ಬಂದಿ ಸಭೆ ನಡೆಸಿ ಎಲ್ಲಾ ಸಿಬ್ಬಂದಿಗಳಿಗೆ ತಿಳಿಸುವ ಪದ್ಧತಿ ಇರಿಸಿಕೊಂಡಿದೆ. ಇದರೊಂದಿಗೆ ಎಲ್ಲಾ ಸಿಬ್ಬಂದಿಗಳಿಗೆ ಬೈಲಾ, ಠೇವಣಿ ನಿಯಮಗಳು, ಗ್ರಾಹಕ ಸೇವೆ, ಬ್ಯಾಂಕಿಂಗ್ ಕಾಯಿದೆ ಇತ್ಯಾದಿ ವಿಷಯಗಳ ಬಗ್ಗೆ ನುರಿತ ತಜ್ಞರು / ಹಿರಿಯ ಅಧಿಕಾರಿಗಳಿಂದ ತರಬೇತಿ ಕಾರ್ಯಕ್ರಮ ಆಳವಡಿಸಿರುವುದು ಸಹ ಕಂಡು ಬಂದಿದೆ.

ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ	ವರದಿ ಸಾಲಿನಲ್ಲಿ ಸಿಬ್ಬಂದಿ ತರಬೇತಿ ವೆಚ್ಚಗಳು ರೂ.2,61,734.00 ಗಳನ್ನು ಸಂಸ್ಥೆಯು ಭರಿಸಿದೆ.
ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ	ಕಾರ್ಯಕ್ರಮ ನಡೆಸಿರುವುದಿಲ್ಲ.
ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ	ವೆಚ್ಚ ಭರಿಸಿರುವುದಿಲ್ಲ.

ಸಿಬ್ಬಂದಿಯ ಬಗ್ಗೆ ಇತರೆ ಅಂಶಗಳು :

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಂದ ಅನುಮೋದಿತಗೊಂಡ ಸಿಬ್ಬಂದಿ ನೇಮಕಾತಿ ಮತ್ತು ಸೇವಾ ನಿಯಮ 12.5 ರ ಪ್ರಕಾರ ಬ್ಯಾಂಕಿನ ಯಾವುದೇ ಸಿಬ್ಬಂದಿಯು ಸಂಸ್ಥೆಯಲ್ಲಿ ಪದೋನ್ನತಿ ಪಡೆಯದೇ ಒಂದೇ ಹುದ್ದೆಯಲ್ಲಿ ಹತ್ತು ವರ್ಷಗಳ ಸೇವೆ ಸಲ್ಲಿಸಿದ್ದಲ್ಲಿ ಅವರುಗಳಿಗೆ ಕಾಲಬದ್ಧವೇತನ ಶ್ರೇಣಿ ಮಂಜೂರು ಮಾಡುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಬ್ಯಾಂಕು ಸಿಬ್ಬಂದಿಗಳಿಗೆ ಪಾವತಿಸುವ ಒಟ್ಟು ಸಿಬ್ಬಂದಿಯ ಮೂಲ ವೇತನ ಮತ್ತು ತುಟ್ಟಿ ಭತ್ಯೆ ಮೇಲೆ ಶೇಕಡ 12 ರಂತೆ ಭವಿಷ್ಯ ನಿಧಿ ವಂತಿಕೆಯನ್ನು ಪಾವತಿಸುತ್ತಿದೆ. ಈ ಮೊಬಲಗಿನಲ್ಲಿ ಶೇಕಡ 8.33 ರಷ್ಟು ಗರಿಷ್ಠ ಮಿತಿ ರೂ. 1,250/– ಗಳಿಗೆ ಒಳಪಟ್ಟು ಮೊಬಲಗನ್ನು ಕೇಂದ್ರ ಸರ್ಕಾರದ ಕುಟುಂಬ ಪಿಂಚಣಿ ಯೋಜನೆ (Family Pension Scheme) ಅನ್ವಯ ಪ್ರಾದೇಶಿಕ ಭವಿಷ್ಯ ನಿಧಿ ಅಯುಕ್ತರ ಕಛೇರಿಯಲ್ಲಿರುವ ಸಿಬ್ಬಂದಿ ಕುಟುಂಬ ಪಿಂಚಣಿ ಯೋಜನೆ ಖಾತೆಗಳಿಗೆ ಪಾವತಿಸಿ ಮಿಕ್ಕ ಮೊಬಲಗು ಮತ್ತು ಉಳಿದ ಶೇಕಡ 3.67 ರಷ್ಟು ಮೊಬಲಗನ್ನು ಸಂಸ್ಥೆಯಲ್ಲಿ ರಚಿಸಿಕೊಂಡಿರುವ ಸಿಬ್ಬಂದಿಯವರ ಭವಿಷ್ಯ ನಿಧಿ ಟ್ರಸ್ಟ್‌ಗೆ ಪಾವತಿಸುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಬ್ಯಾಂಕಿನ ಸಿಬ್ಬಂದಿಯವರುಗಳಿಂದ ಅವರು ಪಡೆಯುವ ಮೂಲ ವೇತನ ಮತ್ತು ತುಟ್ಟಿ ಭತ್ಯೆ ಮೊಬಲಗುಗಳ ಮೇಲೆ ಶೇಕಡ 12 ರಂತೆ ಸಿಬ್ಬಂದಿ ವಂತಿಕೆಯನ್ನು ಅವರ ವೇತನದಿಂದ ಕಟಾಯಿಸುತ್ತಿದ್ದು ಸಂಬಂಧಿಸಿದ ಮೊಬಲಗನ್ನು ಸಿಬ್ಬಂದಿಯವರ ಭವಿಷ್ಯ ನಿಧಿ ಟ್ರಸ್ಟ್‌ಗೆ ಪಾವತಿಸುತ್ತಿರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಬ್ಯಾಂಕಿನ ಸಿಬ್ಬಂದಿಯವರುಗಳೇ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಿಂದ ಪರವಾನಗಿ ಪಡೆದು ಸಿಬ್ಬಂದಿ ಭವಿಷ್ಯ ನಿಧಿ ಟ್ರಸ್ಟ್ ಸ್ಥಾಪಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಸಂಸ್ಥೆಯ ಆಡಳಿತ ಮಂಡಳಿಯು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ನೌಕರರ 7ನೇ ವೇತನ ಸಮಿತಿ ವರದಿ ಶಿಫಾರಸ್ಸಿನ ರೀತ್ಯಾ ಬ್ಯಾಂಕಿನ ಸಿಬ್ಬಂದಿಯವರುಗಳಿಗೆ ಪಿಂಚಣಿ ಯೋಜನೆಯನ್ನು ದಿನಾಂಕ 01.09.2012 ರಿಂದ ಅನ್ವಯವಾಗುವಂತೆ ಹಿಂದಿನ ಸಾಲುಗಳಲ್ಲಿ ಅಳವಡಿಸಿಕೊಂಡಿದೆ. ಈ ಯೋಜನೆಯಡಿಯಲ್ಲಿ ಸಿಬ್ಬಂದಿಯ ಮೂಲ ವೇತನ ಮತ್ತು ತುಟ್ಟಿ ಭತ್ಯೆ ಮೊಬಲಗಿನ ಶೇಕಡ 5 ರಷ್ಟು ಮೊಬಲಗನ್ನು ಆಯಾ ಸಿಬ್ಬಂದಿಯ ವೇತನದಿಂದ ಕಡಿತಗೊಳಿಸಲು ಮತ್ತು ಅಷ್ಟೇ ಮೊಬಲಗನ್ನು ಬ್ಯಾಂಕಿನ ವತಿಯಿಂದಲೂ ಪಾವತಿಸಲು ಕ್ರಮ ವಹಿಸಲಾಗಿದೆ.

ಈ ಸಂಬಂಧದಲ್ಲಿ ಬಿರ್ಲಾ ಸನ್ ಲೈಫ್ ವಿಮಾ ಕಂಪನಿಯಲ್ಲಿ ಮತ್ತು ಭಾರತೀಯ ಜೀವ ವಿಮಾ ನಿಗಮದೊಂದಿಗೆ ವ್ಯವಹರಿಸಿದೆ.

Star union Dai-Ichi ಜೀವ ವಿಮಾ ನಿಗಮದವರ ಗ್ರೂಪ್ ಇನ್‌ಶ್ಯೂರೆನ್ಸ್ ಇನ್‌ಲಿಯು ಆಫ್ ಇ.ಡಿ.ಎಲ್.ಐ. ಯನ್ನು ಸಂಸ್ಥೆಯಲ್ಲಿ ಅಳವಡಿಸಿಕೊಂಡಿದ್ದು ಈ ಸಂಬಂಧ 2024–25 ರ ಸಾಲಿನಲ್ಲಿ ರೂ.3,70,067.00 ಗಳನ್ನು ಪಾವತಿಸಿರುವುದು ಪರಿಶೀಲನೆಯಿಂದ ಕಂಡು ಬಂದಿದೆ.

ಆದಿತ್ಯ ಬಿರ್ಲಾ ಸನ್ ಲೈಫ್ ವಿಮಾ, Star union Dai-Ichi ಜೀವ ವಿಮಾ ಮತ್ತು ರಿಲೈಯನ್ಸ್ ನಿಪ್ಪಾನ್ ಜೀವ ವಿಮಾ ರವರುಗಳ ಸಹಕಾರದೊಂದಿಗೆ ಗ್ರೂಪ್ ಗ್ರಾಚ್ಯುಯಿಟಿ ವಿಮಾ ಪಾಲಿಸಿಯನ್ನು ಸಂಸ್ಥೆಯಲ್ಲಿ ಅಳವಡಿಸಿಕೊಂಡಿದ್ದು ವರದಿ ವರ್ಷದಲ್ಲಿ ರೂ. 1,13,00,000.00 ಗಳ ವೆಚ್ಚ ಭರಿಸಲಾಗಿದೆ.

ಸಂಸ್ಥೆಯು ಸಿಬ್ಬಂದಿ ನಿವೃತ್ತನಾಗುವ ಸಮಯದಲ್ಲಿ ಗಳಿಕೆ ರಜೆ ನಗದೀಕರಣ ಸೌಲಭ್ಯ ಒದಗಿಸಲು ಸಲುವಾಗಿ ಆದಿತ್ಯ ಬಿರ್ಲಾ ಸನ್ ಲೈಫ್ ಜೀವ ವಿಮಾ ನಿಗಮ, Star union Dai-Ichi ಜೀವ ವಿಮಾ ನಿಗಮದವರ ಮತ್ತು ರಿಲೈಯನ್ಸ್ ಜೀವ ವಿಮಾ ನಿಗಮ ಸಹಕಾರದೊಂದಿಗೆ ವಿಮಾ ಪಾಲಿಸಿ ತೆಗೆದುಕೊಂಡಿದ್ದು ವರದಿ ವರ್ಷದಲ್ಲಿ ರೂ. 1,06,000.00 ಗಳ ವಿಮಾ ವೆಚ್ಚ ಭರಿಸಲಾಗಿದೆ.

ಸಿಬ್ಬಂದಿ ಸೇವಾ ಒಳನಿಯಮಗಳ ಪ್ರಕಾರ ಹುದ್ದೆಗಳ ಜವಾಬ್ದಾರಿಗನುಸಾರವಾಗಿ ನಗದು ಭದ್ರತೆಯನ್ನು (ಸೆಕ್ಯೂರಿಟಿ ಡಿಪಾಸಿಟ್) ಸಂಸ್ಥೆಯವರು ನಿಗದಿಪಡಿಸಿ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಂದ ಪಡೆಯಲಾಗಿದೆ.

ಸಂಘದ ಆರ್ಥಿಕ ಫಲಿತಾಂಶಗಳ ವಿವರಗಳು

ಹಣಕಾಸಿನ ವರದಿಯ ವಿಶ್ಲೇಷಣೆ (ರೂ. ಲಕ್ಷಗಳಲ್ಲಿ)

	ಪ್ರಸಕ್ತ ಸಾಲು	ಹಿಂದಿನ ಸಾಲು
ಸಂಘದ ಒಟ್ಟು ವಹಿವಾಟು	3,54,040.51	3,50,375.48
ಸಂಘದ ಒಟ್ಟು ದುಡಿಯುವ ಬಂಡವಾಳ	2,77,385.70	2,74,452.95
ಸಂಘದ ಲಾಭ ಅಥವಾ ನಷ್ಟ	2,877.69	2,850.30
ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ	2,877.69	2,850.30

(33) ತಲಾ ಷೇರಿನ ಗಳಿಕೆ

	ಪ್ರಸಕ್ತ ಸಾಲು	ಹಿಂದಿನ ಸಾಲು
ನಿವ್ವಳ ಲಾಭ	28,77,68,538.52	28,50,29,761.36
ಒಟ್ಟು ಷೇರುಗಳು (ಪ್ರತಿ ಷೇರು ಮೌಲ್ಯ ರೂ. 200.00)	47,96,578.00	47,53,834.00
ತಲಾ ಷೇರಿನ ಗಳಿಕೆ	ರೂ. 59.99	ರೂ. 59.96

ಶಾಖಾ ವ್ಯವಹಾರಗಳು (ರೂ. ಸಾವಿರಗಳಲ್ಲಿ)

ಕ್ರ.ಸ.	ಶಾಖೆಗಳು	ಹಿಂದಿನ ಸಾಲಿನ			ಪ್ರಸಕ್ತ ಸಾಲಿನ			ಲಾಭ
		ಠೇವಣಿ	ಸಾಲ	ಒಟ್ಟು	ಠೇವಣಿ	ಸಾಲ	ಒಟ್ಟು	
1	ಆಡಳಿತ ಕಛೇರಿ		150084	150084	0	205483	205483	–189061
2	ಪ್ರಧಾನ ಕಛೇರಿ	2950534	2149256	5099790	2934557	2287011	5221567	95000
3	ವಿಜಯನಗರ	2587543	1614144	4201687	2631207	1642962	4274169	64230
4	ಜಯನಗರ	1577217	660199	2237416	1616847	675273	2292119	18418
5	ಇಂದಿರಾನಗರ	2384869	792542	3177411	2403972	710148	3114120	30467
6	ಚಾಮರಾಜಪೇಟೆ ಪಶ್ಚಿಮ	708600	827414	1536014	764696	894154	1658850	37440
7	ಶಾಂತಿನಗರ	485139	676194	1161333	559241	710683	1269925	26424
8	ಮಹಾಲಕ್ಷ್ಮೀಪುರ	1181462	456660	1638122	1211709	501203	1712912	1190
9	ಸಂಜಯನಗರ	1073525	518226	1591751	1070652	449728	1520381	19481
10	ಪದ್ಮನಾಭನಗರ	804554	353554	1158108	816844	404410	1221254	4953
11	ಕೋರಮಂಗಲ	876047	1252133	2128180	889431	1251349	2140780	77101
12	ಆವಲಹಳ್ಳಿ	1110032	755459	1865491	1171021	747008	1918029	30322
13	ಆರ್.ಟಿ.ನಗರ	527545	494886	1022431	587900	517451	1105351	16521

14	ಜ್ಞಾನಜ್ಯೋತಿ ನಗರ	862130	304742	1166872	874257	347549	1221806	539
15	ಹೆಚ್.ಆರ್.ಬಿ. ಆರ್.ಲೇಔಟ್	553505	346466	899971	576665	380710	957375	9041
16	ಕೃಷ್ಣರಾಜಪುರಂ	1103866	223959	1327825	1159316	242757	1402073	975
17	ರಾಮನಗರ ಟೌನ್	89585	283146	372731	87194	248546	335740	11507
18	ಟಿ.ದಾಸರಹಳ್ಳಿ	303555	160516	464071	333459	232931	566390	1038
19	ಕುವೆಂಪುನಗರ–ಮೈಸೂರು	429260	456147	885407	457480	504900	962380	17731
20	ಹೊಸೂರು ರಸ್ತೆ ಎಲೆಕ್ಟ್ರಾನಿಕ್ ಸಿಟಿ ಶಾಖೆ	265914	267156	533070	265565	258376	523940	7709
21	ಯಲಹಂಕ ಶಾಖೆ	522531	218715	741246	555884	209008	764892	200
22	ಅಂಜನಾನಗರ ಶಾಖೆ	293124	111441	404565	335166	134821	469987	759
23.	ಕೋಣನಕುಂಟೆ ಶಾಖೆ	271717	261283	533000	285826	258701	544527	5784
	ಒಟ್ಟು	**20962255**	**13334322**	**34296577**	**21588888**	**13815163**	**35404051**	**287769**

ಎ	**ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ**	
1	ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ದತಿ/ಕ್ರಮದ ಬಗ್ಗೆ ವಿವರಣೆ, ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಾಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಶೀಲಿಸುವುದು.	ಬ್ಯಾಂಕಿನ ಲೆಕ್ಕಗಳನ್ನು(ಶಾಖಾ ಲೆಕ್ಕಗಳು) ಪೂರ್ಣ ಗಣಕೀಕರಣಗೊಳಿಸಲಾಗಿದೆ. ಶಾಖೆಗಳ ಲೆಕ್ಕಗಳನ್ನು ಸಂಸ್ಥೆಯ ಆಡಳಿತ ಕಛೇರಿಯಲ್ಲಿ ಪ್ರತಿ ಮಾಹೆಯ ಅಂತ್ಯಕ್ಕೆ ಸಮನ್ವಯಗೊಳಿಸುವ ಪದ್ಧತಿ ಅಳವಡಿಸಿಕೊಂಡಿದ್ದು, ಲೆಕ್ಕಗಳು ಸಮರ್ಪಕವಾಗಿ ರುವುದು ಪರಿಶೀಲನೆಯಿಂದ ಕಂಡು ಬಂದಿದೆ. ಶಾಖೆಗಳ ಮತ್ತು ಕೇಂದ್ರದ ಲೆಕ್ಕಗಳಲ್ಲಿ ಅಸಾಮಾನ್ಯ ನಮೂದುಗಳಿಲ್ಲ. ಸಂಸ್ಥೆಯು ತನ್ನ ಲೆಕ್ಕ ಪತ್ರಗಳ ನಿರ್ವಹಣೆಯ ಅಗತ್ಯತೆಗಳಿಗಾಗಿ ಕೆಲವು ಅಂತರ್ ಲೆಕ್ಕಗಳನ್ನು (Internal Accounts) ನಿರ್ವಹಿಸಿದ್ದು, ಅದರಲ್ಲಿ ನೇರ / ಅಸಾಮಾನ್ಯ ನಮೂದುಗಳಿಲ್ಲದಿರುವುದನ್ನು ದೃಢೀಕರಿಸಿಕೊಂಡಿದೆ.
2	ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ	ದೀರ್ಘಕಾಲದ ಬಾಕಿಯಿರುವ ನಮೂದುಗಳು ಸಂಸ್ಥೆಯ ಲೆಕ್ಕದಲ್ಲಿರುವುದಿಲ್ಲ
3	ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು	ಶಾಖೆಯ ಸಮನ್ವಯ ಪಟ್ಟಿಗಳನ್ನು ಪ್ರತಿ ಮಾಹೆಯ ಅಂತ್ಯಕ್ಕೆ ತಾಳೆ ಮಾಡಿಕೊಳ್ಳಲಾಗುತ್ತಿದೆ.

ಬಿ	**ಶಾಖೆಗಳ ಪರಿವೀಕ್ಷಣೆ:**	
1	ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ಎಲ್ಲಾ ವಿಚಾರಗಳನ್ನು ಅಳವಡಿಸಿ ಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ), ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ	ಸಂಸ್ಥೆಯು ಹೊಂದಿರುವ ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನೆಗೆ ಚಾರ್ಟರ್ಡ್ ಅಕೌಂಟೆಂಟ್‌ರವರುಗಳನ್ನು ನೇಮಿಸಲಾಗಿದೆ ಮತ್ತು ಎಲ್ಲಾ ವ್ಯವಹಾರಗಳ ಬಗ್ಗೆ ಆಡಳಿತ ಕಛೇರಿಯ ಜವಾಬ್ದಾರಿಯುತ ಅಧಿಕಾರಿಗಳಿಂದ ಆಗಿಂದಾಗ್ಗೆ ತನಿಖೆ ನಡೆಸಲ್ಪಡಲು ವ್ಯವಸ್ಥಿಸಲಾಗಿದೆ. ಆಂತರಿಕ ಲೆಕ್ಕ ಪರಿಶೋಧನೆ ನಡೆಸುವ ಚಾರ್ಟರ್ಡ್ ಅಕೌಂಟೆಂಟ್‌ರವರುಗಳು ರೆವಿನ್ಯೂ ಆಡಿಟ್‌ನೊಂದಿಗೆ ಆಂತರಿಕ ಲೆಕ್ಕ ಪರಿಶೋಧನೆ ನಡೆಸಿ ತ್ರೈಮಾಸಿಕ ವರದಿ ಸಲ್ಲಿಸುತ್ತಿರುವುದು ಮತ್ತು ಸಂಸ್ಥೆಯ ತನಿಖಾಧಿಕಾರಿಗಳು ಸಂಬಂಧಿಸಿದ ಶಾಖಾ ವ್ಯವಸ್ಥಾಪಕರುಗಳ ಸಹಕಾರದೊಂದಿಗೆ ಅನುಪಾಲನಾ ವರದಿ ತಯಾರಿಸಿ ಲೆಕ್ಕ ಪರಿಶೋಧನಾ ಉಪಸಮಿತಿ ಸಭೆಯ ಮುಂದೆ ಮಂಡಿಸುವುದು, ಲೆಕ್ಕ ಪರಿಶೋಧನಾ ಉಪಸಮಿತಿಯವರು ಅಂತಹ ವರದಿಗಳನ್ನು ಪರಿಶೀಲಿಸಿರುವುದು ಕಂಡು ಬಂದಿದೆ.
2	ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ	ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟೆಂಟ್ ರವರುಗಳು ನಡೆಸುತ್ತಿದ್ದು ಅವರುಗಳಿಂದ ತ್ರೈಮಾಸಿಕ ವರದಿಗಳನ್ನು ಪಡೆಯಲಾಗುತ್ತಿದೆ. ಅವುಗಳಲ್ಲಿನ ನ್ಯೂನತೆಗಳ ಬಗ್ಗೆ ಸಮಾಜಾಯಿಸಿ ವರದಿಗಳನ್ನು ಶಾಖಾ ವ್ಯವಸ್ಥಾಪಕರುಗಳಿಂದ ಪಡೆದು ಲೆಕ್ಕ ಪರಿಶೋಧನಾ ಉಪಸಮಿತಿಯ ಮುಂದೆ ಮಂಡಿಸಲು ವರದಿ ಸಾಲಿನಲ್ಲಿ ಸಂಸ್ಥೆಯ ಒಬ್ಬ ಸಹಾಯಕ ಪ್ರಧಾನ ವ್ಯವಸ್ಥಾಪಕರು ಮತ್ತು ಒಬ್ಬರು ಶಾಖಾ ವ್ಯವಸ್ಥಾಪಕರುಗಳ ಹುದ್ದೆಯಲ್ಲಿರುವ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.
3	ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ?	ಭಾರತೀಯ ರಿಸರ್ವ್ ಬ್ಯಾಂಕ್ ನವರು ನಿಗದಿ ಪಡಿಸಿರುವ ವರದಿಗಳನ್ನು ಸಲ್ಲಿಸುವ ಸಲುವಾಗಿ ಮಾಹೆಯಾನ ಮತ್ತು ನಿಯತಕಾಲಿಕ ವರದಿಗಳು ಆಡಳಿತ ಕಛೇರಿಗೆ ಶಾಖೆಗಳಿಂದ ಬರುತ್ತಿರುವುದನ್ನು ಗಮನಿಸಿದೆ.
4	ಹೊಂದಾಣಿಕೆ ಲೆಕ್ಕಗಳ ಬಗ್ಗೆ–ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ–ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ	ಆಡಳಿತ ಕಛೇರಿಯಲ್ಲಿ ನಿರ್ವಹಿಸುವ ಶಾಖೆಗಳ ಲೆಕ್ಕಗಳಿಗೂ ಮತ್ತು ಶಾಖೆಗಳಲ್ಲಿ ನಿರ್ವಹಿಸುವ ಆಡಳಿತ ಕಛೇರಿಯ ಲೆಕ್ಕಗಳಿಗೂ ಕ್ರೆಡಿಟ್ ಬಾಕಿಗಳ ಅಂತರ ರೂ. 28,81,789.24 ಗಳಿರುತ್ತದೆ. ಈ ಸಂಬಂಧ ಶಾಖೆಗಳ ಹೊಂದಾಣಿಕೆ ಬಾಕಿ ಇರುವ ಎಂಟ್ರಿಗಳನ್ನು ಗುರ್ತಿಸಲಾಗಿದ್ದು, ಒಟ್ಟು 48 ಕ್ರೆಡಿಟ್ ಎಂಟ್ರಿಗಳಿಂದ ಹೊಂದಾಣಿಕೆ ಬಾಕಿಯಿದೆ ಎಂದು ಕಂಡು ಬಂದಿದ್ದು ನಂತರದ ದಿನಗಳಲ್ಲಿ ಹೊಂದಾಣಿಕೆಯಾಗಿರುತ್ತದೆ.

	ಇತರೆ ಷರಾ/ ಇತರೆ ವಿಷಯಗಳು :	
1	ಲೆಕ್ಕನಿರ್ವಹಣಾ ಕಾರ್ಯನೀತಿ/ ಅದು ಲೆಕ್ಕನಿರ್ವಹಣಾ ಪ್ರಮಾಣಕ್ಕನುಗುಣವಾಗಿದೆಯೇ?	ಅನುಗುಣವಾಗಿದೆ.
2	ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತಃಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು	ಗಣಕೀರಣ ವ್ಯವಸ್ಥೆಯಲ್ಲಿ ಆರ್ಥಿಕ ತ:ಖ್ತೆಗಳನ್ನು ಕ್ರೋಢಿಕರಿಸಲಾಗುತ್ತಿದ್ದು ಗಮನಾರ್ಹ ಅಂಶಗಳು ಕಂಡು ಬಂದಿಲ್ಲ.
3	ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ–ಸಮನ್ವಯಕ್ಕೊಳಪಟ್ಟಿರುವ ತಃಖ್ತೆಗಳ ಬಗ್ಗೆ ವಿವರಣೆ	ಕಂಡಿಕೆ 22 ರಲ್ಲಿ ವಿವರಿಸಿದೆ.
4	NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವಾರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ಧತಿ ಬಗ್ಗೆ	ಅನ್ವಯಿಸುವುದಿಲ್ಲ.
5	CRAR ನ ಬಗ್ಗೆ ವಿಶ್ಲೇಷಣೆ	ಕಳೆದ ಸಾಲಿನ ವರ್ಷಾಂತ್ಯದಲ್ಲಿ ಬ್ಯಾಂಕಿನ CRAR (Capital to Risk Assets Ratio) ಪ್ರಮಾಣವು ಶೇಕಡ 25.06 ಇದ್ದು ದಿನಾಂಕ 31.03.2025 ಕ್ಕೆ ಶೇಕಡ 24.71 ಇರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಬ್ಯಾಂಕು ಸಾಲಾಂತ್ಯ 2024–25 ರಂದಿಗೆ ಕನಿಷ್ಠ ಶೇಕಡ 11 ರಷ್ಟು ಮತ್ತು ಸಾಲಾಂತ್ಯ 2025–26 ರಂದಿಗೆ ಕನಿಷ್ಠ ಶೇಕಡ 12 ರಷ್ಟು CRAR ಇರಿಸಬೇಕಾಗಿದ್ದು, ಸಂಸ್ಥೆಯು ನಿರ್ವಹಿಸಿರುವ CRAR ಮಟ್ಟವು ನಿಗದಿತ ಪ್ರಮಾಣಕ್ಕಿಂತ ಹೆಚ್ಚಿರುವುದು ಕಂಡು ಬಂದಿದೆ. ವರದಿ ವರ್ಷದಲ್ಲಿ CRAR (Capital to Risk Assets Ratio) ಶೇಕಡ 0.35 ರಷ್ಟು ಕಡಿಮೆಯಾಗಿರುತ್ತದೆ. ಸಂಸ್ಥೆಯು ಹಿಂದಿನ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ನು ಅನುಸರಿಸಿ ತಾನು ಮಾಲೀಕತ್ವ ಹೊಂದಿರುವ ಪ್ರಧಾನ ಕಛೇರಿ ಕಟ್ಟಡ ಮತ್ತು ಇಂದಿರಾನಗರ ಕಟ್ಟಡಗಳನ್ನು ಮಾರುಕಟ್ಟೆ ದರದಲ್ಲಿ ಮೌಲ್ಯಮಾಪನಗೊಳಿಸಿ, ಮಾರುಕಟ್ಟೆ ದರದಲ್ಲಿ ಸದರಿ ಕಟ್ಟಡಗಳ ಪುಸ್ತಕ ಬೆಲೆಯನ್ನು ಹೆಚ್ಚಿಸುವ ಮೂಲಕ, ಹೆಚ್ಚಾದ ಮೊಬಲಗಿಗೆ ಸರಿಸಮವಾಗಿ ಮರುಮೌಲ್ಯನಿಧಿ ಸ್ಥಾಪಿಸಿದ್ದು ವರದಿ ಸಾಲಾಂತ್ಯ ರೂ. 60.33 ಕೋಟಿ ಸದರಿ ನಿಧಿಯಲ್ಲಿ ಮುಂದುವರೆದಿವೆ. ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳ ರೀತ್ಯಾ ಸಂಸ್ಥೆಯು ಮರುಮೌಲ್ಯಮಾಪನ ನಿಧಿಯ ಶೇಕಡ 45 ರಷ್ಟು ಮೊಬಲಗನ್ನು ತನ್ನ Tier 1 ಬಂಡವಾಳ ಹೆಚ್ಚಿಸಲು ಅವಕಾಶ ಮಾಡಿಕೊಂಡಿರುವುದನ್ನು ಗಮನಿಸಿದೆ.

6	ಹಿಂದಿನ ಸಾಲಿನ ಲಾಭದ ಶೇ. 1% ಕ್ಕಿಂತ ಹೆಚ್ಚಿಗೆ ಕೊಡುಗೆ/ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ	ಸಂಸ್ಥೆಯು ವರದಿ ಸಾಲಿನಲ್ಲಿ ಯಾವುದೇ ಕೊಡುಗೆ / ದಾನ ವೆಚ್ಚಗಳನ್ನು ಭರಿಸಿರುವುದಿಲ್ಲ.
7	ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ :	

ಸಂಸ್ಥೆಯು ವರದಿ ದಿನಾಂಕಕ್ಕೆ ಅವಧಿ / ನಿಶ್ಚಿತ ಠೇವಣಿಗಳಿಗೆ ಈ ಕೆಳಕಂಡಂತೆ ಬಡ್ಡಿ ನಿಗದಿಪಡಿಸಿರುತ್ತದೆ.

ವಿವರಗಳು	ಠೇವಣಿ ದಾರರಿಗೆ	ಹಿರಿಯ ನಾಗರೀಕರಿಗೆ
• 7 ದಿನಗಳು ಮತ್ತು ಮೇಲ್ಪಟ್ಟು 29 ದಿನಗಳವರೆಗೆ	3.00%	3.00%
• 30 ದಿನಗಳು ಮತ್ತು ಮೇಲ್ಪಟ್ಟು 90 ದಿನಗಳವರೆಗೆ	4.25%	4.75 %
• 91 ದಿನಗಳು ಮತ್ತು ಮೇಲ್ಪಟ್ಟು 180 ದಿನಗಳವರೆಗೆ	4.75%	5.25 %
• 181 ದಿನಗಳು ಮತ್ತು ಮೇಲ್ಪಟ್ಟು 364 ದಿನಗಳವರೆಗೆ	6.25%	6.75 %
• 365 ದಿನಗಳು (1 ವರ್ಷ) ಮತ್ತು 2 ವರ್ಷಗಳವರೆಗೆ	7.50%	8.00 %
• 2 ವರ್ಷಕ್ಕೂ ಮೇಲ್ಪಟ್ಟು 5 ವರ್ಷಗಳವರೆಗೆ	7.25%	7.75%
• 5 ವರ್ಷಕ್ಕೂ ಮೇಲ್ಪಟ್ಟು (ಚಿಛಠತಜ 5 ಥಿಜಚಿಥಿ)	6.75%	7.25%
• ಸೊಸೈಟಿ ಮತ್ತು ಸಂಸ್ಥೆಯ ಠೇವಣಿಗೆ 365 ದಿನಗಳು (1 ವರ್ಷ)	8.00%	

ಸಂಸ್ಥೆಯು ರೂ. 15.00 ಲಕ್ಷಗಳಿಗೂ ಮಿಗಿಲಾಗಿ ಠೇವಣಿ ಇರಿಸುವ ವ್ಯಕ್ತಿಗಳಿಗೆ ಅನ್ವಯವಾಗುವ ಬಡ್ಡಿದರಗಳಿಗಿಂತ ಶೇಕಡ 0.25 ರಷ್ಟು ಹೆಚ್ಚುವರಿ ಬಡ್ಡಿ ನೀಡಲು ಮತ್ತು ಸಂಘ ಸಂಸ್ಥೆಗಳ 1 ವರ್ಷ ಅವಧಿಯ ಠೇವಣಿಗಳಿಗೆ ಗರಿಷ್ಠ ಶೇಕಡ 8.00 ರವರೆಗೆ ಬಡ್ಡಿ ನೀಡಲು ತೀರ್ಮಾನಿಸಿದೆ.

ಸಂಸ್ಥೆಯು ವರದಿ ದಿನಾಂಕಕ್ಕೆ ಸದಸ್ಯರುಗಳಿಗೆ ನೀಡುವ ಸಾಲಗಳಿಗೆ ಈ ಕೆಳಕಂಡಂತೆ ಬಡ್ಡಿ ನಿಗದಿಪಡಿಸಿರುತ್ತದೆ.

ಸಾಲ ಮತ್ತು ಮುಂಗಡಗಳು

ದೀರ್ಘಾವಧಿ ಸಾಲ

ಸಾಲದ ವಿವರಗಳು	ಸಾಲದ ಮೊತ್ತ	ಪರಿಷ್ಕರಿಸಿರುವ ಬಡ್ಡಿ ದರ
I. ಸ್ಥಿರಾಸ್ತಿ ಆಧಾರದ ಮೇಲೆ 1. ಗೃಹ ನಿರ್ಮಾಣ ಸಾಲ / ನಿವೇಶನ ಖರೀದಿ ಸಾಲ	ಅ) ರೂ. 5,00,000–00 ಗಳವರೆಗೆ	9.00%
	ಆ) ರೂ. 5,00,001–00 ರಿಂದ ರೂ. 15,00,000–00 ಗಳವರೆಗೆ	9.50%
	ಇ) ರೂ. 15,00,001–00 ರಿಂದ ರೂ. 35,00,000–00 ಗಳವರೆಗೆ	10.00%
	ಈ) ರೂ. 35,00,001–00 ಮತ್ತು ಮೇಲ್ಪಟ್ಟು	10.75%
2. ಸ್ಥಿರಾಸ್ತಿ ಸಾಲ / ನಿವೇಶನಗಳ ಆಧಾರದ ಮೇಲೆ ವ್ಯಾಪಾರ ಸಾಲ	ಅ) ರೂ. 5,00,000–00 ಗಳವರೆಗೆ	11.50%

('ಬಿ' ಖಾತಾ ಸ್ಥಿರಾಸ್ತಿ ಆಧಾರದ ಮೇಲೆ ಗರಿಷ್ಠ ರೂ. 20 ಲಕ್ಷ)	ಆ) ರೂ. 5,00,001–00 ರಿಂದ ರೂ. 15,00,000–00 ಗಳವರೆಗೆ	12.25%
	ಇ) ರೂ. 15,00,001–00 ರಿಂದ ರೂ. 35,00,000–00 ಗಳವರೆಗೆ	12.50%
	ಈ) ರೂ. 35,00,001–00 ರಿಂದ ರೂ. 50,00,000–00 ಗಳವರೆಗೆ	12.75%
	ಉ) ರೂ. 50,00,001–00 ರಿಂದ ರೂ. 5,00,00,000–00 ಗಳವರೆಗೆ	13.25%
	ಊ) ರೂ. 5,00,00,001–00 ಮತ್ತು ಮೇಲ್ಪಟ್ಟು	13.00%
3. ಚಾಲ್ತಿ ಖಾತೆದಾರರಿಗೆ O.D. (ಸ್ಥಿರಾಸ್ತಿ ಆಧಾರದ ಮೇಲೆ)	ಅ) ರೂ. 5,00,000–00 ಗಳವರೆಗೆ	11.25%
	ಆ) ರೂ. 5,00,001–00 ರಿಂದ ರೂ. 15,00,000–00 ಗಳವರೆಗೆ	12.25%
	ಇ) ರೂ. 15,00,001–00 ರಿಂದ ರೂ. 35,00,000–00 ಗಳವರೆಗೆ	12.50%
	ಈ) ರೂ. 35,00,001–00 ರಿಂದ ರೂ. 50,00,000–00 ಗಳವರೆಗೆ	12.75%
	ಉ) ರೂ. 50,00,001–00 ಮತ್ತು ಮೇಲ್ಪಟ್ಟು	13.25%
4. ವಿದ್ಯಾಭ್ಯಾಸ (ವೃತ್ತಿಪರ ಕೋರ್ಸ್‌ಗಳಿಗೆ)	ಅ) ರೂ. 5,00,000–00 ಗಳವರೆಗೆ	10.25%
	ಆ) ರೂ. 5,00,001–00 ರಿಂದ ರೂ. 15,00,000–00 ಗಳವರೆಗೆ	10.75%
	ಇ) ರೂ. 15,00,001–00 ರಿಂದ ರೂ. 35,00,000–00 ಗಳವರೆಗೆ	11.75%
	ಈ) ರೂ. 35,00,001–00 ಮತ್ತು ಮೇಲ್ಪಟ್ಟು	12.00%
II. ವಾಹನ ಸಾಲ (ತ್ರಿಚಕ್ರ, ಕಾರು, ಟ್ರಕ್, ಬಸ್)	ವಾಹನ ಬೆಲೆಯ ಶೇಕಡ 70 ರಷ್ಟು	11.00%

ಅಲ್ಪಾವಧಿ ಸಾಲ

ಸಾಲದ ವಿವರಗಳು	ಪರಿಷ್ಕರಿಸಿರುವ ಬಡ್ಡಿ ದರ
I. ಜಾಮೀನು ಸಾಲ–ಬ್ಯಾಂಕಿನ ಮೂಲಕ ವೇತನ ಪಡೆಯುವವರಿಗೆ/ಸಂಬಳದ ಆಧಾರದ ಮೇಲೆ ರೂ. 2,00,000/– ಗಳವರೆಗೆ	14.00%
II. ವಿಶೇಷ ಜಾಮೀನು ಸಾಲ ('ಬಿ' ಖಾತಾ ಸ್ಥಿರಾಸ್ತಿ / ನಿವೇಶನದ ಆಧಾರದ ಮೇಲೆ ಗರಿಷ್ಠ ರೂ. 5,00,000/–)	11.50%
III. ವ್ಯಾಪಾರ ಸಾಲ / ವ್ಯಾಪಾರ ಅಭಿವೃದ್ಧಿಗಾಗಿ ಸಾಲ (ಗರಿಷ್ಠ ರೂ. 2,00,000/–)	14.00%
IV. ಚಿನ್ನಾಭರಣ ಸಾಲ (1 ಗ್ರಾಂ. ರೂ.4,800/– ರಂತೆ) ಅ) ರೂ. 2,00,000–00 ಗಳವರೆಗೆ ಆ) ರೂ. 2,00,001–00 ರಿಂದ ಗರಿಷ್ಠ ರೂ. 15,00,000–00 ಗಳವರೆಗೆ	8.00% 9.00%
V. ದ್ವಿಚಕ್ರ ವಾಹನಗಳ ಸಾಲ (ವಾಹನ ಬೆಲೆಯ ಶೇಕಡ 70 ರಷ್ಟು)	11.00%
VI. IVP/NSC/LIC ಬಾಂಡುಗಳ ಆಧಾರದ ಮೇಲೆ ಸಾಲ (ಪಾವತಿಸಿರುವ ಪ್ರೀಮಿಯಂ ನ ಶೇಕಡ 70 ರಷ್ಟು)	12.50%

ವರದಿ ಸಾಲಿಗೆ ಬ್ಯಾಂಕಿನ ಠೇವಣಿ ವೆಚ್ಚಗಳು ಪ್ರತಿಶತ 6.94% ರಷ್ಟಿದ್ದು ಬಡ್ಡಿ ಆದಾಯ ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡ 8.90 ರಷ್ಟಿರುತ್ತದೆ.

ಸಂಸ್ಥೆಯಿಂದ ಹಾಲಿ ಠೇವಣಿಗಳ ಮೇಲೆ ನೀಡುತ್ತಿರುವ ಬಡ್ಡಿ ದರಗಳು ಇಂದಿನ ದಿನಗಳಲ್ಲಿ ವಾಣಿಜ್ಯ ಬ್ಯಾಂಕುಗಳಲ್ಲಿ ಜಾರಿಯಲ್ಲಿರುವ ಠೇವಣಿಗಳ ಮೇಲಿನ ಬಡ್ಡಿ ದರಗಳಿಗೆ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ.

8	ಗಣಕೀಕರಣದ ಅಳವಡಿಕೆ ಮತ್ತು ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ	ಬ್ಯಾಂಕಿನ ಆಡಳಿತ ಕಛೇರಿ ಮತ್ತು ಎಲ್ಲಾ ಶಾಖೆಗಳ ವ್ಯವಹಾರಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ಗಣಕೀಕರಣಗೊಳಿಸಲಾಗಿದ್ದು ಸಂಸ್ಥೆಗೆ ಉಪಯುಕ್ತವಾಗಿದೆ.
9	ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಚಿಸುವ ಇತರೆ ವಿಷಯಗಳ ಬಗ್ಗೆ	ಆಯಾ ಕಂಡಿಕೆಯಲ್ಲಿ ವಿವರಿಸಿದೆ.

(34) ಸಂಘದ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ವಿಮರ್ಶೆ/ ವಿಶ್ಲೇಷಣೆ :

ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಕ್ಕೂ ಹೋಲಿಕೆ ಹಾಗೂ ಗಳಿಸಿದ ಲಾಭ / ನಷ್ಟದ ಬಗ್ಗೆ ವಿಮರ್ಶೆ.

(ರೂ. ಲಕ್ಷಗಳಲ್ಲಿ)

ಕ್ರ.ಸ.	ವಿವರ				ಪ್ರತಿಶತ ಪ್ರಮಾಣ			
		ಪ್ರಸಕ್ತ ಸಾಲಿನ ಮೊತ್ತ	ಹಿಂದಿನ ಸಾಲಿನ ಮೊತ್ತ	ಪ್ರತಿಶತ ಪ್ರಮಾಣದ ಆಧಾರ	ಪ್ರಸಕ್ತ ಸಾಲಿನ	ಹಿಂದಿನ ಸಾಲಿನ	ಹೆಚ್ಚು	ಕಡಿಮೆ
1	ಒಟ್ಟು ಠೇವಣಿಗಳು	215888.88	209622.55	–			–	–
	ಬಡ್ಡಿ ಪಾವತಿಗಳು	14688.81	14113.50	ಸರಾಸರಿ ಒಟ್ಟು ಠೇವಣಿ ವೆಚ್ಚ	6.94	6.62	0.32	–

2	ಒಟ್ಟು ಗುಂತಾವಣಿಗಳು	123508.57	118842.22	–	–		–	–
	ಗುಂತಾವಣಿಗಳ ಮೇಲೆ ಸ್ವೀಕರಿಸಿದ ಆದಾಯಗಳು	8144.56	8531.29	ಸರಾಸರಿ ಒಟ್ಟು ಗುಂತಾವಣಿಗಳು ಆದಾಯ	6.72	7.33	–	0.61
3	ಒಟ್ಟು ನೀಡಿದ ಸಾಲ	138151.65	133343.22	–	–	–	–	–
	ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ	16551.90	17601.35	ಸರಾಸರಿ ಒಟ್ಟು ಸಾಲ ಆದಾಯ	12.21	12.85	–	0.64
4	ದುಡಿಯುವ ಬಂಡವಾಳ	277384.53	273120.66	–	–	–	–	–
	ಇತರೆ ಆದಾಯ	1736.92	1185.88	ಸರಾಸರಿ ಒಟ್ಟು ದುಡಿಯುವ ಬಂಡವಾಳ	0.63	0.43	0.20	–
5	ದುಡಿಯುವ ಬಂಡವಾಳ	277384.53	273120.66		–	–	–	–
6	ಸಿಬ್ಬಂದಿ ವೆಚ್ಚ	3937.46	3424.48	ಸರಾಸರಿ ಒಟ್ಟು ದುಡಿಯುವ ಬಂಡವಾಳ	1.42	1.25	0.17	–
7	ಆಡಳಿತ ವೆಚ್ಚ	537.37	523.18		0.19	0.19	–	–
8	ಇತರೆ ವೆಚ್ಚ	572.95	476.56		0.21	0.17	0.04	–
9	ಸವಕಳಿಗಳು	99.79	83.50		0.04	0.03	0.01	–
10	ಅವಕಾಶಗಳು	3744.71	5843.95		1.35	2.13	–	0.78
11	ನಿವ್ವಳ ಲಾಭ	2877.69	2850.30		1.04	1.04	–	–
12	ನಿವ್ವಳ ನಷ್ಟ	–	–		–	–	–	–

ಈ ಮೇಲಿನ ತುಲನಾತ್ಮಕ ಅಂಕಿ ಸಂಖ್ಯೆಗಳ ಬಗ್ಗೆ ವಿಮರ್ಷೆ :

	ಲಾಭ–ನಷ್ಟದ ತಃಖ್ತೆ ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ:	ಸಂಸ್ಥೆಯು ವರದಿ ಸಾಲಿನಲ್ಲಿ ರೂ. 28,77,68,538.52 ಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ.
1	ಸಂಘವು ಪ್ರಸಕ್ತ 2024–2025 ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣೀಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲಾ ಅವಕಾಶಗಳನ್ನು ಮಾಡಿರುವುದರ ಬಗ್ಗೆ ವಿಮರ್ಷೆ	ಸಂಸ್ಥೆಯು 2024–25 ರ ಸಾಲಿನಲ್ಲಿ ಸಹಕಾರ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲಾ ಅವಕಾಶ ಮಾಡಿರುವುದು ಕಂಡು ಬಂದಿದೆ.
2	ವರ್ಷಾಂತ್ಯಕ್ಕೆ ಬರತಕ್ಕ ಇರುವ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22(ಎ) ನಿಬಂದಕರ ಮಂಜೂರಿ ಪಡೆಯಲಾಗಿದೆಯೇ?	ವರ್ಷಾಂತ್ಯಕ್ಕೆ ಉತ್ಪಾದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿ ಮೊಬಲಗು ರೂ. 17,76,58,801.00 ಗಳಿದ್ದು ಇತರೆ ಆಸ್ತಿ ಲೆಕ್ಕಗಳಲ್ಲಿ ಮುಂದುವರೆದಿದೆ. ವರದಿ ಸಾಲಿನಲ್ಲಿ ಈ ಸಂಬಂಧ ರೂ.1,62,76,010.00 ಗಳು ಹೆಚ್ಚಾಗಿದ್ದು ಅದನ್ನು ಲಾಭವಾಗಿ ಪರಿಗಣಿಸಲಾಗಿದೆ.

3	ಸಂಘವು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದಿಗೆ ಹೆಚ್ಚು/ಕಡಿಮೆ ಇರುವುದರ ಬಗ್ಗೆ ವಿಮರ್ಷೆ	ಸಂಸ್ಥೆಯು ಕಳೆದ ಸಾಲಿನಲ್ಲಿ ರೂ. 28,50,29,761.36 ಗಳ ನಿವ್ವಳ ಲಾಭ ಗಳಿಸಿತ್ತು. ವರದಿ ಸಾಲಿನಲ್ಲಿ ಸಂಸ್ಥೆಯ ನಿವ್ವಳ ಲಾಭ ಗಳಿಕೆ ರೂ. 28,77,68,538.52 ಗಳಾಗಿದ್ದು ಅವುಗಳು ರೂ.27,38,777.16 ಗಳಷ್ಟು ಹೆಚ್ಚಾಗಿದೆ. ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ವರದಿ ಸಾಲಿನಲ್ಲಿ ನಿವ್ವಳ ಲಾಭಗಳು ಶೇಕಡ 0.96 ಗಳಷ್ಟು ಹೆಚ್ಚಾಗಿದೆ.
4	ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂಧ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ	ಹಿಂದಿನ ಸಾಲಿನ ಲಾಭವನ್ನು ಕೆಳಕಂಡಂತೆ ವಿಲೇವಾರಿ ಮಾಡಲಾಗಿದೆ.

ಪ್ರಸಕ್ತ ವರದಿ ಸಾಲಿನಲ್ಲಿ ಬ್ಯಾಂಕು ಹಿಂದಿನ ಸಾಲು 2023–24ನೇ ಸಾಲಿನ ನಿವ್ವಳ ಆದಾಯ ರೂ. 28,50,29,761.36 ಗಳ ಹಂಚಿಕೆಯನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲು ದಿನಾಂಕ: 15.09.2024 ರಂದು ನಡೆದ ಸಂಸ್ಥೆಯ ಸರ್ವಸದಸ್ಯರ ಮಹಾಸಭೆಯು ತೀರ್ಮಾನಿಸುವ ಮೂಲಕ ಅನುಮೋದನೆ ನೀಡಿದೆ.

ವಿವರ	ಮೊಬಲಗು
ರಿಸರ್ವ್ ಫಂಡ್ ಶೇಕಡ 25 ರಂತೆ	9,15,15,968.36
ಕರಡು ಸಾಲ ನಿಧಿಗೆ ಶೇಕಡ 10 ಕ್ಕೆ ಮೀರದಂತೆ	6,70,53,906.00
ಕಟ್ಟಡದ ನಿಧಿಗೆ ಶೇಕಡ 15 ಕ್ಕೆ ಕಡಿಮೆ ಇಲ್ಲದಂತೆ	2,93,92,100.00
ಸದಸ್ಯರ ಮರಣೋತ್ತರ ಪರಿಹಾರ ನಿಧಿಗೆ ಶೇಕಡ 10 ಕ್ಕೆ ಮೀರದಂತೆ	100.00
ಸಿಬ್ಬಂದಿ ಕಲ್ಯಾಣ ನಿಧಿಗೆ ಶೇಕಡ 5 ಕ್ಕೆ ಮೀರದಂತೆ	100.00
ಉತ್ಸವ ನಿಧಿ ಶೇಕಡ 10 ಕ್ಕೆ ಮೀರದಂತೆ	100.00
ದಾನ ನಿಧಿಗಾಗಿ ಶೇಕಡ 10 ಕ್ಕೆ ಮೀರದಂತೆ	100.00
ಪ್ರಚಾರ ನಿಧಿ ಶೇಕಡ 10 ಕ್ಕೆ ಮೀರದಂತೆ	100.00
ಸಿಬ್ಬಂದಿ ಮರಣ ಪರಿಹಾರ ನಿಧಿಗೆ ಶೇಕಡ 1 ಕ್ಕೆ ಕಡಿಮೆ ಇಲ್ಲದಂತೆ	19,59,474.00
ಡಿವಿಡೆಂಡ್ ತೆಗೆದಿರಿಸಿದ ಮೊಬಲಗು ಶೇಕಡ 10 ರಂತೆ	9,51,07,813.00
ರೂ.	**28,50,29,761.36**

ಹಿಂದಿನ ಸಾಲಿನ ನಿವ್ವಳ ಲಾಭದ ಮೊಬಲಗನ್ನು ಸಂಸ್ಥೆಯ ಉಪನಿಯಮಗಳು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಕಲಂ 58 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 22 ರ ಅನ್ವಯ ವಿಲೇವಾರಿ ಮಾಡಿರುತ್ತಾರೆ. ವಿಲೇವಾರಿಯಾಗದ ನಿವ್ವಳ ಲಾಭಗಳು ಇರುವುದಿಲ್ಲ.

5	ನಷ್ಟವಾಗಿದ್ದಲ್ಲಿ ಕಾರಣಗಳು:	ಸಂಸ್ಥೆಯು ನಷ್ಟ ಅನುಭವಿಸಿರುವುದಿಲ್ಲ.

35) ಇತರೆ ಶರಾ ಹಾಗೂ ಬಾಬ್ತುಗಳು :

1. ಬ್ಯಾಂಕಿನಲ್ಲಿ ಎಲ್ಲಾ ವ್ಯವಹಾರಗಳು ಸರಿಯಾದ ರೀತಿಯಲ್ಲಿ ನಡೆಯುವುದನ್ನು ದೃಢೀಕರಿಸಿಕೊಳ್ಳಲು ಆಂತರಿಕ ತಪಾಸಣೆಗೆ ಒತ್ತು ಕೊಡಲು ಸಲಹೆ ಮಾಡಿದೆ.

36. ಲೆಕ್ಕ ಪರಿಶೋಧಕರ ಸಲಹೆ / ಸೂಚನೆಗಳು :

1 ಸಂಸ್ಥೆಯ ಅನುತ್ಪಾದಕ ಆಸ್ತಿಗಳನ್ನು ಕಡಿಮೆಗೊಳಿಸಲು ಗಮನ ಹರಿಸುವುದು.

2 ಗ್ರಾಹಕರುಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಅನುಕೂಲವಿರುವ ಶಾಖೆಗಳಲ್ಲಿ ATM ಯಂತ್ರ ಅಳವಡಿಸಲು ಸಲಹೆ ಮಾಡಿದೆ.

3 ಸಂಸ್ಥೆಯವರು ಸದಸ್ಯರಿಗೆ ಸಾಲದ ಕಂತುಗಳನ್ನು ನಿಗದಿಪಡಿಸುವಾಗ ಸದಸ್ಯರ ಮರುಪಾವತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಲದ ಕಂತುಗಳನ್ನು ನಿಗದಿಪಡಿಸಲು ಸಲಹೆ ಮಾಡಿದೆ.

4 ಎಲ್ಲಾ ಉಳಿತಾಯ / ಚಾಲ್ತಿ ಖಾತೆಗಳಲ್ಲಿ ಕನಿಷ್ಠ ಶಿಲ್ಕು ಇರಿಸಿ ವ್ಯವಹಾರ ಕೈಗೊಳ್ಳುವಂತೆ ದೃಢೀಕರಿಸಿಕೊಳ್ಳಲು ಸಲಹೆ ಮಾಡಿದೆ.

5 ಹಿಂದಿನ ವರ್ಷಗಳಿಂದಲೂ ಕೆ.ವೈ.ಸಿ ದಾಖಲೆ ಪಡೆಯಲಾಗದ ಉಳಿತಾಯ ಖಾತೆ/ ಚಾಲ್ತಿ ಖಾತೆಗಳಲ್ಲಿ ವ್ಯವಹಾರ ನಡೆಸದಂತೆ ಕ್ರಮ ಅಳವಡಿಸುವುದು.

6 ಉಳಿತಾಯ ಖಾತೆ / ಚಾಲ್ತಿ ಖಾತೆಗಳಲ್ಲಿ ಚೆಕ್‌ಗಳು ರಿಟರ್ನ್ ಆದಾಗ ವಿಧಿಸುವ ಸೇವಾ ಶುಲ್ಕಗಳನ್ನು ಖಾತೆಯಲ್ಲಿ ಶಿಲ್ಕು ಇದ್ದಾಗ ಮಾತ್ರ ಖರ್ಚು ಹಾಕುತ್ತಿದ್ದು, ಶಿಲ್ಕು ಇಲ್ಲದಿರುವಾಗ ಅಂತಹ ಸೇವಾ ಶುಲ್ಕಗಳನ್ನು ಖಾತೆಯಲ್ಲಿ ಸ್ವೀಕರಿಸಬೇಕಾದ ಸೇವಾ ಶುಲ್ಕದಡಿಯಲ್ಲಿ ಲೆಕ್ಕವಿಡಲು ಸಲಹೆ ಮಾಡಿದೆ.

7 ಸದಸ್ಯರುಗಳಿಗೆ ಸಾಲವನ್ನು ನೀಡಿದ ನಂತರ ಸಾಲದ ಉದ್ದೇಶಕ್ಕಾಗಿಯೇ ಬಳಕೆಯಾಗಿರುವುದನ್ನು ಸೂಕ್ತ ದಾಖಲಾತಿಗಳನ್ನು ಪಡೆದು ದೃಢೀಕರಿಸಿಕೊಳ್ಳಲು ಸಲಹೆ ಮಾಡಿದೆ.

8 ಎಲ್ಲಾ ಸಿಬ್ಬಂದಿಗಳು ನೆಗೋಷಿಯಬಲ್ ಇನ್ಸ್‌ಟ್ರೂಮೆಂಟ್ಸ್ ಕಾಯ್ದೆ, ಬ್ಯಾಂಕಿಂಗ್ ಕಾಯ್ದೆ, ಸಹಕಾರಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇನ್ನಿತರೇ ನಿಯಮಗಳ ಬಗ್ಗೆ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಆಗಿಂದಾಗ್ಗೆ ಸಿಬ್ಬಂದಿ ತರಬೇತಿ ವ್ಯವಸ್ಥೆ ಮಾಡುವುದು.

9 ಶಾಖೆಗಳು ಸಾಮಾನ್ಯ ಅಮಾನತ್ತು, ಧನಾದೇಶ, ಮರುಪಾವತಿ ಮುಗಿದ ಅವಧಿ ಠೇವಣಿಗಳ ಲೆಕ್ಕಗಳನ್ನು ಆಗಿಂದಾಗ್ಗೆ ಪರಿಶೀಲಿಸಿ, ಖೈದುಗೊಳಿಸಲು ಅಥವಾ ಮರುಪಾವತಿ ಮುಗಿದ ಠೇವಣಿ ಲೆಕ್ಕಗಳಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವುದು.

10 ಬ್ಯಾಂಕು ನೀಡುವ ಸಾಲಗಳಿಗೆ ಆಧಾರ ಮಾಡುವ ಸ್ಥಿರಾಸ್ತಿಗಳನ್ನು ವಿಮೆಗೊಳಪಡಿಸಿ ವಿಮೆ ಚಾಲ್ತಿಯಲ್ಲಿರುವುದನ್ನು ದೃಢೀಕರಿಸಿಕೊಳ್ಳಲು ಕ್ರಮ ಸೂಚಿಸಿದೆ.

11 ಸಾಲ ಅರ್ಜಿಗಳನ್ನು ಪರಿಗಣಿಸುವಾಗ ಅರ್ಜಿದಾರರ ಆದಾಯಗಳಿಗೆ ಸಂಬಂಧಿಸಿದಂತೆ ಅವಶ್ಯಕ ದಾಖಲಾತಿಗಳು/ ಆದಾಯ ತೆರಿಗೆ ರಿಟರ್ನ್‌ಗಳನ್ನು ಪಡೆಯಲು ಮತ್ತು ಅರ್ಜಿದಾರರ ವೆಚ್ಚಗಳು ವಾಸ್ತವಗಳಿಗೆ ಅನುಗುಣವಾಗಿರುವಂತೆ ಗಮನಿಸಿ ದಾಖಲಿಸಲು ಸೂಚಿಸಿದೆ.

12 ಸಾಲದ ಅರ್ಜಿಗಳನ್ನು ಪರಿಗಣಿಸುವ ಸಂದರ್ಭಗಳಲ್ಲಿ ಅರ್ಜಿದಾರರು ಇತರೇ ಬ್ಯಾಂಕುಗಳಲ್ಲಿ ಹೊಂದಿರುವ ಖಾತೆಗಳ ಎಕ್ಸ್‌ಟ್ರಾಕ್ಟ್ ಪಡೆದು ಅವರುಗಳ ಸಾಲ ಮರುಪಾವತಿ ಸಾಮರ್ಥ್ಯ ದೃಢೀಕರಿಸಿಕೊಳ್ಳಲು ಸಲಹೆ ಮಾಡಿದೆ.

13 ಸಂಸ್ಥೆಯು QMC (Quick Mortalaty Cases) ಅಂದರೆ ಸಾಲ ನೀಡಿದ ಒಂದು ವರ್ಷದೊಳಗೆ ಅನುತ್ಪಾದಕ ಸಾಲಗಳಾಗುವುದನ್ನು ತಡೆಯಲು ಮತ್ತು ಈ ಸಂದರ್ಭಗಳಲ್ಲಿ ಸಿಬ್ಬಂದಿ ಹೊಣೆಗಾರಿಕೆಯನ್ನು ಗುರುತಿಸಲು ಸಲಹೆ ಮಾಡಿದೆ.

14 ಬ್ಯಾಂಕಿನಲ್ಲಿ ಉಳಿಯುವ ಹೆಚ್ಚಿನ ನಿಧಿಗಳನ್ನು ಸಾಲ ವಿತರಣೆ ತೊಡಗಿಸಲು ಕ್ರಮವಿಡುವುದು.

ಸಮಾಧಾನ : ಸಲಹೆಗಳನ್ನು ಕಾರ್ಯಗತಗೊಳಿಸಲು ಕ್ರಮವಹಿಸಿದೆ.

(37) ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು :

ಕ್ರ.ಸಂ	ಕಂಡಿಕೆ ಸಂಖ್ಯೆ	ಪುಟ ಸಂಖ್ಯೆ	ನ್ಯೂನತೆಯ ಸಂಕ್ಷಿಪ್ತ ವಿವರ
1	24 (1)	83	ಸಾಲ ಮಂಜೂರಾತಿ ಪೂರ್ವದಲ್ಲಿ ಸಾಲಗಾರನ ಸಾಲ ಪಡೆಯುವ ಸಾಮರ್ಥ್ಯ, ಸಾಲ ಮಂಜೂರಾದ ನಂತರದ ಸಾಲದ ಸದುಪಯೋಗದ ಪರಿಶೀಲನೆ ಹಾಗೂ ವಸೂಲಾತಿ ಕ್ರಮಗಳ ಬಗ್ಗೆ ಬ್ಯಾಂಕು ಕ್ರಮವಿಡಬೇಕಾಗಿದೆ.
2	12	51	ದಿನಾಂಕ 31.03.2024 ಅವಧಿ ಅಂತ್ಯಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣೆಯು ದಿನಾಂಕ 30.12.2024 ರಿಂದ 15.01.2025 ದಿನಾಂಕದವರೆಗೆ ನಡೆದಿದ್ದು ಸಂಬಂಧಿಸಿದಂತೆ ತಪಸಣಾ ವರದಿ ಸ್ವೀಕರಿಸಿದ್ದು ಭಾರತೀಯ ರಿಸರ್ವ್ ಬ್ಯಾಂಕಿನವರಿಗೆ ಅನುಪಾಲನಾ ವರದಿ ಸಲ್ಲಿಸಿರುವುದು ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ತಪಾಸಣಾಧಿಕಾರಿಗಳು ದಿನಾಂಕ 31.03.2024 ರಂದಿಗೆ ಸಂಸ್ಥೆಯು ಗುರುತಿಸಿದ್ದ ಉತ್ಪಾದಕ ಸಾಲಗಳಲ್ಲಿ ವ್ಯತ್ಯಯ ಗುರುತಿಸಿ ಸಂಸ್ಥೆಯು ವರ್ಷಾಂತ್ಯ 2023–24 ರಂದಿಗೆ ಗುರುತಿಸಿದ್ದ ಅನುತ್ಪಾದಕ ಸಾಲಗಳು ರೂ. 143.67 ಕೋಟಿಗಳನ್ನು ರೂ. 150.36 ಕೋಟಿಗಳಿಗೆ ಹೆಚ್ಚಿಸಲಾಗಿರುವುದು ಕಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕು ತಪಸಾಣಾಧಿಕಾರಿಗಳು 2023–24 ರ ಸಾಲಿನ ವರ್ಷಾಂತ್ಯಕ್ಕೆ ಬ್ಯಾಂಕಿನ ಒಟ್ಟು ಅನುತ್ಪಾದಕ ಸಾಲಗಳನ್ನು ಶೇಕಡ 11.28 ಗಳಿಗೆ ಮತ್ತು ನಿವ್ವಳ ಅನುತ್ಪಾದಕ ಸಾಲಗಳನ್ನು ಶ್ಯೂನಕ್ಕೆ ಇರಿಸಿರುವುದು ಕಂಡು ಬಂದಿದೆ. ಸಾಲಾಂತ್ಯ 2021–22 ರಂದಿಗೆ ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲಗಳು ಶೇಕಡ 12.58 ಇರುವ ಕಾರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನವರು ಸಂಸ್ಥೆಗೆ Supervisory Action Frame Work (SAF) ದಿನಾಂಕ 17.03.2023 ರಿಂದ ಜಾರಿ ಮಾಡಿರುವುದು ಮತ್ತು ಬ್ಯಾಂಕಿನ ನಿವ್ವಳ ಅನುತ್ಪಾದಕ ಸಾಲಗಳು ಸಾಲಾಂತ್ಯ 2023–24 ರಂದಿಗೆ ಶ್ಯೂನ ಇರುವುದನ್ನು ಗಮನಿಸಿ ಬ್ಯಾಂಕಿಗೆ ವಿಧಿಸಿದ್ದ SAF ನಿಯಮಗಳನ್ನು ದಿನಾಂಕ 05.05.2025 ರ ಪತ್ರದ ಮೂಲಕ ಹಿಂತೆಗೆದಿರುವುದು ಕಂಡು ಬಂದಿದೆ.
3	14	54	ಬ್ಯಾಂಕಿನ ಉಪ ನಿಬಂಧನೆ ಸಂಖ್ಯೆ : 10 ರ ಪ್ರಕಾರ ಒಂದು ಷೇರಿನ ಮುಖ ಬೆಲೆ ರೂ. 200.00 ಗಳಾಗಿದ್ದು ಬ್ಯಾಂಕಿನ 3386 ಸದಸ್ಯರುಗಳು ರೂ. 200.00 ಗಳಿಗೂ ಕಡಿಮೆ ಷೇರು ಮೊಬಲಗು ಉಳಿಸಿಕೊಂಡು ಸದಸ್ಯತ್ವದಲ್ಲಿ ಮುಂದುವರೆದಿರುತ್ತಾರೆ. ಹಾಗೆಯೇ ಬ್ಯಾಂಕಿನ ಉಪನಿಯಮ ಸಂಖ್ಯೆ 20 ರ ರೀತ್ಯಾ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆ / ಸೌಲಭ್ಯಗಳಡಿಯಲ್ಲಿ ಇತರೆ ನಿಬಂಧನೆಗ ಳೊಂದಿಗೆ ಸದಸ್ಯನು ರೂ. 1,000.00 ಗಳ ಕನಿಷ್ಠ ಷೇರು ಮೊಬಲಗು ಹೊಂದಿರಬೇಕಾಗಿದ್ದು, ವರದಿ ಸಾಲಾಂತ್ಯದಲ್ಲಿ ಬ್ಯಾಂಕಿನ 20292 ಸದಸ್ಯರುಗಳು ರೂ. 1,000.00 ಗಳಿಗೂ ಕಡಿಮೆ ಷೇರು ಮೊಬಲಗು ಉಳಿಸಿಕೊಂಡು ಸದಸ್ಯತ್ವದಲ್ಲಿ ಮುಂದುವರೆದಿರುತ್ತಾರೆ.

			ಬ್ಯಾಂಕು ಎಲ್ಲಾ ಸದಸ್ಯರಿಂದ ರೂ. 200.00 ರ ಗುಣಾಂಶದಲ್ಲಿ ಷೇರು ಮೊಬಲಗು ಹೊಂದಿರಲು / ಬೈಲಾ ನಿಯಮ 20 ರನ್ವಯ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆ ಮತ್ತು ಸೌಲಭ್ಯಗಳಡಿಯಲ್ಲಿ ತಿಳಿಸಿರುವ ಷೇರು ಮೊಬಲಗು ನಿಬಂಧನೆಗೆ ಅನ್ವಯಿಸುವಂತೆ ಸದಸ್ಯನು ರೂ. 1,000.00 ಗಳ ಕನಿಷ್ಠ ಷೇರು ಮೊಬಲಗು ಹೊಂದಿರಲು ಕ್ರಮ ಕೋರಿದೆ. ಸದಸ್ಯರುಗಳಿಗೆ ಷೇರು ಪ್ರಮಾಣ ಪತ್ರವನ್ನು ನೀಡಲಾಗುತ್ತಿದ್ದು ಎಲ್ಲಾ ಸದಸ್ಯರುಗಳು ಷೇರು ಪ್ರಮಾಣ ಪತ್ರ ಪಡೆಯುವಂತೆ ಕ್ರಮವಹಿಸಲು ಸೂಚಿಸಿದೆ.

ಸಮಾಧಾನ : ಕ್ರಮವಹಿಸಿದೆ.

(38) ಲೆಕ್ಕ ಪರಿಶೋಧಕರ ದೃಢೀಕರಣ ಪತ್ರ (ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 63(16) ರಂತೆ)
ನನ್ನ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನನಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕ ಪತ್ರಗಳು, ಆರ್ಥಿಕ ತಃಖ್ತೆಗಳು, ಅನುಸೂಚಿಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಅಧಿನಿಯಮದಲ್ಲಿ ಅಗತ್ಯಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತವೆ.
ದಿನಾಂಕ 31.03.2025 ರಂತ್ಯಕ್ಕೆ ಇದ್ದ ಅಢಾವೆ ಪತ್ರಿಕೆ ಹಾಗೂ ಸನ್ 2024–25 ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಸಂಘದ ನಿಜವಾದ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭ ಹಾನಿ ಪ್ರತಿಬಿಂಬಿಸುತ್ತವೆ ಅಂತ ಅಭಿಪ್ರಾಯ ಪಡುತ್ತೇನೆ.
ನನ್ನ ಜ್ಞಾನ ಹಾಗೂ ನಂಬಿಗೆಯ ಪ್ರಕಾರ ಲೆಕ್ಕ ಪರಿಶೋಧನೆಗೆ ಅವಶ್ಯವಾದ ಮಾಹಿತಿ ಹಾಗೂ ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇನೆ.
ಸಂಘದ ಲೆಕ್ಕ ಪರಿಶೋಧನಾ ಕಾಲಕ್ಕೆ ಕಂಡುಬಂದಂತೆ ಸಂಘದಲ್ಲಿ ಸರಿಯಾದ ಲೆಕ್ಕ ಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.

(39) ಕಡ್ಡಾಯ ಲಗತ್ತುಗಳು :	
1. ಜಮಾ ಖರ್ಚು ತಃಖ್ತೆ	ಲಗತ್ತಿಸಿದೆ
2. ಲಾಭ–ಹಾನಿ ತಃಖ್ತೆ	ಲಗತ್ತಿಸಿದೆ
3. ಆಸ್ತಿ–ಜವಾಬ್ದಾರಿ ತಃಖ್ತೆ	ಲಗತ್ತಿಸಿದೆ
4. ಕುಳುವಾರು ಪಟ್ಟಿಗಳು, ದೃಢೀಕರಣಗಳು, ಬ್ಯಾಂಕ್ ಸಮನ್ವಯ ತಃಖ್ತೆ	ಲಗತ್ತಿಸಿದೆ
5. ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆಯ ಛಾಯಾ ಪ್ರತಿಯನ್ನು ಲೆಕ್ಕ ಪರಿಶೋಧಕರು ದೃಢೀಕರಿಸಿ ಕಡ್ಡಾಯವಾಗಿ ವರದಿಗೆ ಲಗತ್ತಿಸತಕ್ಕದ್ದು.	ಲಗತ್ತಿಸಿದೆ

M/s. B P S S Y & Co
ಚಾರ್ಟರ್ಡ್ ಅಕೌಂಟೆಂಟ್ಸ್,
FRN : 012443S

ಸಿಎ. ಪಂಪಣ್ಣ ಬಿ.ಇ
ಪಾಲುದಾರರು, MN: 220424
UDIN: 25220424BMLWMF7573

ಸ್ಥಳ : ಬೆಂಗಳೂರು
ದಿನಾಂಕ : 12.06.2025